# ಅಪರಂಜಿ

**ತಿಳಿನಗೆಯ ಕಾರಂಜಿ** **ಜುಲೈ 2019**

ಈ ಜುಲೈ ತಿಂಗಳು ಏನೂ ಪ್ರಯೋಜನವಿಲ್ಲ.
ಒಂದಾದರೂ ರಜೆ ಬೇಡವೇ?




ಬಿಡಿ ಪ್ರತಿ: ರೂ.10.0

**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ: ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ



# ಅಪರಂಜಿ

**ತಿಳಿನಗೆಯ ಕಾರಂಜಿ**

**ಸಂಪುಟ 36**

**ಸಂಚಿಕೆ - 10**

**ಜುಲೈ - 2019**

## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಮರೆಗುಳಿ ಮಹಾನುಭಾವರು | ಎಚ್. ಶಾಂತರಾಜ ಐತಾಳ | 7 |
| ಒಂದು ಪೇಚಿನ ಪ್ರಸಂಗ | ಪ್ರಭಣ್ಣ | 10 |
| ಭಲೇ ಮಲ್ಲೇಶ್ವರ | ಸಿ.ಆರ್. ಸತ್ಯ | 12 |
| ಕರಡಿಯೂ, ಜಾಮೂನೂ | ಸೂರಿ ಹಾರ್ದಳ್ಳಿ | 14 |
| ಸಮರ ಸಾರಿದುವು..... | ಪ್ರೇಮಾಭಟ್ | 17 |
| ತುಂತುರು | ದಂನಆ | 19 |
| ಸೀಳೋದ್ ಸೀಳ್ರಿ... | ಶ್ರೀನಾಥ್ ಭಲ್ಲೆ | 20 |
| ಈ ಗುಟ್ಟು ನಿನ್ನಲ್ಲೇ ಇರಲಿ | ಎಚ್.ಅರ್.ಹನುಮಂತ ರಾವ್ | 24 |
| ಟಿ.ವಿ. ಸುಖ | ಸಂಪಟೂರು ವಿಶ್ವನಾಥ್ | 33 |
| ಹಾಸ್ಯ ಡಿ.ವಿ.ಜಿ ದೃಷ್ಟಿಯಲ್ಲಿ | ಸುಕೇಶವ | 34 |
| ಗಂಡವಳೀ ತಾತಾ. . . | ಎಚ್.ಗೋಪಾಲಕೃಷ್ಣ | 36 |


**ವ್ಯಂಗ್ಯಚಿತ್ರ : ಮುಖಪುಟ – ಜಿ.ಎಸ್. ನಾಗನಾಥ್**

*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. *ಸಂಪರ್ಕ* : email: koravanjiaparanji@gmail.com ದೂ: 9845264304

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



ಕೃತಕ ಬುದ್ಧಿಮತ್ತೆ ಕ್ಷೇತ್ರ : ನೂರು ಕೋಟಿ ಡಾಲರ್
ಮಾರುಕಟ್ಟೆ ಸೃಷ್ಟಿ – ಪತ್ರಿಕೆ

ಅಂಗಂದ್ರೇನ್ ಸಾರ್?

★★★

ಗಂಗೆಯಲ್ಲಿ ಬ್ಯಾಕ್ಟೀರಿಯಾ ಮಟ್ಟ ಹೆಚ್ಚಳ – ಪತ್ರಿಕೆ

ರೋಗಾಣುಗಳಿಗೆ ಅಂಕೆ ಇಲ್ಲ, ಶಿಕ್ಷೆ ಇಲ್ಲ!!

★★★★

ಸೂರತ್: ಕಾನೂನು ಬಾಹಿರ ಮಹಡಿ ನಿರ್ಮಾಣ – ಸುದ್ದಿ

''ಅಕ್ರಮ – ಸಕ್ರಮ'' ಅಂತ ನಾಳಿನ ಸುದ್ದಿ!?

★★★★

ಗೋಯಲ್ ವಿದೇಶ ಪ್ರಯಾಣಕ್ಕೆ ತಡೆ – ಮುಂಬೈ ಸುದ್ದಿ

'ನೋ ಗೋ' ಅಂದಿರಬೇಕು!!

★★★★

ನಾಲ್ಕನೇ ಶನಿವಾರವೂ ರಜೆ – ರಾಜ್ಯ ಸರಕಾರ

ಅದು ಗ್ರಹಚಾರ!!

★★★

ವೈಟ್ ಟಾಪಿಂಗ್ : ಸವಾರರು ಹೈರಾಣ – ಬೆಂಗಳೂರು ಸುದ್ದಿ

ವೈಟ್ ಟಾಪಿಂಗ್ ಕಾಮಗಾರಿಯಲ್ಲಿ ಬ್ಲಾಕ್ ಟಿಪ್ಪಿಂಗ್
ಎಷ್ಟಿರಬಹುದೋ!?

★★★★

ಇಂಡಿಯಾ ಪಾಕಿಸ್ತಾನ್ ಮ್ಯಾಚ್‌ನಲ್ಲಿ ಸರ್ಫಾಜ್ ಅಹಮದ್
ಆಕಳಿಕೆಯೇ ''ಯಾನ್ ಆಫ್ ದ ಮ್ಯಾಚ್'' ಅನ್ನಬಹುದೇನೋ!!

★★★★

## ನಮ್ಮ ನಿಮ್ಮಲ್ಲಿ

**ಶಿವಕುಮಾರ್**

''ಒಂದು ಕಾಲಯಾನ ಯಂತ್ರದಲ್ಲಿ ಭೂತಕಾಲಕ್ಕೆ ಪ್ರಯಾಣ ಮಾಡಲು ಸಾಧ್ಯವಾಗುವುದಿದ್ದರೆ, ನೀನು ಯಾವ ಕಾಲಘಟ್ಟಕ್ಕೆ ಪ್ರಯಾಣ ಮಾಡಲು ಇಷ್ಟಪಡುತ್ತೀಯ?'' ಅಂತ ನಾನು ರಶ್ಮಿಯನ್ನು ಕೇಳಿದೆ. ಅವಳು ಒಂದು ಸ್ವಲ್ಪವೂ ಹಿಂಜರಿಯದೇ, ''ನನಗೆ ಮನುಷ್ಯರ ಗೊಡವೆಯೇ ಬೇಡ. ಡೈನೋಸಾರ್‌ಗಳು ಇದ್ದ ಕಾಲಕ್ಕೆ ಹೋಗಿ ಆ ದೈತ್ಯ ಉರಗಗಳನ್ನು ನೋಡುಕ್ಕೆ ನನಗೆ ತುಂಬಾ ಇಷ್ಟ ಸರ್'' ಅಂತ ಹೇಳಿದಳು. ಪಕ್ಕದಲ್ಲೇ ಕೂತಿದ್ದ ರಾಮಸ್ವಾಮಿ ಪ್ರೊಫೆಸರ್, ''ನಾನು ಆರ್ಯಭಟನಿದ್ದ ಕಾಲಕ್ಕೆ ಹೋಗಿ ಅವನೊಂದಿಗೆ ಖಗೋಳದ ವೈಚಿತ್ರ್ಯಗಳನ್ನು ಚರ್ಚಿಸ್ತೇನೆ'' ಅಂತ ಹೇಳಿದರು.

ನಾವು ಮೂರು ಜನ ಅಂದು ಕುಪ್ಪಂ ನಲ್ಲಿರುವ ಅಗಸ್ತ್ಯ ಕ್ಯಾಂಪಸ್‌ಗೆ ಕಾರಿನಲ್ಲಿ ಹೋಗುತ್ತಿದ್ದೆವು. ಕಳೆದ ಹಲವಾರು ತಿಂಗಳುಗಳ ಪರಿಶ್ರಮದಿಂದ ರಶ್ಮಿ ಮತ್ತು ನಾನು, ಮಕ್ಕಳಿಗೆ ಜೀವಶಾಸ್ತ್ರವನ್ನು ಪರಿಚಯಿಸುವ ಉದ್ದೇಶದಿಂದ ಜೀವಕೋಶದಲ್ಲಿರುವ ಡಿಎನ್‌ಎ ಕಣದ ಮಾಡೆಲ್ ಒಂದನ್ನು ನಿರ್ಮಿಸಿ ಕುಪ್ಪಂ ಸೆಂಟರಿನಲ್ಲಿ ಪ್ರತಿಷ್ಠಾಪಿಸಿದ್ದೆವು. ರಾಮಸ್ವಾಮಿಯವರಿಗೆ ಅದನ್ನು ತೋರಿಸಿ ಅದರ ಬಗ್ಗೆ ಅವರ ಅಭಿಪ್ರಾಯವನ್ನು ಪಡೆಯುವುದು ನಮ್ಮ ಇಂದಿನ ಪಯಣದ ಉದ್ದೇಶವಾಗಿತ್ತು.

ಹಿಂದೊಮ್ಮೆ ರಾಶಿಯವರು, ಶ್ರೀರಂಗರವರಿಗೆ ಇದೇ ಪ್ರಶ್ನೆಯನ್ನು ಕೇಳಿದ್ದಾಗ ಅವರು, ಯಾಜ್ಞವಲ್ಕ್ಯನ ಆಶ್ರಮಕ್ಕೆ ಹೋಗಿ ಅವನ ಶಿಷ್ಯ ವೃಂದದೊಡನೆ ಇರುವ ಆಶೆಯನ್ನು ವ್ಯಕ್ತ ಪಡಿಸಿದ್ದರಂತೆ. ರಾಶಿ ಎಂದೊಡನೆ ಕೊರವಂಜಿ ನೆನಪಿಗೆ ಬಂದು, ಅದರಿಂದ ನೆನಪು ಅಪರಂಜಿಗೆ ಹಾರಿ ಅಲ್ಲಿಂದ ಅದರಲ್ಲಿ ಪ್ರಕಟವಾಗಿದ್ದ ನನ್ನ ಶರಲೇಖನ ಕಥೆ ''ನೋವಿಕೋವ್ ಕಂಜೆಕ್ಚರ್ ಪ್ರಸಂಗ'' ನೆನಪಿಗೆ ಬಂತು.

ನಾನು ನನ್ನ ಸಹಪ್ರಯಾಣಿಕರನ್ನು ಕುರಿತು, ''ಕಾಲಯಾನದ ಥೀಮ್ ಮೇಲೆ ನಾನೊಂದು ಶರಲೇಖನ ಪ್ರಸಂಗ ಬರೆದಿದ್ದೆ.....''. ಎಂದು ಹೇಳಲು ಪ್ರಾರಂಭಿಸುತ್ತಿದ್ದಂತೆ, ರಶ್ಮಿ ಬಾಯಿಹಾಕಿ, ''ಯಾರಿದು ಶರಲೇಖ?'' ಅಂತ ಕೇಳಿದಳು. ರಾಮಸ್ವಾಮಿ ನನ್ನ ಪರವಾಗಿ ಅವನ ಪ್ರವರವನ್ನು ರಶ್ಮಿಗೆ ತಿಳಿಯಹೇಳಿದನಂತರ ರಶ್ಮಿ ''ಓಹೋ ಕಾನನ್ ಡಾಯ್ಲ್‌ನ ಷರ್ಲಾಕ್ ಹೋಮ್ಸ್ ಕನ್ನಡನಾಡಿನಲ್ಲಿ ತನ್ನ ಸಾಹಸಗಳನ್ನ ಶುರುಮಾಡಿದ್ದಾನೋ? ಖಂಡಿತ ಹೇಳಿ ಸರ್, ಪತ್ತೇದಾರಿ ಕಥೆಗಳೆಂದರೆ ನನಗೆ ಇಷ್ಟ'' ಅಂತ ಹೇಳಿದಳು.

ನಾನು ಶುರು ಮಾಡಿದೆ. ''ಶರಲೇಖ ಮತ್ತು ಅವನ ಗೆಳೆಯ ವತ್ಸನ ಒಮ್ಮೆ ತಮ್ಮ ಡ್ರಾಯಿಂಗ್ ರೂಮಿನಲ್ಲಿ ಕುಳಿತಿದ್ದಾಗ, ಭವಿಷ್ಯಕಾಲದಿಂದ ಒಬ್ಬ ಕಾಲಯಾತ್ರಿ ಇವರ ಮುಂದೆ ಪ್ರತ್ಯಕ್ಷನಾಗುತ್ತಾನೆ. ಅವನ ಹೆಸರು ಕೇಶವರಾವ್. ವಿಜ್ಞಾನಿಯಾಗಿದ್ದ ಆತ ಕಾಲಯಾನ ಯಂತ್ರವೊಂದನ್ನು ಕಂಡುಹಿಡಿದು ಅದನ್ನು ಪರೀಕ್ಷಿಸುವ ಸಲುವಾಗಿ ಈ ಕಾಲಯಾತ್ರೆಯನ್ನು ಕೈಗೊಂಡು, ವರ್ಮ್‌ಹೋಲ್ ಮೂಲಕ ಇಲ್ಲಿಗೆ ಬಂದಿರ್ತಾನೆ. ಶರಲೇಖ ಅವನನ್ನು ಕುರಿತು ಇಲ್ಲಿ ನಮ್ಮಲ್ಲಿಗೆ, ಈ ಕಾಲಘಟ್ಟಕ್ಕೆ ಯಾವ ಉದ್ದೇಶದಿಂದ ಬಂದಿರಿ ಅಂತ ಕೇಳಿದಾಗ,

''ಇದೊಂದು ಬಹಳ ಖಾಸಗೀ ವಿಷಯ. ನಾನು ನಿಮ್ಮ ಈ ಕಾಲದಲ್ಲಿದ್ದಾಗ ನನಗೆ ಇಪ್ಪತ್ತೈದು ವಯಸ್ಸು. ಇನ್ನೂ ಮದುವೆ ಆಗಿರಲಿಲ್ಲ. ಇದೇ ಇಸವಿ ಅಕ್ಟೋಬರ್ ಹತ್ತರಂದು ನನಗೆ ಮದುವೆ ಆಯಿತು. ಆಗಿನಿಂದ ಕಳೆದ ಮೂವತ್ತು ವರ್ಷಗಳಿಂದಲೂ ಮನೆಯಲ್ಲಿ ಸಾಮರಸ್ಯ ಇಲ್ಲ. 'ನಿಮ್ಮಪ್ಪ ಮದುವೆಗೆ ಒಪ್ಪಿ ಬರೆದ ಕಾಗದ ನಮ್ಮಪ್ಪನಿಗೆ ತಲುಪೋದು ಒಂದು ದಿನ ತಡ ಆಗಿದ್ದರೆ ಬೇರೆ ಒಬ್ಬ ಯಶಸ್ವಿ ಉದ್ಯಮಿಯನ್ನು ಮದುವೆಯಾಗಿ ಸುಖವಾಗಿರ್ತಿದ್ದೆ ಎಲ್ಲಾ ನನ್ನ ಹಣೇಬರಹ' ಅಂತ ನನ್ನ ಪತ್ನಿ ಯಾವಾಗಲೂ ಗೊಣಗುತ್ತಿರ್ತಾಳೆ. ನನಗೂ ಸಾಕಾಗಿ ಹೋಗಿದೆ. ಹಾಗಾಗಿ ಈ ವರ್ಮ್‌ಹೋಲ್‌ನ ಪರೀಕ್ಷೆಗೆ ಒಳಪಡಿಸುವ ಯೋಚನೆ ಬಂದಾಗ ನಿಮ್ಮ ಬಳಿ ಬಂದು ನನ್ನ ಸಂಸಾರ ತಾಪತ್ರಯಾನೆಲ್ಲಾ ಒಂದೇ ಏಟಿಗೆ ಪರಿಹರಿಸಿಕೊಳ್ಳುವ ಯೋಚನೆಯೂ ಹೊಳೀತು. ಆ ಪರಿಹಾರಕ್ಕೆ ನಿಮ್ಮ ಸಹಾಯ ಅಗತ್ಯ. ಹಾಗಾಗಿ ನಿಮ್ಮ ಬಳಿ ಬರಲು ಮನಸ್ಸು ಮಾಡಿದೆ.'' ಅಂತ ಹೇಳಿದ ಕೇಶವರಾವ್.

ಇದನ್ನೆಲ್ಲಾ ಹೇಳುತ್ತಿದ್ದಾಗ ನಾನು ರಶ್ಮಿಯ ಮುಖಭಾವವನ್ನು ಗಮನಿಸುತ್ತಿದ್ದೆ. ಕೇಶವರಾಯನ ಈ ಮಾತು ಕೇಳುಗರ ಮುಖದಲ್ಲಿ ಒಂದು ಮಂದಹಾಸವನ್ನಾದರೂ ಮೂಡಿಸಬೇಕಾಗಿತ್ತು. ಬದಲಿಗೆ ರಶ್ಮಿಯ ಮುಖ ಗಂಭೀರವಾಗಿತ್ತು. ಯಾಕೆ ಈ ಹುಡುಗಿ ನಗಲಿಲ್ಲ, ಬಹುಶಃ ಅರ್ಥವಾಗಲಿಲ್ಲವೇನೋ ಅಂದುಕೊಂಡು, ''ರಶ್ಮಿ ನಾನು ಹೇಳಿದ್ದು ಅರ್ಥ ಆಯಿತು ತಾನೇ?'' ಅಂತ ಪ್ರಶ್ನಿಸಿದೆ.

ರಶ್ಮಿ ''ಖಂಡಿತ ಅರ್ಥವಾಯಿತು. ಅರ್ಥವಾಗದೇ ಏನು? ಯಾವಾಗಲೂ ಹೆಂಗಸರನ್ನೇ ಜೋಕುಗಳ ಗುರಿಯನ್ನಾಗಿ ಮಾಡೋ ಈ ಪುರುಷ ಪ್ರಧಾನ ಸಮಾಜದಲ್ಲಿ ಇಂಥ ಜೋಕುಗಳು ಹೇರಳವಾಗಿರುತ್ತವೆ. ವಾಟ್ಸಪ್ ಗಳಂತೂ ಇಂತಹ ಜೋಕುಗಳಿಗೆ ಹೇಳಿ ಮಾಡಿಸಿದಂತಹ ತಾಣ. ಇಲ್ಲಿ ನೋಡಿ ಈಗ ತಾನೆ ಬಂದ ಜೋಕು'' ಎಂದು ಹೇಳುತ್ತಾ ತನ್ನ ಸ್ಮಾರ್ಟ್ ಫೋನನ್ನು ನನ್ನ ಕೈಗಿತ್ತಳು. ಇಂಗ್ಲೀಷಿನಲ್ಲಿದ್ದ ಈ ಜೋಕಿನ ಮೊದಲ ಭಾಗವನ್ನು ಇಲ್ಲಿ ಕನ್ನಡಿಸಿರುವೆ.

ದಂಪತಿಗಳು ಕ್ರಿಕೆಟ್ ಮ್ಯಾಚ್ ನೋಡುತ್ತಿರುತ್ತಾರೆ.

ಹೆಂಡತಿ : ಅದು ಬ್ರೆಟ್ ಲೀ ನಾ?

ಗಂಡ : ಅಲ್ಲ ಅದು ಕ್ರಿಸ್ ಗೇಲ್. ಬ್ರೆಟ್ ಲೀ ಬೋಲರ್

ಹೆಂಡತಿ : ಬ್ರೆಟ್ ಲೀ ತುಂಬಾ ಚಾಲೂಕು. ಅವನ ತಮ್ಮನಂತೆ ಅವನೂ ಸಿನಿಮಾದಲ್ಲಿ ಇರಬೇಕಾಗಿತ್ತು.

ಗಂಡ : ಅವನಿಗೆ ಸಿನಿಮಾದಲ್ಲಿ ನಟಿಸ್ತಿರೋ ತಮ್ಮ ಇಲ್ಲವಲ್ಲಾ

ಹೆಂಡತಿ : ಹಾಗಾದರೆ ಬ್ರೂಸ್ ಲೀ ಯಾರು?

ಹೀಗೇ ಮುಂದುವರಿಯುತ್ತೆ ಸಂಭಾಷಣೆ.

ರಶ್ಮಿ ತನ್ನ ದೃಷ್ಟಿಕೋನವನ್ನು ಬಹು ಸ್ಪಷ್ಟವಾಗಿ ಮಂಡಿಸಿದ್ದಳು. ಅದನ್ನು ನಾನು ಎಷ್ಟರ ಮಟ್ಟಿಗೆ ಒಪ್ಪಿಕೊಳ್ಳಬೇಕು ಎಂಬ ಚಿಂತನೆ ನನ್ನ ಮನವನ್ನು ಬಹುಮಟ್ಟಿಗೆ ಕಾಡಿತು. ಕೇಶವರಾಯನ ಬದಲು ಅವನ ಪತ್ನಿ ಬಂದು ತನ್ನ ಗಂಡ ತನ್ನನ್ನು ಸತಾಯಿಸುವ ಬಗ್ಗೆ

ಹೇಳಿದ್ದರೆ ಅದು ಹಾಸ್ಯವಾಗುವ ಬದಲು ಒಂದು ದಾರುಣ ಕಥೆಯಾಗಿಬಿಡುತ್ತಲ್ಲಾ ಅಂತಲೂ ಅನ್ನಿಸಿತು ನನಗೆ.

ರಶ್ಮಿ ಎತ್ತಿದ ಪ್ರಶ್ನೆಯನ್ನು ಅಷ್ಟು ಸುಲಭವಾಗಿ ತಳ್ಳಿಹಾಕಲು ಸಾಧ್ಯವಿಲ್ಲವೇನೋ. ಹೆಂಡತಿಯ ಪೆದ್ದುತನ, ಹಠಮಾರಿತನ, ಗಯ್ಯಾಳಿತನ ಇವೆಲ್ಲಾ ಅನೂಚಾನವಾಗಿ ನಮ್ಮ ನಗೆಬರಹಗಾರರ ಟೂಲ್ ಕಿಟ್ಟಿನಲ್ಲಿರುವ ಉಪಕರಣಗಳು. ತಮಾಷೆಯೆಂದರೆ ನಮ್ಮ ಮಹಿಳಾ ಲೇಖಕಿಯರೂ (ದ್ವಿರುಕ್ತಿ ಅಂತ ಗೊತ್ತು ರೀ) ಇದೇ ಉಪಕರಣಗಳನ್ನು ಬಳಸಿ ನಗೆ ಸೃಷ್ಟಿಸುತ್ತಿರುತ್ತಾರೆ. ಇದನ್ನೆಲ್ಲಾ ನೋಡಿದರೆ, ಪಾಶ್ಚಾತ್ಯ ದೇಶಗಳಲ್ಲಿ ಇಪ್ಪತ್ತನೆಯ ಶತಮಾನದ ಆದಿ ಭಾಗದಲ್ಲಿ ಮಹಿಳೆಯರಿಗೆ ಮತದಾನದ ಹಕ್ಕನ್ನು ಗಳಿಸಲು ಹಲವು ಪ್ರಗತಿಶೀಲ ಮಹಿಳೆಯರು ಆಂದೋಲನ ನಡೆಸಿದ್ದಾಗ, ಅನೇಕ ಸಂಪ್ರದಾಯಸ್ಥ ಮಹಿಳೆಯರು ಅದರ ಬಗ್ಗೆ ದಿವ್ಯ ನಿರ್ಲಕ್ಷ್ಯವನ್ನು ತೋರಿಸುತ್ತಿದ್ದುದು ನೆನಪಾಗುತ್ತದೆ.

ಒಟ್ಟಿನಲ್ಲಿ ನನ್ನ ಅನಿಸಿಕೆ ಇಷ್ಟು. ನಾವು ಒಂದು ಘಟನೆಯನ್ನು ನಗೆಯ ದೃಷ್ಟಿಯಿಂದ ನೋಡುವಾಗ ನಮ್ಮ ದೃಷ್ಟಿಕೋನ ಮಹಿಳೆಯರ ಬಗ್ಗೆ ಸಂವೇದನಾ ಶೀಲತೆಯಿಂದ ಕೂಡಿದೆಯೇ ಎಂಬುದನ್ನು ಪರಿಶೀಲಿಸುವಂತಾದರೆ ನಮ್ಮ ಬರಹಕ್ಕೆ ಒಂದು ಘನತೆ ಬರಬಹುದು.

ಈ ಲೇಖನವನ್ನು ಬರೆಯುತ್ತಿದ್ದಾಗಲೇ ಭುವನೇಶ್ವರಿಯವರು ನಮ್ಮ ಮನೆಗೆ ಬಂದರು. ಇದಕ್ಕೆ ಪ್ರತಿಕ್ರಿಯಿಸಲು ಅವರನ್ನು ವಿನಂತಿಸಿಕೊಂಡಿದ್ದೇನೆ.

ನೀವೂ ಸಹಾ ಮುಕ್ತ ಮನಸ್ಸಿನಿಂದ ಈ ಚರ್ಚೆಯಲ್ಲಿ ಪಾಲ್ಗೊಳ್ಳಬಹುದು. ■

## ಜೀವನ ಸತ್ಯ

**ಅಬ್ದುಲ್ ಕಲಾಂ**

ಈ ಜಗದಲ್ಲಿ ತಾಯಿಗೆ ಸಮನಾದಂಥ ಸತ್ಯ ಬೇರಾವುದೂ ಇಲ್ಲ

**ಬಡವನಿಗೆ ಯಾರೂ ಸ್ನೇಹಿತರಿರುವುದಿಲ್ಲ**

ಜನರಿಗೆ ಒಳ್ಳೆಯ ಆಲೋಚನೆಗಿಂತ ಒಳ್ಳೆಯ ನೋಟವೇ ಪ್ರಧಾನ

**ಜನರು ಹಣವನ್ನು ಗೌರವಿಸುತ್ತಾರೆ, ಜನರನ್ನಲ್ಲ.**

ನೀವು ಯಾರನ್ನು ಹೆಚ್ಚು ಪ್ರೀತಿಸುತ್ತೀರೋ ಅವರೇ ನಿಮ್ಮನ್ನು ಹೆಚ್ಚು ಘಾಸಿಗೊಳಿಸುತ್ತಾರೆ

**ನೀವು ಸಂತೋಷಭರಿತರಾಗಿರುವಾಗ ಒಳ್ಳೆಯ ಹಾಡನ್ನು ಕೇಳಿ ಆನಂದಿಸುತ್ತೀರ. ಆದರೆ ದು:ಖದಲ್ಲಿರುವಾಗ ಸಾಹಿತ್ಯವನ್ನು ಅರ್ಥ ಮಾಡಿಕೊಳ್ಳುತ್ತೀರ**

ಜೀವನದಲ್ಲಿ ಎರಡು ಸಂಗತಿಗಳು ನಿಮ್ಮನ್ನು ಗುರುತಿಸುತ್ತವೆ. ಒಂದು ನಿಮ್ಮಲ್ಲಿ ಏನೂ ಇಲ್ಲದಿರುವಾಗ ನಿಮ್ಮ ತಾಳ್ಮೆ ಮತ್ತು ಎರಡನೆಯದು ನಿಮ್ಮಲ್ಲಿ ಎಲ್ಲವೂ ಇರುವಾಗ ನಿಮ್ಮ ನಡವಳಿಕೆ.



# ಮೂಲಧನ ದೇಣಿಗೆ

ಆತ್ಮೀಯರೇ,

ಅಪರಂಜಿ ಪತ್ರಿಕೆಯ ಭವಿಷ್ಯವನ್ನು ಒಂದು ಸದೃಢ ತಳಹದಿಯ ಮೇಲೆ ನಿಲ್ಲಿಸುವ ಸಲುವಾಗಿ ಒಂದು ಮೂಲಧನ ದೇಣಿಗೆ ಅಥವಾ Corpus Donation ಅನ್ನು ಸಂಗ್ರಹಿಸುವ ಉದ್ದೇಶದಿಂದ ಹಂತ ಹಂತವಾಗಿ ನಮ್ಮ ಎಲ್ಲಾ ಹಿತೈಷಿಗಳನ್ನೂ ಸಂಪರ್ಕಿಸುತ್ತಿದ್ದೇವೆ. ಅನೇಕರು ಬಹು ಔದಾರ್ಯದಿಂದ ಮುಂದೆ ಬಂದು ದೇಣಿಗೆ ನೀಡಿದ್ದಾರೆ. ಇನ್ನಿತರ ಅನೇಕರು ಕ್ಷಿಪ್ರದಲ್ಲಿಯೇ ದೇಣಿಗೆ ನೀಡುವ ಆಶ್ವಾಸನೆ ನೀಡಿದ್ದಾರೆ.

ಈಗಾಗಲೇ ದೇಣಿಗೆ ನೀಡಿರುವ ಎಲ್ಲರಿಗೆ ಅಪರಂಜಿ ''ನಿಮ್ಮಿಂದ ಮಹದುಪಕಾರವಾಯಿತು'' ಎಂದು ಹೇಳಬಯಸುತ್ತಾಳೆ.

ಇದೊಂದು ಆನ್‌ಗೋಯಿಂಗ್ ಪ್ರಕ್ರಿಯೆ. ಇದಕ್ಕೆ ಎಲ್ಲರ ಸಹಕಾರ ಅತ್ಯಗತ್ಯ. ದೇಣಿಗೆ ನೀಡಿರುವ ಎಲ್ಲ ಚಂದಾದಾರರನ್ನೂ ಆಜೀವ ಪೋಷಕ ಚಂದಾದಾರರೆಂದು ಪರಿಗಣಿಸಲಾಗುವುದು.

ಒಟ್ಟಿನಲ್ಲಿ, ಅಪರಂಜಿಯನ್ನು ಕಾಡಿಗೆ ಕಳುಹಿಸದೇ ನಾಡಿನಲ್ಲೇ ಉಳಿಸಿಕೊಂಡು ನಿರಂತರವಾಗಿ ನಿಮ್ಮೆಲ್ಲರ ಮನೆಗೆ ಬಂದು ರಂಜಿಸುವಂತೆ ಮಾಡುವುದು ನಮ್ಮ ಆಶಯ. ಈ ನಿಟ್ಟಿನಲ್ಲಿ ನಾವು ಕೈಗೊಂಡಿರುವ ಹೆಜ್ಜೆಗಳಿಗೆ ನಿಮ್ಮೆಲ್ಲರ ಮುಕ್ತ ಸಹಕಾರ ಸಿಗುವುದರಲ್ಲಿ ನಮಗೆ ನಂಬಿಕೆಯಿದೆ.

ತಮ್ಮ ವಿಶ್ವಾಸಿಗಳು

**ಎಂ. ಶಿವಕುಮಾರ್**
ಸಂಪಾದಕರು ಅಪರಂಜಿ ಮಾಸಪತ್ರಿಕೆ

**ಉಲ್ಲಾಸ್ ರಾಯಸಮ್ ಬೀಚಿ**
ಮ್ಯಾನೇಜಿಂಗ್ ಟ್ರಸ್ಟಿ, ಕೊರವಂಜಿ ಅಪರಂಜಿ ಟ್ರಸ್ಟ್

# ಮರೆಗುಳಿ ಮಹಾನುಭಾವರು

**–ಎಚ್. ಶಾಂತರಾಜ ಐತಾಳ**

ಆ ಊರ್‍ನಾಗ ಅಂದ್ರ ಒಂಟಿ ಬೆನ್ನೂರ್‍ನಾಗ ದವಾಖಾನಿ ಇದ್ದದ್ದೇ ಒಂದು ಬಿಡ್ರಿ. ಅದ್ರಾಗ ಈಟುದ್ದ ಡಿಗ್ರಿ ತಗೊಂಡ ಡಾಕ್ಟರ ಯಾವನೂ ಇದ್ದಿದ್ದಿಲ್ರಿ. ಆರ್.ಎಂ.ಪಿ ವೈದ್ಯ–ಗುಳಗಿ ಬೇವಿನ ಮರದ–ಅಂತ ಒಬ್ನೇ ಡಾಕ್ಟರ ಇದ್ದ ತೊಗೊರಿ.ಈ ಡಾಕ್ಟರಪ್ಪ ಮರಗೋಳಿ ಮನಸ್ಯಾ. ಹಿಂಗಾಗಿ ಏನು ತಪಾಸಣೆ ಮಾಡ್ಯಾನ ಅನ್ನೂದನ್ನ ಗುಳಗಿ, ಕಷಾಯ ಕೊಡೂ ಮುಂದ ಮರ್ತುಬಿಡತಿದ್ದ. ಆಮ್ಯಾಗ ಬಿಲ್ ಮಾಡೂ ಮುಂದ ಏನೇನು ಔಷಧಿ ಕೊಟ್ಟೇನಿ ಅನ್ನೂದನ್ನೂ ಮರೀತಿದ್ದ ಈ ಡಾಕ್ಟರಪ್ಪ.

ಆದ್ರ ಈ ಡಾಕ್ಟರ ಒಂದು ಮಾತು ಹೇಳಾದ ಮರೀತಿರ್ಲಿಲ್ಲ ನೋಡ್ರಿ! ಯಾವನೇ ರೋಗಿ ಬರ್ಲಿ, ರೋಗ ಯಾವುದೇ ಇರವಲ್ಲದ್ಯಾಕ, ಈ ಡಾಕ್ಟರ ಮಹಾಶಯ ಫಸ್ಟಕ್ಕ ಹೇಳಿ ಬಿಡತಿದ್ದ' ನೋಡ್ರಪ್ಪಾ ಮುಂಜಾನೆ ಎದ್ದ ಕೂಡ್ಲೇ ಲದ್ದಿ, ಮಧ್ಯಾನಕ್ಕ ಮುದ್ದಿ, ರಾತ್ರಿ ಆತಪಾ ಅಂದ್ರ ನಿದ್ದಿ–ಇವು ಮೂರೂಇದ್ರೆ, ಯಮಧರ್ಮರಾಯ ಸೈತ ಹಂತ್ಯಾಕ ಬರಂಗಿಲ್ಲ, ತಿಳ್ಕಾ'

ಈ ಡಾಕ್ಟರ ಗುಳಗೀ ಬೇವಿನ ಮರದಅದಾರಲ್ರಿ–ಅವರ ಹತ್ರ ಒಂದು ಕಾರು ಮೋರಿಸ್ ಮೈನರ್–ಇತ್ರಿ.ಒಂದು ಸರ್ತಿ ಈ ಡಾಕ್ಟರಪ್ಪ ತನ್ನ ಕಾರು ಲಾಪತಾ ಆಗೈತಿ. ಅದನ್ನ ಯಾರೋ ಕದ್ದೊಯ್ದಿದ್ದಾರೆ ಅಂತ ಪೋಲೀಸ್ ಕಂಪ್ಲೇಟ್ ಕೊಟ್ಟಾರ್ರಿ. ಒಂಟಿ ಬೆನ್ನೂರ್‌ನಾಗ ಈ ಮಾಡೆಲ್‌ಕಾರು ಒಂದೇ ಇತ್ತು. ಹಿಂಗಾಗಿ ಪೋಲಿಸ್ನೋರು ಹುಡುಕಾಕ ಹತ್ತಿದ್ರು. ಮೂರು ದಿನ ಆದ ಮ್ಯಾಗೆ ಬೆಳಗಾಂವಿ ಸಿಟಿ ವಳಗ ಒಂದು ಗ್ಯಾರೇಜದಾಗ ಈ ಕಾರು ಛಲೋತ್ನಾಗ ನಿದ್ದೀ ಮಾಡ್ತಾ ನಿಂತಿತ್ತರಿ. ಪೋಲೀಸ್ನೋರು ಏನ ಮಾಡ್ತಾರ? ಗ್ಯಾರೇಜ ಮಾಲಿಕನ್ನ ಒದ್ದು ವಿಚಾರಿಸಾಕ ಹತ್ಯಾರ. ಆಗ ಅಂವ ಅಂತಾನ್ರಿ–'ಇಲ್ರೀ ಸಾಹೇಬ್ರ. ಈ ಕಾರು ದಾರಿ ಮ್ಯಾಗಕೆಟ್ಟು ನಿಂತೈತಿ. ಗ್ಯಾರೇಜಿಗೆ ಒಯ್ದು ಒಂದು ವಾರದ್ವಳಗೆ ದುರಸ್ತಿ ಮಾಡಿ ಬೇರೆ ಬಣ್ಣ ಹ್ವಡದ್ ಕೊಡಪ್ಪಾ ಅಂತ ಆ ಡಾಕ್ಟರ್ ಸಾಹೇಬ್ರೇ ಹೇಳಿಯಾರ್ರಿ–ನಾವು ತಾಬಡತೋಬ ಆ ಗಾಡಿನ ಇಲ್ಲಿಗೆ ಎಳಕೊಂಡು ಬಂದು ರಿಪೇರಿ ಮುಗಿಸೀವ್ರಿ–ಇನ್ನ ಬಣ್ಣ ಹಾಕೋದು ಬಾಕಿ ಐತ್ರಿ–ನಾವು ಕದ್ದುತಂದಿಲ್ರಿ' ಅಂತ ಮ್ಯಾಗಿಂದ ಮ್ಯಾಗೆ ಬೇಡ್ಕೋತಾರ್ರಿ. ಪೋಲಿಸರು ಕಂಪ್ಲೇಟ್ ಕೊಟ್ಟ ಡಾಕ್ಟರನ್ನೇ ಕರೆಸಿ ಕೇಳ್ತಾರ್ರಿ–'ನೋಡ್ರಿ ಈ ಗಾಡಿ ನಿಮ್ದು ಹೌದಿಲ್ಲೊ?'ಅಂತ.ಡಾಕ್ಟರಪ್ಪ ನೋಡೇ ನೋಡ್ತಾರೆ– 'ಅಲಲೆ–ನನ್ನ ಕಾರು ಇಲ್ಲಿ ಹ್ಯಾಂಗ ಬಂತೂ'ಅನ್ನಾಕ ಹತ್ತತಾರ. ಅಷ್ಟರಾಗ ಗ್ಯಾರೇಜ ಮಾಲಿಕ ಬಂದು' ಯಾಕ್ರೀ ಡಾಕ್ಟರ, ಗಾಡೀ ಗ್ಯಾರೇಜಿಗೆ ಒಯ್ರಿ ಅಂತ ನನಗೆ ಫೋನ್ ಮಾಡಿ ಹೇಳೀರಲ್ಲಾ– ಖಬರಿಲ್ಲೇನು–ನನಗ ಈ ಖಾಕಿ ಮಂದಿ ಅದೆಷ್ಟು ತ್ರಾಸ ಕೊಟ್ಟಾರ ಗೊತ್ತೈತೇನು? ನಿಮ್ಮ ಮರೆವಿನ ರೋಗಕ್ಕ ಮೊದಾಲು ಇಲಾಜ ಮಾಡ್ರಿ. ಹಗಲೆಲ್ಲ ನಮಗ ತ್ರಾಸ ಕೊಡಬ್ಯಾಡ್ರಿ'–ಅಂದೇ ಬಿಟ್ನಂತ. ಅದಕ್ಕೆ ಡಾಕ್ಟರು 'ಮರೆತು ಬಿಟ್ನಪ್ಪೋ ಮಾರಾಯಾ– ಬ್ಯಾಸರಾ ಮಾಡ್‌ಬ್ಯಾಡಾ ಅಂತ ಅಂದ್ರು. ಗ್ಯಾರೇಜು ಮಂದಿ, ಖಾಕೀವಾಲಾಗಳೆಲ್ಲ

ಗಪ್ಪಾಗಿ ಬಿಟ್ರಂತ. ಈ ಗುಳಗೀ ಡಾಕ್ಟರ ಮರೆವಿಂದ ಯಾವುದೋ ಜಡ್ಡು ವಾಸಿ ಮಾಡಾಕ ಇನ್ನ ಯಾವುದೋ ಗುಳಗಿ ಕೊಟ್ಟ ಬಿಡತಿದ್ರು.

ಒಂದಿನ ಸಂಜಿ ಮುಂದ ಒಬ್ಬಾಂವ ಬಂದು ಹೇಳಾಕತ್ತಿದ್ದ ಅಲ್ರೀ ಡಾಕ್ಟರ–ನನಗ ತೆಲಿನೋವು ಅಂತ ಹೇಳೀನಿ. ಆದ್ರ ನೀವು ಭೇದಿ ಆಗಾಕ ಗುಳಗೀ ಕೊಟ್ಟಾಂಗ ಕಾಣತತಿ'–ಅಂತ.

ಅದಕ್ಕ ಗುಳಗೀ ಡಾಕ್ಟರ ಹೇಳ್ತಾರ 'ಹಿಂಗಾ! ಅಗ್ದಿ ಛಲೋ ಆತು ಬಿಡು! ಹೊಟ್ಟೆಕ್ಲೀನ ಆತಪಾ ಅಂದ್ರ ತೆಲಿನೋವು, ಮೈನೋವು ಎಲ್ಲ ಘಾಯಬ್ ಆಗತಾವು. ಅಂದ್ಹಾಂಗ ನಿನಗ ಭೇದಿ ಗುಳಗಿ ಕೊಟ್ಟೇನಿ ಹೌದಲ್ಲೋ?ಇನ್ನಾ ಪೌಣೆಚಾರ್ ರೂಪಾಯಿ ಆಗತಿ ನೋಡಪಾ'ಎನ್ನುತ್ತಾ ಬಾಕಿ ರೊಕ್ಕಾ ವಸೂಲು ಮಾಡತಾರ!

ಒಂಟೆ ಬೆನ್ನೂರು ಅಂದ್ರ ಅತ್ತಾಗ ಹಳ್ಳೀನೂ ಅಲ್ಲ ಇತ್ತಾಗ ಪ್ಯಾಟೀನೂ ಅಲ್ಲ–ಹಂಗೈತ್ರಿ. ಇನ್ನು ಇದೇ ತಾಲೂಕದಾಗ ಕುರಿದೊಡ್ಡಿ ಅಂತ ಒಂದು ಊರು ಐತ್ರಿ. ಸೋಳವೀ ಶತಮಾನದ ಹಳ್ಳಿ ಇದ್ದಂಗೈತಿ. ಒಂದು ಹೋಟೇಲು ದುಕಾನು, ಶೇಂದಿ, ಶರಾಬು, ಒಂದೂ ಕೇಳ್‌ಬ್ಯಾಡ್ರಿ. ಒಂದಿಪ್ಪತ್ತು ಜೋಪಡಿ–ಅದರಾಗ ಒಂದೀಟು ಮಂದಿ ಬೇರೆ ಕಡೀಗ್ ಹೋಗಿ ದಗದಾ ಮಾಡಿ ರಾತ್ರಿ ಹೊಳ್ಳಿ ಬರ್ತಾರ್ರಿ. ಅಲ್ಲಿಯಂವ ವೆಂಕಪ್ಪ ಮನೀಹಾಳಗ ಜಡ್ಡಾತ್ರಿ. ಇನ್ನೇನು ಬದುಕಾದು ಕಷ್ಟ ಅನ್ನಿಸ್ತು. ಗುಳಗೀ ಡಾಕ್ಟರನ್ನು ಕರಕೊಂಡು ಬಂದರ್ರಿ ಅಲ್ಲಿ ಮಂದಿ. ಡಾಕ್ಟರ ಸಾಹೇಬ್ರು ಮನೀಹಾಳನ್ನ ಪರೀಕ್ಷಾ ಮಾಡಿ, ಅಗ್ದೀ ಹೋಪ್‌ಲೆಸ್‌ಕೇಸ್ ಅಂದು ಬಿಟ್ರು. ಇನ್ನೇನು ಎರಡು ತಾಸು ಬದುಕಾದೇ ಕಷ್ಟ. ಈ ಜಡ್ಡಿಗೆ ಇಲಾಜೇ ಇಲ್ಲ ಅಂದುಬಿಟ್ರು."ನನಗೀಗ ರಗಡ್ ಪೇಶಂಟ್ ಕಾಯ್ತಾ ಕುಂತಾರ. ಮತ್ತ ಒಂದು ತಾಸಿನಾಗ ಬರತೀನಿ'ಅಂತ ಹೇಳಿ ಹೊಂಟು ಬಿಟ್ರು ಗುಳಗಿ ಡಾಕ್ಟರು.


ಡಾಕ್ಟರ ಮತ್ತ ಹೊಳ್ಳಿ ಬರೋವಾಗ ಬರೋಬ್ಬರಿ ಆರು ತಾಸು ಕಳೆದಿತ್ತು. ಒಂದು ತಾಸಿನಾಗ ಮತ್ತ ಬರತೀನಿ–ಅಂತ ಹೇಳಿ ಅವ್ರು ಮರತೇ ಬಿಟ್ಟಿದ್ರು. ಆದ್ರ ಕುರಿದೊಡ್ಡಿ ವಳಗ ವೆಂಕಪ್ಪ ಮನೀಹಾಳನ ಮನಿ ಹತ್ರ ಬರುವಾಗ ಡಾಕ್ಟರಿಗೆ ಅಲ್ಲಿ ಏನೋ ಕೆತ್ತೆ ಬಜೆ ಆಗ್ಯೆತೆ ಅನಿಸಾಕ ಹತ್ತಿತು. ಒಂದು ಚಾರ್‌ಪಾಯಿ ಮ್ಯಾಗ ನಾಲ್ಕಾರು ಮಂದಿ ಕುಂತಿದ್ರು. ಶೇಂದಿ ಮಹಾತ್ಮೆ ಅವರ ಮೋರೆ ಮ್ಯಾಲ ಎದ್ದುಕಾಣತಿತ್ತು .ವೆಂಕಪ್ಪ ಮನಿಹಾಳ ಕಾಣಿಸಲಿಲ್ಲ. 'ಏನಾಗೈತಲೇ ನಿಮಗೆಲ್ಲ? ನನ್ನ ಪೇಶಂಟ್ ಮನಿಹಾಳ ಎಲ್ಲಿ ಅದಾನ?'ಅಂತ ಕೇಳಿದ್ರು ಗುಳಗಿ ಡಾಕ್ಟರು.

ಅದಕ್ಕವರು ಹೇಳಾಕ ಹತ್ತಿದರು–'ಮನಿಹಾಳ ಇನ್ನು ಎರಡು ತಾಸು ಬದಕೋದೆ ಕಷ್ಟ ಅಂತ ನೀವು ಅಂದೀರಲ್ಲ–ಯಾಕರಿ?ನಾವು ಮೂರು ತಾಸ್ ನೋಡೀವ್ರಿ. ಅಂವ ಏನೂ ಕುಂತಿಲ್ಲ, ನಿಂತಿಲ್ಲ ಹೆಣದ ಹಾಂಗ ಮಲಗೇ ಇದ್ದ. ಮತ್ತ ನಿಮ್ಮ ಮಾತಿಗೆ ಕಿಮ್ಮತ್ತು ಕೊಡ ಬೇಕಲ್ರಿ–ಅದಕ್ಕಾ ಈಗ ದೀಡ್‌ತಾಸ್ ಆತು ನೋಡ್ರಿ ಮನಿ ಹಾಳನ್ನು ಸುಟ್ಟು ಬಿಟ್ಟೆವ್ರಿ– ನಾವು, ಅವನ ಆತ್ಮಕ್ಕ ಶಾಂತಿ ಕೋರಕೋತಾ. ಈಗ ಮೋಜು ಮಸ್ತಿ ಮಾಡಾಕ ಹತ್ತೀವ್ರಿ'

ಗುಳಗೀ ಡಾಕ್ಟರ ಏಕ್‌ದಂ ಸಿಟ್ಟಿಗೆದ್ದು ಬಿಟ್ರು ನೋಡ್ರಿ.'ಅಲ್ಲಲೇ ಕ್ರಿಮಿನಲ್ ಕೇಸ್ ಮಾಡೀರಿ ನೀವು. ಮನಿಹಾಳ ಸತ್ತಾನ–ಅಂತ ನಿಮಗ ಯಾಂವ ಹೇಳ್ಯಾನ ನಿಮಾಪ್ನ'ಅಂತ ಗರಂ ಆಗಿ ಕೇಳ್ಯಾರ ಡಾಕ್ಟರು. ಅದಕ್ಕ ಕುರಿದೊಡ್ಡಿ ಮಂದಿ ಏಕತಾನದಿಂದ ಗುಳಗೀ ಡಾಕ್ಟರಿಗೆ ತರಗಾ ಬರಗಾ ಬಯ್ದರಂತೆ

'ಅಲ್ರೀ ಡಾಕ್ಟ್ರ–ನೀವು ಒಂದು ತಾಸಿನಾಗ ಹೊಳ್ಳಿ ಬರ್ತಿನಿ ಅಂತ ಹೇಳಿದ್ದು ಖರೇ ಅಲ್ಲೇನು? ಮನಿಹಾಳ ಅಬ್ಬಬ್ಬಾಂದ್ರ ಎರಡು ತಾಸು ಬದುಕತಾನ ಅಂತ ನೀವು ಹೇಳಿಲ್ಲೇನು? ಎರಡಲ್ಲ ಖರೇಂದ್ರ ಬರೊಬ್ಬರಿ ನಾಕು ತಾಸು ಕಾದೀವ್ರಿ. ರಗಡ್ ಮಂದಿ ಹೆಣ್ಮಕ್ಕಳೂ ಬಂದು ಕೇಳಾಕ ಹತ್ತಾರ್ರಿ. ಮನಿಹಾಳ ಸತ್ತಿಲ್ಲೇನು. ಡಾಕ್ಟರ ಹೇಳ್ಯಾರ ಅಂದ ಮ್ಯಾಲ ತೀರ್ಕು. ಎರಡಲ್ಲ ನಾಕು ತಾಸು ಆಗೇತಿ. ಮುಗ್ಸಿ ಬಿಡ್ರಲ್ಲ–ಅಂತ ಮಂದಿ ಹೇಳಿದರ್ರಿ. ನಾವು ಮಂದೀ ಮಾತ ಕೇಳಿ ಮನಿಹಾಳಂಗ ಗತಿ ಕಾಣಿಸಿವ್ರಿ. ಇದ್ರಾಗ ತೆಪ್ಪು ಏನ್ಯೆತಿ?'ಡಿಗ್ರಿ ಇಲ್ಲದ ಬಿಡಾಡಿ ಡಾಕ್ಟರಪ್ಪನ ಮಾತಿಗೂ ಕಿಮ್ಮತ್ತು ಕೊಡೋ ಮಂದಿ ನಾವು. ನಿಮ್ಮ ಮರೆವಿನ ಜಡ್ಡಿಗೆ ಮೊದಲು ಇಲಾಜು ಮಾಡ್ರಲ್ಲಾ.

ಅಡಸೊಟ್ಟ ಮೋರೆಯ ಹಳ್ಳಿ ಮಂದಿಯ ಈ ಜಬರದಸ್ತ ಮಾತು ಕೇಳ್ತಾ ಕೇಳ್ತಾ ಗುಳಗೀ ಡಾಕ್ಟರು ಈ ಮೂಢಮತಿಗಳನು ತಿದ್ದಿ, ಬುದ್ದಿ ಹೇಳಯ್ಯಾ ಹೇ ಗುಹೇಶ್ವರಾ ಎನ್ನುತ್ತಾ ಮನದಲ್ಲೇ ಪ್ರಾರ್ಥಿಸಿದರಂತೆ! ■



# ಒಂದು ಪೇಚಿನ ಪ್ರಸಂಗ

**ಪ್ರಭಣ್ಣ**

ಮೊನ್ನೆ ನನ್ನ ಪ್ರಿಯ ಮಿತ್ರರೊಬ್ಬರು ತಮ್ಮ ಅಂತರಾಳದ ಆಸೆಯೊಂದನ್ನು ನನ್ನೊಂದಿಗೆ ಆಪ್ತವಾಗಿ ಹೇಳಿಕೊಂಡರು.

ತಮ್ಮ ಮೊಟ್ಟ ಮೊದಲ ಕವನ ಸಂಕಲವನ್ನು ( ಸ್ಮೃತಿ ಕನ್ಯೆ ) ಆದಷ್ಟು ಬೇಗ ಪ್ರಕಟಗೊಳಿಸಬೇಕೆಂದೂ, ತಡವಾದರೆ ಆ ಕವಿತೆಗಳೆಲ್ಲಾ ಹಳೆಯ ಕಾಲದವು ಎಂದೆನಿಸಿಬಿಡಬಹುದು ಎಂದರು. ಅವರು ಸಾಹಿತ್ಯ ಕೃಷಿಯನ್ನಾರಂಭಿಸಿದ ಯುವ ಪ್ರಾಯದಿಂದಲೂ ಬರೆದ ಕವನಗಳನ್ನೆಲ್ಲಾ ಸಂಗ್ರಹಿಸಿ ಅಂತೂ ತಮ್ಮದೊಂದು ಕವನ ಸಂಕಲನ ಅಂತ ಪ್ರಕಟಿಸಿದರೆ ಕವಿಗಳ ಹೆಸರಿನಲ್ಲಿ ತಮ್ಮ ಹೆಸರೂ ದಾಖಲಾಗಿ, ತಮ್ಮ ಸಾಹಿತ್ಯ ಪರಿಚಾರಿಕೆಯೂ ಫಲಿಸಿ ಜೀವನ ಸಾರ್ಥಕವಾಗುವುದೆಂಬ ಭಾವನೆ. ಪ್ರತಿ ದಶಕಗಳಿಗೂ ಬದಲಾಗುವ ಕಾವ್ಯ ಪಂಥಗಳ ಈ ಕಾಲದಲ್ಲಿ ಕವನಗಳನ್ನು ಬರೆದ ಕಾವಿನಲ್ಲೇ ಪ್ರಕಟಿಸದೇ ಹೋದರೆ, ಇವರದು ನವೋದಯ ಪಂಥವೋ, ಪ್ರಗತಿಪರದ್ದೋ, ನವ್ಯ ಕಾವ್ಯವೋ, ಬಂಡಾಯ ಸಾಹಿತ್ಯವೋ ಎಂದು ತೀರ್ಮಾನಿಸುವುದು ಕಷ್ಟವಾಗುತ್ತದೆ. ಆದ್ದರಿಂದ ತಮ್ಮ ಚೊಚ್ಚಲ ಈ ಕೃತಿಯನ್ನು ಪ್ರಕಟಿಸಲು ತೀರ್ಮಾನ ಮಾಡಿ ಇವಿಷ್ಟನ್ನೂ ನನ್ನ ಮುಂದೆ ಹೇಳಿಕೊಂಡರು. ಇವಿಷ್ಟೇ ಆಗಿದ್ದರೆ ಸಹಾನುಭೂತಿಯಿಂದ ಎರಡು ಪ್ರೋತ್ಸಾಹದ ಮಾತುಗಳನ್ನು ಹೇಳಿ ಸುಮ್ಮನಾಗಬಹುದಾಗಿತ್ತು.

ನನ್ನ ಈ ಮಿತ್ರರು ಒಳ್ಳೆ ರಸಿಕರು. ಒಳ್ಳೆ ಬರಹಗಾರರು. ಈಗಾಗಲೇ ಅವರ ಲಲಿತ ಪ್ರಬಂಧ ಸಂಕಲನಗಳು ಪ್ರಕಟವಾಗಿ ಜನಪ್ರಿಯವಾಗಿವೆ. ಒಳ್ಳೆಯ ಗದ್ಯ ಶೈಲಿಯ ಲಲಿತ ಪ್ರಬಂಧವೇ ಅವರ ಪ್ರತಿಭೆಯ ಕ್ಷೇತ್ರ. ಸೊಗಸಾದ ಸುಲಲಿತವಾದ ಭಾಷಾ ಪ್ರಯೋಗದಿಂದಲೂ, ನಿಬಂಧ ನೈಪುಣ್ಯದಿಂದಲೂ ಕೂಡಿರುತ್ತವೆ. ಇಂಥವರು ತಮ್ಮ ಕವನ ಸಂಕಲಕ್ಕೆ ಮುನ್ನುಡಿ ಬರೆದುಕೊಡಬೇಕೆಂದು ಒಂದೂ ಕವನ ಸಂಕಲನ ಪ್ರಕಟಿಸದ ನನ್ನನ್ನು ಕೇಳಬೇಕೇ? ನಾಟಕ, ಕಾದಂಬರಿ, ಸಣ್ಣ ಕಥೆ, ಲಲಿತ ಪ್ರಬಂಧ ಎಂದು ಸಾಹಿತ್ಯದ ಪ್ರಾಕಾರಗಳಲ್ಲಿ ಬರೆದು ಶ್ರೇಷ್ಠ ಸಾಹಿತಿ ಎಂದೆನಿಸಿಕೊಂಡಿದ್ದರೂ ಕಾವ್ಯ ರಚನೆ ಮಾಡಿ ಸೈ ಎನಿಸಿಕೊಳ್ಳದೇ ಹೋದರೆ ಏನೋ ಅರೆ ಕೊರೆ ಎನಿಸಿಬಿಡುತ್ತದೆ. ಕವಿ ಎನಿಸಿಕೊಂಡಾಗಲೇ ಹೆಮ್ಮೆ, ತೃಪ್ತಿ. ಪದ್ಯಂ ವದ್ಯಂ, ಗದ್ಯಂ ಹೃದ್ಯಂ ಎಂದು ಗದ್ಯವನ್ನೇ ಆಯ್ದುಕೊಂಡು ಶ್ರೀ ರಾಮಾಶ್ವಮೇಧ ಕೃತಿಯನ್ನು ರಚಿಸಿದ ನಂದಳಿಕೆ ಲಕ್ಷ್ಮೀನಾರಾಯಣ (ಮುದ್ದಣ) ಹೇಳಿದ್ದರೂ ಅನೇಕರಿಗೆ ಬುದ್ಧಿ ಬರುವುದಿಲ್ಲ ಮತ್ತು ಕಾವ್ಯದ ವ್ಯಾಮೋಹ ಹೋಗುವುದಿಲ್ಲ.

ಹೀಗೆ ನನ್ನ ಕಾವ್ಯಮೋಹಿ ಸ್ನೇಹಿತರಿಗೆ ತಿಳಿ ಹೇಳಬೇಕೆನಿಸಿದರೂ ಹೇಳಹೋಗದೇ ಸಧ್ಯ ಬೀಸುವ ದೊಣ್ಣೆಯಿಂದ ತಪ್ಪಿಸಿಕೊಳ್ಳಲು ಮುನ್ನುಡಿ ಬರೆದು ಕೊಡುವೆನೆಂದು ಹೇಳಿಬಿಟ್ಟೆ. ಅವರು ಹಿಗ್ಗಿ ಹೀರೇಕಾಯಿ ಆದರು. ಕಾಲಕ್ರಮೇಣ ಈ ವಿಚಾರವನ್ನು ನಾನು ಮರೆತರೂ ಅವರು ಮರೆಯಲಿಲ್ಲ ಜಾತಕ ಪಕ್ಷಿಯಂತೆ ಕಾಯುತ್ತಲೇ ಇದ್ದರು. ಸ್ಮೃತಿ ಕನ್ಯೆ ನನ್ನ ವಿಸ್ಮೃತಿಯ ಕಂದರಕ್ಕೆ

ಜಾರಿಬಿಟ್ಟಳು. ಅವರು ಮತ್ತೆ ನನಗೆ ನೆನಪು ಮಾಡಿದರು. ಆದರೂ ನನ್ನಿಂದ ಮುನ್ನುಡಿ ಬರೆದುಕೊಡುವುದು ಸಾಧ್ಯವಾಗಿರಲಿಲ್ಲ. ಈ ನಡುವೆ ಅವರ ಎರಡನೇ ಕವನ ಸಂಕಲವೆಂದು ಪ್ರಕಟವಾಗಬೇಕಿದ್ದ ಅಮಲಿನ ವಚನಗಳು ಮೊದಲನೇ ಕವನ ಸಂಕಲನವಾಗಿ ಪ್ರಕಟವಾಗಿಯೇ ಬಿಟ್ಟಿತು. ಆದರೇನು ಅವರು ತಮ್ಮ ಪಟ್ಟು ಬಿಡಲಿಲ್ಲ. ಭೇಟಿಯಾದಾಗಲೆಲ್ಲಾ ಮುನ್ನುಡಿಯ ಬಗೆಗೇ ಕೇಳತೊಡಗಿದ್ದರು.

ನನ್ನ ಈ ಸಂಕಟ ಪರಿಸ್ಥಿತಿಯ ಕಷ್ಟ ಸುಖಗಳಲ್ಲಿ ಸದಾ ಜೊತೆಗಿರುವುದಾಗಿ ಶಪಥ ಮಾಡಿ ಸಪ್ತಪದಿ ತುಳಿದ ನನ್ನ ಹೆಂಡತಿಯ ಬಳಿ ಹೇಳಿದೆ. ಅವಳು ಕನಿಕರಿಸಿ ಏನಾದರೂ ಪರಿಹಾರೋಪಾಯವನ್ನು ಸೂಚಿಸಬಹುದು ಎಂಬ ಆಸೆಯಿಂದ. ಆದರೆ ಅವಳು ನನ್ನ ಈ ಪೇಚಿನ ಪರಿಸ್ಥಿತಿಗೆ ಮರುಗದೇ ಹಾಗೇ ಆಗಬೇಕು ನಿಮಗೆ ಎಂಬ ರೀತಿ ಖುಷಿಪಟ್ಟಳು. ನಾನು ಗೋಗರೆದ ಮೇಲೆ ಕಡೆಗೆ ಕನಿಕರಿಸಿದಂತೆ " ಏನಾದರೂ ಬರೆದು ಕೊಡಿ ಪಾಪ, ಮುನ್ನುಡಿ ತಾನೇ, ಅವರು ಅಷ್ಟು ಕೇಳಿಕೊಂಡಿದ್ದಾರೆ. ಈ ರೀತಿಯಿಂದಲಾದರೂ ನೀವು ಪ್ರಸಿದ್ಧರಾಗುತ್ತೀರಿ. ಅಲ್ಲದೇ ಮುನ್ನುಡಿಯನ್ನು ಯಾರು ತಾನೇ ಓದುತ್ತಾರೆ? ಅಷ್ಟಕ್ಕೂ ಕವನ ಸಂಕಲವನ್ನು ಕೊಂಡುಕೊಳ್ಳುವ ಮಹಾಶಯರು ಯಾರಿದ್ದಾರೆ. ನೋಡಿ ಬರೆದರೆ ನಾಲ್ಕೇ ಸಾಲು, ಹತ್ತೇ ಸಾಲು ಅಂತ ಜಿಪುಣತನ ತೋರಿಸಬೇಡಿ. ಧಾರಾಳವಾಗಿ 15–20 ಪುಟ ಬರೆದುಕೊಡಿ" ಎಂದಳು. " ಅಲ್ಲವೇ ಒಂದೆರಡು ಪುಟ ಬರೆಯುವುದೇ ಕಷ್ಟ ಎಂದು ನಾನು ಒದ್ದಾಡುತ್ತಿರುವಾಗ 20 ಪುಟ ಬರೀರಿ ಅಂತೀಯಲ್ಲ" ಎಂದು ಹಲುಬಿದೆ. "ಅಯ್ಯೋ ಅಷ್ಟು ಪುಟ ಬರೆದರೇನೇ ಯಾರೂ ಅದನ್ನು ಓದುವ ಗೋಜಿಗೆ ಹೋಗುವುದಿಲ್ಲ, ಬರೀರಿ ಸುಮ್ಮನೆ" ಎಂದು ಚುಚ್ಚಿದಳು. "ಹೇಗೆ ಬರೆಯೋದೇ" ಎಂದು ಆಲಾಪಿಸಿದೆ. "ಅದನ್ನೆಲ್ಲಾ ನಿಮಗೆ ಹೇಳಿಕೊಡಬೇಕೇ? ಬೇರೆ ಹತ್ತಾರು ಮುನ್ನುಡಿಗಳಿಂದ ಅದರದೊಂದು ಪ್ಯಾರ, ಇದರದೊಂದು ಪ್ಯಾರ ಕಟ್ ಮಾಡಿ ಪೇಸ್ಟ್ ಮಾಡಿದರಾಯಿತು. ನೀವು ಹೀಗೆ ತಾನೇ ನಿಮ್ಮ ಪಿ.ಎಚ್‌ಡಿ ಮಹಾ ಪ್ರಬಂಧವನ್ನು, ಬೇರೆ ಬೇರೆ ಸಂಶೋಧನಾ ಲೇಖನಗಳನ್ನು ಬರೆದಿರೋದು ಎನ್ನಬೇಕೇ? "ಸಹಧರ್ಮಿಣಿ, ಸಂಕಟ ಪರಿಸ್ಥಿತಿಗಳಿಂದ ಕಾಪಾಡುತ್ತಾಳೆ ಎಂದು ನಂಬಿಕೊಂಡ ನನಗೆ ಅವಳು ಹೀಗೆ ಅನ್ನಬಹುದೇ? ಲೋಕದಲ್ಲಿ ಒಳ್ಳೆಯವರಿಗೆ ಕಾಲವಿಲ್ಲ ಎಂದುಕೊಂಡೆ.

"ಏನೋಪ್ಪ ನಿಮ್ಮ ಕಷ್ಟ ನೋಡಲಾರೆ. ನನಗೆ ತಿಳಿದದ್ದು ಹೇಳಿದೆ. ಇನ್ನು ನೀವಾಯಿತು ನಿಮ್ಮ ಪಾಡಾಯಿತು. ಅಡಿಗೆ ಕೆಲಸ ಹಾಗೇ ಕೂತಿದೆ. ನಾ ಹೋಗ್ತೀನಪ್ಪ" (ಇದಕ್ಕಿಂದ ಉತ್ತಮವಾದ ಕೆಲಸವಿರಬೇಕಾದರೆ ಈ ಒಣ ಉಸಾಬರಿ ನನಗೇಕೆ) ಎಂಬ ಧೋರಣೆಯಲ್ಲಿ ಎದ್ದು ಹೊರಟೇ ಹೋದಳು. ನನ್ನವಳು ಇಂಥಾ ಕುಟುಕುವ ಕೆಲಸದಲ್ಲಿ ಬಹಳ ಮೇಧಾವಿ.

ವಿಧಿಯಿಲ್ಲದೇ ನನ್ನ ದಾರಿ ನಾನು ನೋಡ್ಕೊಬೇಕು, ಸುಂಕದವನ ಹತ್ತಿರ ಸುಖ ದು:ಖ ಹೇಳಿಕೊಂಡರೆ ಫಲವೇನು ಅಂತ ಸ್ಮೃತಿ ಕನ್ಯೆಯ ಮೊರೆ ಹೋದೆ.

■

# ಭಲೇ ಮಲ್ಲೇಶ್ವರ!

**ಸಿ.ಆರ್. ಸತ್ಯ**

ಕೆಲವು ದಶಕಗಳ ಹಿಂದೆ ಬೆಂಗಳೂರಿನ ಖ್ಯಾತ ಬಡಾವಣೆಯಾದ ಮಲ್ಲೇಶ್ವರದ ಸಂಪಿಗೆ ರಸ್ತೆಯಲ್ಲಿ ನಿರ್ಮಿಸಬೇಕಾಗಿದ್ದ ವಾಚನಾಲಯದ ಪಾಯವನ್ನು ಅಗೆದಾಗ, ಕೆಲವು ತಾಳೇ ಗರಿ ಕಟ್ಟುಗಳು ನನಗೆ ಸಿಕ್ಕಿದವು. ಹಳೆಗನ್ನಡದಲ್ಲಿ ಇದ್ದ ಅವನ್ನು ಅರ್ಥಮಾಡಿಕೊಳ್ಳಲು ನಾನು ಮಂಗಳೂರಿನ ಪ್ರಸಿದ್ಧ ಸಂಶೋಧಕರಾದ ಪುರಾತನ್ ಹೆಗ್ಡೆ ಅವರ ಮೊರೆ ಹೋದೆ. ಆಗ ಹೊರಬಂದ ಮಾಹಿತಿ ನನಗೆ ಎಲ್ಲಿಲ್ಲದ ಆಚ್ಚರಿ ಮೂಡಿಸಿತು. 800 ವರುಷಗಳ ಹಿಂದಿದ್ದ ಪರಂಪರೆಗಳು ಮಲ್ಲೇಶ್ವರದಲ್ಲಿ ಈಗಲೂ ಇವೆ ಅಂತ!

ಆಗ ಮಲ್ಲೇಶ್ವರದ ರಾಜ್ಯವನ್ನು ಆಳುತ್ತಿದ್ದ ದೊರೆ ಕಿರಿಯ ಮಲ್ಲೇಶ ಎಂಬುವನು. ದೈವ ಭಕ್ತ. ಅವನ ಅರಮನೆ ಈಗಿನ 7ನೇ ಕ್ರಾಸ್-ಮಾರ್ಗೋಸಾ ರಸ್ತೆ ಮೂಲೆಯಲ್ಲಿ ಇತ್ತು. ಅವನ ರಕ್ಷಣೆಗಾಗಿ ಆ ಜಾಗಕ್ಕೆ ಆಗ ಅಧಿಕಾರಿಗಳನ್ನು ಬಿಟ್ಟರೆ, ಬೇರೆ ಯಾರನ್ನೂ ಬಿಡುತ್ತಿರಲಿಲ್ಲ (ಈಗ ಇಲ್ಲಿ ಮಲ್ಲೇಶ್ವರಂ ಕ್ಲಬ್ ಇದೆ. ಮೆಂಬರುಗಳನ್ನ ಬಿಟ್ಟರೆ ಬೇರೆ ಯಾರನ್ನು ಅಲ್ಲಿ ಸೇರಿಸಲ್ಲ). ಅರಮನೆಯ ಮುಂದೆ ಇದ್ದ ದೊಡ್ಡ ಮೈದಾನದಲ್ಲಿ ಜಾತ್ರೆ, ಸಂಗೀತ, ನೃತ್ಯ, ಆಟದ ಕಾರ್ಯಕ್ರಮಗಳು ನಡೆಯುತ್ತಿದ್ದವಂತೆ. ರಾಜನೂ ಭಾಗವಹಿಸುತ್ತಿದ್ದನಂತೆ. (ಈಗ ಇದು ಆಟದ ಮೈದಾನವಾಗೇ ಇದೆ. ಮಂತ್ರಿಗಳು, ಎಮ್.ಎಲ್.ಏ ಗಳೂ ಆಗೊಮ್ಮೆ ಈಗೊಮ್ಮೆ ಇಲ್ಲಿ ಬರುತ್ತಾರೆ). ದೈವ ಭಕ್ತ ರಾಜನು ಪ್ರತಿದಿನ ಬೆಳಿಗ್ಗೆ ಅರಮನೆಯಿಂದ ಹೊರಟು ಬಂಡೆ ಗಣೇಶನಿಗೆ (ಆಗ ಈಗಿನ ವಿಗ್ರಹ ಇರಲಿಲ್ಲ) ಹೂವಿನ ಅಭಿಷೇಕ ಮಾಡಿ ನಂತರ ಕಾಡು ಮಲ್ಲೇಶ್ವರನ ಗುಡಿಗೆ ತೆರಳಿ ಪೂಜೆಮಾಡಿ ಬರುತ್ತಿದ್ದ. ಅವನು ಹೋಗಿ ಬರುವ ದಾರಿಯಲ್ಲಿ ನೆರಳು ಇರಲಿ ಎಂದು ಬೇವಿನ ಮರಗಳನ್ನೂ, ಹೂವಿಗಾಗಿ ಸಂಪಿಗೆ ಮರಗಳನ್ನೂ ನೆಟ್ಟಿಸಿದ್ದ (ಕೆಲವು ಮರಗಳು ಈಗಲೂ ಇವೆ. ಇನ್ನು ಕೆಲವು ಮಳೆಗೆ ಉರುಳಿ ಹೋಗಿವೆ. ಈಗಿನ ರಸ್ತೆಗಳ ಹೆಸರುಗಳು ಬೇವಿನ ಮರದ ರಸ್ತೆ ಮತ್ತು ಸಂಪಿಗೆ ರಸ್ತೆ ಎಂದೇ ಇಟ್ಟಿದ್ದಾರೆ). ರಾಜನು ಪೂಜೆಮುಗಿಸಿಕೊಂಡು ಬರುವಾಗ ಅರಮನೆಗೆ ಪೂರ್ವದಿಕ್ಕಿನಲ್ಲಿ ಎರಡು ಸ್ಥಳದಲ್ಲಿ ವಿಶ್ರಾಂತಿ ಪಡೆಯುತ್ತಿದ್ದನಂತೆ. ಅಲ್ಲಿ ಇಬ್ಬರು ಅಜ್ಜಿಯರು ಅವನಿಗೆ ತುಪ್ಪದ ದೋಸೆಯನ್ನು ಬಿಸಿಬಿಸಿಯಾಗಿ ಕೊಡುತ್ತಿದ್ದರಂತೆ. ರಾಜನಾದರೂ ಇಂತಹ ಸಾಧಾರಣ ಪ್ರಜೆಗಳ ಪ್ರೀತಿಗೆ ಮನಸೋತು, ಈ ಸ್ಥಳಗಳಲ್ಲಿ ಎಂದೂ ದೋಸೆಯ ಸವಿ ರುಚಿ ಮುಂದಿನ ಪೀಳಿಗೆಯವರಿಗೂ ದೊರೆಯಲಿ ಎಂದು ಹಾರೈಸುತ್ತಿದ್ದನಂತೆ (ಈ ಸ್ಥಳಗಳಲ್ಲೇ ಈಗ ಸೆಂಟ್ರಲ್ ಟಿಫಿನ್ ರೂಮ್ಸ್, ಜನತಾ ಹೋಟೆಲ್ ಬಂದಿವೆ. ದೋಸೆಗಾಗಿ, ಗ್ರಾಹಕರು ಸಾಲಿನಲ್ಲಿ ಕಾದು ನಿಂತು ದೋಸೆ ತಿನ್ನುತ್ತಾರೆ).

ಮೈದಾನದ ದಕ್ಷಿಣಕ್ಕೆ ರಾಜನ ರಕ್ಷಣ ಪರಿವಾರದ ಕಛೇರಿ ಇತ್ತು (ಈಗ ಅಲ್ಲೇ ಮಲ್ಲೇಶ್ವರಂ ಪೊಲೀಸ್ ಸ್ಟೇಶನ್ ಇರೋದು). ರಾಜನ ಅಶ್ವ ಸೇನೆಯ ಕುದುರೆಗಳನ್ನು ಆಚೆ ಬದಿಯಲ್ಲಿ ನಿಲ್ಲಿಸುತ್ತಿದ್ದರು (ಇಲ್ಲೇ, ಮಲ್ಲೇಶ್ವರದ ಟಾಂಗಾಗಳು 1960 ರ ದಶಕಗಳ ತನಕ ನಿಲ್ಲುತ್ತಿದ್ದುದ್ದು). ರಕ್ಷಣ ಇಲಾಖೆಯವರು ಯಾರಾದರೂ ಕಳ್ಳರಿಗೋ, ಬೇಹುಗಾರರಿಗೋ ಹೊಡೆದು ಚಚ್ಚಿ ಅವರ ಮೂಳೆ ಮುರಿದಾಗ, ಅವರಿಗೆ ವೈದ್ಯರ ಸೇವೆಗೆಂದು, ಕಛೇರಿಯ ಹಿಂಭಾಗದಲ್ಲೇ ಒಂದು ವೈದ್ಯ ಶಾಲೆಯನ್ನ ಕಟ್ಟಿದ್ದರು (ಈಗ ಇಲ್ಲಿ ಕೆ.ಸಿ. ಜನರಲ್ ಹಾಸ್ಪಿಟಲ್ ಇದೆ). ಆಕಸ್ಮಿಕವಾಗಿ ಶಿಕ್ಷೆಗೆ ಒಳಗಾದವರು ನೆಗೆದು ಬಿದ್ದರೆ, ಹತ್ತಿರದಲ್ಲೇ ಪಶ್ಚಿಮ ದಿಕ್ಕಿನಲ್ಲಿ ಸ್ಮಶಾನಕ್ಕಾಗಿ ರಾಜ ಹತ್ತು ಎಕರೆ ಜಾಗ ಕೊಟ್ಟಿದ್ದ (ಇದು ಈಗ ಶ್ರೀರಾಂಪುರದ ಹರಿಶ್ಚಂದ್ರ ಘಾಟ್ ಆಗಿದೆ).

ಸೈನಿಕರ ಸಮವಸ್ತ್ರ, ಪಾದರಕ್ಷೆ, ಜನಕೋಟಿಗೆ ಬೇಕಾಗುವ ದಿನಸಿ ಸಾಮಾನುಗಳು, ಗ್ರಂಥಿಗೆ ವಸ್ತುಗಳು, ಹಬ್ಬಕ್ಕೆ ಬೇಕಾಗುವ ಪೂಜಾ ಸಾಮಗ್ರಿಗಳು, ಕಡಲೆಪುರಿ, ಕಡಲೇ ಕಾಯಿ ಬೀಜ, ಹುರಿಗಡಲೆ– ಇವುಗಳನ್ನು ಮಾರುವ ಮಳಿಗೆಗಳನ್ನೆಲ್ಲಾ ರಾಜನು ಅರಮನೆಯ ಪೂರ್ವ ದಿಕ್ಕಿನ ಒಂದು ರಸ್ತೆಯಲ್ಲಿ ಕೇಂದ್ರೀಕರಿಸಿದ್ದ (ಈಗ ಇದೇ ಸಂಪಿಗೆ ರೋಡ್, 8ನೇ ಕ್ರಾಸ್ ಮಾರ್ಕೆಟ್‌ಗಳಾಗಿವೆ. ಪಾದರಕ್ಷೆಗಳಿಗೆ ಒಂದು ಬಾಟಾ ಅಂಗಡಿಯೂ ಇದೆ). ಸ್ವಲ್ಪ ಉತ್ತರ ದಿಕ್ಕಿನಲ್ಲಿ ತಗ್ಗಾದ ಒಂದು ಪ್ರದೇಶದಲ್ಲಿ, ಒಂದು ಸಂಗೀತ ನೃತ್ಯ ಶಾಲೆಯೂ ಇತ್ತು. ರಾಜ, ಅವನ ರಾಣಿಯ ಜೊತೆ, ಅಲ್ಲಿಯ ಅನೇಕ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದ (ಈಗ ಇಲ್ಲೇ ಚೌಡಯ್ಯ ಮೆಮೋರಿಯಲ್ ಹಾಲ್ ಕಟ್ಟಿರೋದು. ಆಗ ಒನ್ ವೇ ಪ್ರಾಬ್ಲಮ್ ಇರಲಿಲ್ಲವಾದ್ದರಿಂದ, ರಾಜನ ಪರಿವಾರ ಮಾರ್ಗೋಸಾ ರಸ್ತೆಯಿಂದ, ಈಗಿನ 17ನೇ ಕ್ರಾಸ್‌ನಲ್ಲೇ ಬಲಕ್ಕೆ ತಿರುಗಿ, ನೇರವಾಗಿ ಕಛೇರಿಗೆ ಬರುತ್ತಿತ್ತು).

ಮಹಾರಾಣಿಯು ಹೆಂಗಸರ ಅಭ್ಯುದಯಕ್ಕೆ ಬಹಳವಾಗೇ ಕಾಳಜಿ ವಹಿಸಿದ್ದಳು. ದೇಶದ ಇತಿಹಾಸದಲ್ಲೇ ಮೊದಲ ಬಾರಿಗೆ ಈಗಿನ ಸರ್ಕಲ್ ಮಾರಮ್ಮ ದೇವಸ್ಥಾನದ ಹತ್ತಿರ ಮತ್ತು ಈಗಿನ 15ನೇ ಕ್ರಾಸ್ ರಸ್ತೆಯ ಬಳಿ, ಹೆಂಗಸರಿಗೆ ಶಾಲೆಗಳನ್ನು ತೆಗೆದಿದ್ದಳೆಂದು ಒಂದು ತಾಳೇಗರಿ ಹೇಳುತ್ತೆ (ಈಗ ಇಲ್ಲೇ ಅಮ್ಮಣ್ಣಿ ಕಾಲೇಜು ಮತ್ತು ಎಮ್.ಎಲ್.ಎ ಲೇಡೀಸ್ ಕಾಲೇಜುಗಳಿವೆ). ರಾಜಧಾನಿಯ ಉತ್ತರದಲ್ಲಿದ್ದ ಒಂದು ವನದಲ್ಲಿ ಕೋತಿಗಳ ಕಾಟ ಬಹಳವಾಗೇ ಇದ್ದರೂ ಅವುಗಳ ಚೇಷ್ಟೆಯನ್ನು ನೋಡಲು ಆಗಾಗ, ರಾಜ ಪುರುಸೊತ್ತಿದ್ದಾಗ, ಬರುತ್ತಿದ್ದನಂತೆ (ಈಗ ಇಲ್ಲಿ ಸರಕಾರಿ ಹುಡುಗರ ಹೈಸ್ಕೂಲ್ ಇದೆ. ಚೇಷ್ಟೆ ಮುಂದುವರಿಯುತ್ತಲೇ ಇದೆ. ನಾನೂ ಅಲ್ಲೇ ಓದಿದ್ದು).

ಪುರಾತನ ಕನ್ನಡ ಸಾಹಿತ್ಯದಲ್ಲಿ ಮೊದಲನೆಯ ಹಾಸ್ಯ ಲೇಖಕ, ಕವಿ ಎಂದು ಹೆಸರಾಗಿದ್ದ ಕಮಾಲಿ ಕೃಷ್ಣಯ್ಯ ರಾಜನ ಆಸ್ಥಾನದಲ್ಲಿ ಆಶ್ರಯಪಡೆದು, ರಾಜನಿಗೆ ಪ್ರೀತಿಪಾತ್ರನಾಗಿದ್ದ. ಅವನ ಮನೆ ಅರಮನೆಯ ಪಶ್ಚಿಮದ ಒಂದು ರಸ್ತೆಯಲ್ಲಿತ್ತು (ಈಗ ಇದು 6ನೇ ಮೈನ್ ರೋಡ್ ಆಗಿ, ಅಪರಂಜಿ ಕಾರ್ಯಾಲಯ ಅಲ್ಲಿ ಸ್ಥಾಪಿತವಾಗಿದೆ).

ಕಿರಿಯ ಮಲ್ಲೇಶನಿಗೆ ವಿಜ್ಞಾನ ಮತ್ತು ಕನ್ನಡ ಸಾಹಿತ್ಯದಲ್ಲಿ ವಿಶೇಷ ಆಸಕ್ತಿ ಇತ್ತೆಂದು ಒಂದು ತಾಳೇ ಗರಿ ಹೇಳುತ್ತೆ. ಹಾಗಾಗಿ ಸ್ವಲ್ಪ ಪಶ್ಚಿಮ ದಿಕ್ಕಿಗೆ ಇವರುಗಳಿಗೆಂದೇ ಮನೆಗಳನ್ನೂ ಕಟ್ಟಿಸಿಕೊಟ್ಟು, ಅವರೆಲ್ಲರೂ ಈಗಿನ ಸಂಪಿಗೆ ರಸ್ತೆಯಿಂದ ಈಗಿನ ಮಲ್ಲೇಶ್ವರಂ ರೈಲ್ವೇ ಸ್ಟೇಶನ್ ವರೆಗೂ ವಾಸವಿದ್ದು ಅವರು ವೃತ್ತಿಪರವಾಗಿ ಮೇಲೆ ಬರಲು ಪ್ರೋತ್ಸಾಹಿಸಿದ. ಈ ಜಾಗಗಳಲ್ಲೇ ಇತ್ತೀಚೆಗೆ ಡಾ. ಸಿ.ವಿ. ರಾಮನ್, ಡಾ. ವಿಕ್ರಮ್ ಸಾರಭಾಯ್, ಇಂತಹ ಆಧುನಿಕ ವಿಜ್ಞಾನಿಗಳೂ, ಅನೇಕ ಸಾಹಿತಿಗಳೂ ಇದ್ದಿದ್ದು, ಈಗಲೂ ಇದ್ದಾರೆ.

ಮೇಲಿನ ಮಾಹಿತಿಯೆಲ್ಲವನ್ನೂ ಕಲೆ ಹಾಕಿ ನಾನು ಅವನ್ನು ಪುರಾತನ್ ಹೆಗ್ಡೆ ಅವರಿಗೆ ತೋರಿಸಿದಾಗ, ಅವರು ಅವನ್ನು ಓದಿ ಆಶ್ಚರ್ಯ ಪಟ್ಟರು. ''ಜಾಗತೀಕರಣದಿಂದ ಮತ್ತು ಆಧುನಿಕತೆಯ ಒತ್ತಡದಿಂದ ನಮ್ಮಲ್ಲಿ ಪರಂಪರೆ ಎನ್ನುವುದೇ ಎಲ್ಲಾ ಊರುಗಳಲ್ಲೂ ಎಲ್ಲಾ ಬಡಾವಣೆಗಳಲ್ಲೂ ನಶಿಸಿಹೋಗಿದೆ. ಆದರೆ, ಇದನ್ನು 800 ವರುಷಗಳ ಕಾಲ ಮಲ್ಲೇಶ್ವರಂನಲ್ಲಿ ಉಳಿಸಿಕೊಂಡು ಬಂದಿರುವ ಇಲ್ಲಿಯ ಜನತೆ ಬಹಳ ರಸಿಕರು ಮತ್ತು ಬುದ್ಧಿವಂತರು. ಅವರಿಗೆ ನನ್ನ ಅಭಿನಂದನೆಗಳು!'' ಅಂತ ಹಾಡಿ ಹೊಗಳಿದರು.

ನಮ್ಮ ಓದುಗರಲ್ಲಿ ಯಾರಾದರೂ ಮಲ್ಲೇಶ್ವರಂ ನಿವಾಸಿಗಳಿದ್ದರೆ, ಖಂಡಿತವಾಗಿಯೂ ಸ್ವಲ್ಪ ಜಂಬ ಪಟ್ಟುಕೊಳ್ಳಬಹುದು! ■

# ಕರಡಿಯೂ, ಜಾಮೂನೂ

– ಸೂರಿ ಹಾರ್ದಳ್ಳಿ

ಕವಿಯೂ, ಸಿನೆಮಾ ನಿರ್ದೇಶಕರೂ ಆದ ಮಾನ್ಯ ಶ್ರೀ ಯೋಗರಾಜ ಭಟ್ಟರೇ, ನೀವು ರಚಿಸಿದ 'ಕತ್ತಲಲ್ಲಿ ಕರಡೀಗೆ ಜಾಮೂನು ತಿನಿಸೋಕೆ ಹೋಗಬಾರದೂರೀ,' ಸಾಂಗನ್ನು (ಹಾಡು, ಕವನ, ಕವಿತೆ ಎಂಬ ಪದಗಳು ಈಗ ಡಿಕ್ಷನರಿಯಲ್ಲಿ ಮಾತ್ರ ಕಾಣಿಸುತ್ತವೆ) ಕೇಳಿದ ಮೇಲೆ ನನ್ನ ತಲೆ ಕಲಾಸಿಪಾಳ್ಯವೇ ಆಗಿದೆ, ಗೊಂದಲದ ಗೂಡಾಗಿದೆ. ತಾವು ದಯವಿಟ್ಟು ಕೆಳಗಿನ ನನ್ನ ಪ್ರಶ್ನೆಗಳಿಗೆ ಉತ್ತರಿಸಿ, ಮಂಜು ಮುಸುಕಿದ ಧರೆಯನ್ನು ತೊಳೆದು, ಸ್ವಚ್ಛಗೊಳಿಸಿ, ಹೊಳೆಯುವಂತೆ ಮಾಡಬೇಕಾಗಿ ಕಳಕಳಿಯ ವಿನಂತಿ. ಹಿಂದಿಯವರು ನೇರಳೆ ಹಣ್ಣನ್ನು ಜಾಮೂನು ಎಂದು ಕರೆಯುತ್ತಾರೆ. ಆದರೆ ಕನ್ನಡದ ಹಾಡಾಗಿದ್ದರಿಂದ ಜಾಮೂನೆಂದರೆ ಸಿಹಿ ತಿಂಡಿ ಎಂದು ಅರ್ಥೈಸಿಕೊಳ್ಳುತ್ತೇನೆ.

'ಕತ್ತಲಲ್ಲಿ ಕರಡಿಗೆ ಜಾಮೂನು ತಿನ್ನಿಸೋಕೆ ಯಾವತ್ತು ಹೋಗಬಾರದೂರೀ,' ಎಂದು ಹೇಳಿದ್ದೀರಿ. ಇಲ್ಲಿ ಇದು ಎಚ್ಚರಿಕೆಯೋ, ಪ್ರಶ್ನೆಯೋ ಎಂಬುದು ಸ್ಪಷ್ಟವಾಗಿಲ್ಲ. 'ಯಾವತ್ತೂ ಹೋಗಬಾರದು' ಎಂಬುದಾದರೆ ಅದು ಸಲಹೆಯಾಗುತ್ತದೆ. 'ಯಾವತ್ತು ಹೋಗಬಾರ್ದುರಿ?' ಎಂದರೆ ನಮ್ಮನ್ನೇ ಕೇಳುವ ಪ್ರಶ್ನೆಯಾಗುತ್ತದೆ. ಕವನದ ಸರ್ವಾಂಗ ಮಾಲಿಕರಾದ ತಾವು ಕೇಳುಗರಾದ ನಮ್ಮನ್ನೇ ಪ್ರಶ್ನಿಸುವುದಿಲ್ಲ ಎಂದು ಭಾವಿಸುತ್ತಾ ಮೊದಲನೆಯದನ್ನೇ ತೆಗೆದುಕೊಳ್ಳುತ್ತೇನೆ. 'ಖನ್ನಢದ ಖವಿಗಳೆಲ್ಲವರೂ ನನ್ನ ಈ ಮಾಥನ್ನು ಒಫ್ಪುಥ್ಥಾರೆಂಧು' ಭಾವಿಸುತ್ತೇನೆ. ಬೇರೆ ಪ್ರಾಣಿಗಳಿಗೆ ಜಾಮೂನನ್ನು ತಿನ್ನಿಸಬಹುದೇ ತಿನಿಸಬಾರದೇ ಎಂಬುದನ್ನೂ ತಾವು ಇಲ್ಲಿ ಹೇಳಿದ್ದರೆ ಆ ತುಸು ಜ್ಞಾನವಾದರೂ ನಮ್ಮ ಮಂಕು ತಲೆಯೊಳಗೆ ಸೇರಿಬಿಡಬಹುದಾಗಿತ್ತು.

ಕರಡಿಗೆ ಜಾಮೂನಿನ ಬದಲು ಬೇರೇನಾದರೂ ತಿನ್ನಿಸಬಹುದೇ, ತಿನ್ನಿಸಬಹುದಾದರೆ ಅದೇನನ್ನು ಎಂಬುದನ್ನು ಪಾಮರನಾದ ನನ್ನಂಥವನಿಗೆ ತಾವು ತಮ್ಮ ಮುಖಕಮಲದಿಂದ ತಿಳಿಸಬೇಕು. ಬೇರೇನಾದರೂ ಎಂದರೆ ಖಾರ ತಿಂಡಿಯೋ, ಹೋಟೆಲಿನ ಊಟವೋ, ಕರಿದ ಆಹಾರವೋ, ಎಂಬುದನ್ನು ವಿಷದ ಪಡಿಸಬೇಕು. ಇಂದಿನ 'ಮುಂದುವರಿದ' ನಾಗರೀಕರಂತೆ ಅದೂ ಪಿಜ್ಜಾ, ಬರ್ಗರ್, ಪಾಸ್ತಾಗಳನ್ನು ಇಷ್ಟಪಡುತ್ತದೆಯೋ ಗೊತ್ತಿಲ್ಲ. ಆ ಕರಡಿಯು ಕನ್ನಡದ್ದಾಗಿದ್ದು, ಭಾರತಕ್ಕೆ ಸೇರಿದ್ದಾಗಿದ್ದರೆ ಈ ವಿದೇಶೀ ಆಹಾರಗಳನ್ನು ಇನ್ನೂ ರೂಢಿಸಿಕೊಂಡಿರಲಿಕ್ಕಿಲ್ಲ ಎಂದುಕೊಂಡಿದ್ದೇನೆ.

ನೀವು 'ಕರಡಿಗೆ' ಎಂದು ಹೇಳಿದ್ದೀರಿ. ಅದು ಒಂದು ಕರಡಿಯ ಬಗ್ಗೆಯೋ, ಅಥವಾ ಸರ್ವನಾಮವೋ ಎಂದು ತಿಳಿಯಲಿಲ್ಲ. ಅದು ಎಲ್ಲಾ ಕರಡಿಗಳಿಗೂ ಅನ್ವಯಿಸುತ್ತದೆಯೋ? ಇದರಲ್ಲಿ ಪುರುಷ, ಸ್ತ್ರೀ, ಇನ್ನೊಂದು ಲಿಂಗ, ಇವುಗಳಿಗೂ ಸಾರ್ವತ್ರಿಕವಾಗಿ ಅನ್ವಯವಾಗುತ್ತದೆಯೋ ಎಂದು ತಾವು ದಯವಿಟ್ಟು ವಿವರಿಸಿ ಹೇಳಬೇಕು.

'ಕತ್ಲಲ್ಲಿ' ಎಂದಿದ್ದೀರಿ, ಅರ್ಥಾತ್ ಬರೆದಿದ್ದೀರಿ. ಅಂದರೆ ದೀಪ ಹಚ್ಚಿಕೊಂಡು ತಿನಿಸಬಹುದೇ? ಬೆಳಕಿನಲ್ಲಿ ತಿನಿಸಬಹುದೇ? ಈ ವಿಷಯ ನನಗೆ ಅರ್ಥವಾಗಲಿಲ್ಲ. ಕತ್ತಲಲ್ಲಿ ಎಂದರೆ ಕರಡಿಗೆ ಬೆಳಕಿನ ಬಗ್ಗೆ ಅಲರ್ಜಿ ಇರಬಹುದೆಂದು ನಾನು

ಭಾವಿಸಬಹುದೇ? ಹಾಗಿದ್ದರೆ ಅದು ಯಾಕೆ ಒಳ್ಳೆಯ ವೈದ್ಯರನ್ನು ಕಂಡು ಸೂಕ್ತ ಚಿಕಿತ್ಸೆ ಪಡೆಯಲಿಲ್ಲ ಎಂಬುದರ ಬಗ್ಗೆ ನಿಮ್ಮಿಂದ ವಿವರಣೆಯನ್ನು ನಾನು ಬಯಸುತ್ತೇನೆ.

ಜಾಮೂನು ಎಂದರೆ ಎಲ್ಲಾ ಜಾಮೂನುಗಳೋ? ಅಂದರೆ ತಯಾರಿಸಿ ಡಬ್ಬಗಳಲ್ಲಿ ತುಂಬಿಸಿ, ತಯಾರಿಸಿದ ಮತ್ತು ಬಳಕೆ ಮಾಡಲು ಕೊನೆಯ ದಿನಾಂಕಗಳಿರುವ ಜಾಮೂನುಗಳೋ, ಅದೂ ಸಕ್ಕರೆ ಪಾಕ ಸಹಿತವೋ, ರಹಿತವೋ ಎಂಬುದು ನನಗೆ ತಿಳಿಯಲಿಲ್ಲ. ಮನೆಯಲ್ಲಿ ಮಾಡಿದ ಜಾಮೂನುಗಳು ಕರಡಿಗೆ ಪ್ರಿಯವೋ, ಅಪ್ರಿಯವೋ? ಮನೆಯಲ್ಲಿ ಮಾಡಿದ ಜಾಮೂನೆಂದರೆ ಒಂದರ ಜೊತೆ ಇನ್ನೊಂದು ಫ್ರೀ ಆಗಿ ಸದಾ ಕಾಲ ಸಿಗುವ ಜಾಮೂನು ಮಿಕ್ಸ್‌ನಿಂದ ತಯಾರಿಸಿದ್ದೋ, ಅಥವಾ ಹಾಲನ್ನು ಕುದಿಸಿ, ಕುದಿಸಿ, ಕೋವಾ ಮಾಡಿ ತಯಾರಿಸಿದ್ದೋ ಎಂಬುದನ್ನು ವಿವರಿಸಿ, ದಯವಿಟ್ಟು, ಕೃಪೆಯಿಟ್ಟು.

ಅದು ಊಟವಿಲ್ಲದೇ ಸೊರಗಿದ ವ್ಯಕ್ತಿಯಂತೆ ಕಾಣುವ, ಅಧಿಕಾರ ಕಳೆದುಕೊಂಡ ರಾಜಕಾರಣಿಯಂತೆ ಕಾಣುವ, ಒಮ್ಮೆ ಮಾತ್ರ ಮುಳುಗಿಸಿ ತೆಗೆಯಲ್ಪಟ್ಟ, ಈಗ ಪಾಕರಹಿತವಾದ ಡ್ರೈ ಜಾಮೂನನ್ನು ಇಷ್ಟಪಡುತ್ತೆಯೋ? ಅಥವಾ ಇದೇ ನಿಯಮ ಸಕ್ಕರೆ ಪಾಕದಲ್ಲಿ ತೇಲುತ್ತಿರುವ ಜಾಮೂನಿಗೂ ಅನ್ವಯವಾಗುತ್ತದೆಯೋ ಭಟ್ಟರೇ? ಅಕಸ್ಮಾತ್ ಅಧಿಕ ಯಾಲಕ್ಕಿ ಪುಡಿಯನ್ನೋ, ಪರಿಮಳದ ಎಸೆನ್ಸ್ ಅನ್ನೋ ಹಾಕಿದರೆ ನಿಮ್ಮ ಕರಡಿ ಅದನ್ನು ಇಷ್ಟ ಪಡುತ್ತದೆಯೋ?

ಕರಡಿಗೆ ಜಾಮೂನು ತಿನಿಸಬಾರದು ಎಂಬ ನಿಮ್ಮ ಸಲಹೆ ನನಗೆ ವೇದ್ಯವಾದರೂ ಕರಡಿಗೆ ಸಕ್ಕರೆ ರೋಗ ಅರ್ಥಾತ್ ಮಧುಮೇಹ ರೋಗವೇನಾದರೂ ಇದ್ದಿರಬಹುದೇ ಎಂಬ ಸಂಶಯ ನನ್ನನ್ನು ಕಾಡುತ್ತಿದೆ. ಹಾಗೇನಾದರೂ ಇದ್ದರೆ ಅದು ನಾಟಿ, ಯುನಾನಿ, ಮೊದಲಾದ ಔಷಧಗಳನ್ನು ತೆಗೆದುಕೊಳ್ಳದೇ ಇಂಗ್ಲಿಷ್ ಔಷಧವನ್ನೇ ನಂಬಿದೆಯೋ, ಅಥವಾ ಹೋಮಿಯೋಪತಿ, ಅಲೋಪತಿ, ಆಯುರ್ವೇದಗಳಿಗೆ ಮೊರೆಹೋಗಿದೆಯೋ ಎಂಬುದನ್ನು ನಾನು ಅರಿಯಲು ಬಯಸುತ್ತೇನೆ.

ಕರಡಿ ಎಂದಾಗ ನನ್ನ ಮಸ್ತಿಷ್ಕದಲ್ಲಿ ಮೂಡುವುದು ಮೃಗಾಲಯದ ಕಂಬಿಯ ಮುಸುಕಿನಲ್ಲಿ ಅಡಗಿದಂತೆ ಕಾಣುವ, ದ್ರಾಬೆ ಮುಖ ಮಾಡಿಕೊಂಡು ಇರುವ, ಬರುವ ಹೋಗುವವರನ್ನು ಕುಳಿತಲ್ಲಿಂದಲೇ ಅಭ್ಯಸಿಸುವ, ಕರಿ ದೇಹದ ಪ್ರಾಣಿಯ ನೆನಪು. ನಿಮ್ಮ ಹಾಡು ಅನ್ವಯವಾಗುವುದು ಜಾಮೂನು ಝೂ ವಾಸಿಗೋ, ವನವಾಸಿಗೋ ಎಂಬುದು ಸ್ಪಷ್ಟವಾಗಿಲ್ಲ. ದಯವಿಟ್ಟು ತಿಳಿಸಿ.

ಶಿವ ಪೂಜೆಯಲ್ಲಿ ಕರಡಿ ಬಿಟ್ಟಂತೆ, ಎಂಬುದೊಂದು ಮಾತಿದೆ. ಆ ಕರಡಿಗೂ ನೀವು ಉದ್ಧರಿಸುವ ಕರಡಿಗೂ ಏನಾದರೂ ಸಂಬಂಧ ಇದೆಯೇ? ತಿನಿಸೋಕೆ ಹೋಗಬಾರದು ಎಂದರೆ ಅದಾಗಿಯೇ ತಿನ್ನಲು ಇಷ್ಟಪಡುತ್ತದೆಯೇ ಎಂಬುದೂ ನನಗೆ ತಿಳಿದಿಲ್ಲ. ಚಿಕ್ಕ ಮರಿಯಾಗಿದ್ದು, ತಿನ್ನುವಾಗ ಮೈಮೇಲೆಲ್ಲಾ ಚೆಲ್ಲಿಕೊಂಡು, ನಂತರ ಅದಕ್ಕೆ ಇರುವೆ ಮುತ್ತಿಕೊಂಡು, ರೋಮಭರಿತ ಮೈಯಲ್ಲಿ ಕಿರಿಕಿರಿಯಾಗಿ, ಕೆರೆತವಾಗಿ, ಹೋಗಲಾಡಿಸುವ ದಾರಿ ಕಾಣದೇ ಪರಿತಪಿಸುವ ಅದರ ಕಷ್ಟದ ಪರಿಸ್ಥಿತಿಯು ನಿಮ್ಮ ಮನಸ್ಸಿನಲ್ಲಿ ಬಂದಿರಬಹುದು. ಯಾಕೆಂದರೆ ಅವುಗಳು ನಮ್ಮಂತೆ ಸಾಬೂನು ಬಳಸಿ ಸ್ನಾನ ಮಡುವುದಿಲ್ಲ. ಮೈ ಎಲ್ಲಾ ರೋಮಭರಿತವಾಗಿರುವುದರಿಂದ

ಸಾಬೂನನ್ನು ಬಳಸುವುದೂ ಸಾಧ್ಯವಿಲ್ಲ. ಅಂದರೆ ಅದರ ದೇಹ ಮಾರ್ಜನಕ್ಕೆ ಶಾಂಪೂವನ್ನೇ ಬಳಸಬೇಕು. ವಸ್ತುಶಃ ಅದು ಅರ್ಥಿಕ ದೃಷ್ಟಿಯಿಂದ ಅಸಾಧ್ಯ. ಆದುದರಿಂದ ತಿನ್ನಿಸಬೇಕೇ, ಅದಾಗಿಯೇ ತಿನ್ನುತ್ತದೆಯೇ ಎಂಬುದು ಚಿಂತಿಸಬೇಕಾದ ವಿಷಯ, ಚರ್ಚಿಸಬೇಕಾದ ವಿಷಯ, ನಿರ್ಣಯಿಸಬೇಕಾದ ವಿಷಯ.

ಮಕ್ಕಳಿಗೆ ಊಟ ಮಾಡಿಸಲು ಗೊಗ್ಗಯ್ಯ ಬರುತ್ತಾನೆ, ಚಂದಮಾಮನ್ನ ನೋಡು, ಪೊಲೀಸನು ಬಂದು ಹಿಡಿದುಕೊಂಡು ಹೋಗುತ್ತಾನೆ, ಜಾಣ ಮರಿ, ತಿಂದು ದೊಡ್ಡವನಾಬೇಕಲ್ಲವೇ, ಎಂದೆಲ್ಲಾ ಪೂಸಿ ಹೊಡೆಯುವ ತಾಯಂದಿರನ್ನು ನಾವು ದಿನಾಲೂ ನೋಡುತ್ತೇವೆ. ಕೊನೆಗೆ ಎರಡು ಏಟು ಕೊಟ್ಟಾದರೂ ತಾಯಿ ಆಹಾರವನ್ನು ಮಗುವಿನ ಬಾಯಿಗೆ ತುಂಬುತ್ತಾರೆ. ಅದು ಅಗಿಯುತ್ತೆಯೋ, ನುಂಗುತ್ತದೆಯೋ, ಉಗುಳುತ್ತದೆಯೋ ಅದು ಅದಕ್ಕೇ ಬಿಟ್ಟ ವಿಷಯ. ಇಲ್ಲಿ ಅದೇ ರೀತಿಯ ಜಾಣ್ಮೆಯನ್ನು ಉಪಯೋಗಿಸಿದರೆ ಕರಡಿಯು ಜಾಮೂನನ್ನು ತಿನ್ನಬಹುದೇ? ಬಹುದೇ? ಎಂಬುದು ನನ್ನ ಪ್ರಶ್ನೆ.

ಕೊನೆಯ ಪದ, 'ಹೋಗ್ಬಾರ್ದ್ದರೀ,' ಎಂದರೆ ಕರಡಿಯು ನಮ್ಮ ಜೊತೆಗೇ ಇರದೇ ಬೇರೆಲ್ಲೋ ಇದೆ ಎಂಬುದು ತಿಳಿಯುತ್ತದೆ. ಹೋಗಿ ತಿನ್ನಿಸಬಾರದು ಎಂಬ ಅರ್ಥ ನಿಮ್ಮ ಸಾಲುಗಳಲ್ಲಿದ್ದುದರಿಂದ ಎಲ್ಲಿಗೆ ಹೋಗಬಾರದು ಎಂಬುದು ತಿಳಿಯಲಿಲ್ಲ. ತಮ್ಮ ಮುಖಾರವಿಂದದಿಂದ ಇದನ್ನು ವಿಷದ ಪಡಿಸಬೇಕು ಸ್ವಾಮಿ ಭಟ್ಟರೇ.

ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ, ನನ್ನ ಮನಸ್ಸಿನಲ್ಲಿ ಆಗುತ್ತಿರುವ ಅಲ್ಲೋಲಕಲ್ಲೋಲಗಳನ್ನು ತಾವು ಪರಿಹರಿಸಬೇಕೆಂಬುದು ನನ್ನ ಪ್ರಶ್ನೆ ಭಟ್ಟರೇ. ದಯವಿಟ್ಟು

■

## "ಹಸಿರು ವಾಣಿ"



# ಸಮರ ಸಾರಿದುವು ಹಲ್ಲುಗಳು

ಪ್ರೇಮಾಭಟ್

ನನ್ನ ಬೋಡು ಬಾಯಿಯ ಮುಂಭಾಗದಲ್ಲಿ ನಾಲ್ಕು ಹಲ್ಲುಗಳು ಉಳಿದುಕೊಂಡಿದ್ದುವು. ಸ್ವಲ್ಪ ಸ್ವಲ್ಪ ಅಲುಗಾಡುತ್ತಿದ್ದ ಆ ನಾಲ್ಕು ಹಲ್ಲುಗಳಿಗೆ ಕ್ಯಾಪ್ ಹಾಕಿ ದಂತವೈದ್ಯನಾದ ನನ್ನ ಮಗ ಗಟ್ಟಿಮಾಡಿ ಕೂಡಿಸಿದ್ದ. ಕೆನ್ನೆಗಳೆರಡು ಒಳ ಹೋಗಿರುವುದನ್ನು ಆ ನಾಲ್ಕು ಹಲ್ಲುಗಳು ಮುಚ್ಚಿ ನನ್ನನ್ನು ಹಣ್ಣುಹಣ್ಣು ಮುದುಕಿಯಾದೆ ಎಂದು ಕಾಣಲು ಬಿಟ್ಟಿರಲಿಲ್ಲ. ನಾನೂ ಕೂಡ ಅದಕ್ಕಾಗೆ ನಾಲ್ಕು ಹಲ್ಲುಗಳನ್ನು ಕಷ್ಟ ಪಟ್ಟು ಉಳಿಸಿಕೊಂಡಿದ್ದೆ. ಎರಡು ವರ್ಷವಾಗಿತ್ತು ಕ್ಯಾಪ್ ಹಾಕಿ. ತಂಟೆ ತಕರಾರು ಮಾಡದೆ ಸುಮ್ಮನಿದ್ದುವು ಹಲ್ಲುಗಳು. ಮೊನ್ನೆಮೊನ್ನೆ ಇದ್ದಕ್ಕಿದ್ದಂತೆ ಸಮರ ಸಾರಿದವು. ಅವುಗಳ ಗುದ್ದಾಟ ನೋಡಲಾರದೆ ನೋವು ಅನುಭವಿಸಲಾರದೆ ಅಯ್ಯೋ.. ಹಲ್ಲು ನೋವು, ಅಬ್ಬಬ್ಬಾ ಹಲ್ಲು ನೋವು ನೋವು ಎಂದು ಬೊಬ್ಬಿಡತೊಡಗಿದೆ. ದವಡೆಯಿಂದ ಹರಿದು ಬರುತ್ತಿದ್ದ ನೋವು ಕಿವಿಯನ್ನು ಸವರಿಕೊಂಡು ನೆತ್ತಿಯವರೆಗೂ ವ್ಯಾಪಿಸಿ ತಲೆ ಒಂದೇ ಸಮ ಸಿಡಿಯ ತೊಡಗಿತು. ಕೆಲಸಕ್ಕೆ ಹೋಗಿರುವ ಮಗ ಬರುವವರೆಗೆ ಹೇಗೋ ಸಹಿಸಬೇಕು. ಅಬ್ಬಾ! ದೇವರೆ ಅವನು ಬರುವವರೆಗೆ ಹೇಗೆ ಸಹಿಸಲಿ ಈ ನೋವನ್ನು. ಹೆರಿಗೆ ನೋವಿಗಿಂತಲೂ ಕಷ್ಟ ಈ ಹಲ್ಲು ನೋವು, ಹೆರಿಗೆ ನೋವು ಹೊಟ್ಟೆಯಲ್ಲಿ ಮಾತ್ರ ಇರುತ್ತದೆ. ಹಲ್ಲು ನೋವು ಹಾಗಲ್ಲ. ಕಿವಿ, ತಲೆ, ಒಸಡುಗಳಲೆಲ್ಲಾ ಹರಿದಾಡಿ ಹೈರಾಣ ಮಾಡಿ ಬಿಡುತ್ತದೆ. ಹಲ್ಲು ನೋವು ಅನುಭವಿಸಿದವರಿಗೆ ಗೊತ್ತು ಯಾ ಪಾಟಿ ನೋವು ಇರುತ್ತದೆ ಎಂದು. ದಂತವೈದ್ಯನಾದ ನನ್ನ ಮಗನ ಬಳಿಗೆ ಮಧ್ಯರಾತ್ರಿ ಎಂದಿಲ್ಲ. ಬೆಳಗಿನ ಜಾವ ಎಂದಿಲ್ಲ. ಹಲ್ಲು ನೋವು ಡಾಕ್ಟ್ರೆ ಎಂದು ಬರುವುದನ್ನು ನೋಡಿದ್ದೇನೆ. ನಿದ್ದೆಯಲ್ಲಿ ಗೊರೆಯುತ್ತಿದ್ದ ಮಗನನ್ನು ಎಬ್ಬಿಸಿ ಅವನು ಮುಸುಡಿ ಊದಿಸಿಕೊಂಡು ಬಂದು ರೋಗಿಯನ್ನು ನೋಡಿ ಮಾತ್ರೆ ಬರೆದುಕೊಡುವುದೋ ಹಲ್ಲು ಕೀಳುತ್ತಲೋ ಕಳಿಸಿಕೊಡುತ್ತಿದ್ದುದನ್ನು ನೋಡಿದ್ದೇನೆ. ಇವನಿಗೆ ನಿದ್ರೆ ಬರುವವರಿಗೋ ಹಲ್ಲು ನೋವು, ಯಾವುದೇ ನೋವಾಗಿರಲಿ ಹೇಳಿ ಕೇಳಿ ಬರುತ್ತದೆಯೆ, ವೈದ್ಯರಿರುವುದೇ ನಮ್ಮ ಆಪತ್ತಿಗೆ ಎಂದು ತಿಳಿದಿರುವ ರೋಗಿ ಚಿಕಿತ್ಸೆ ಕೊಟ್ಟು ಕಳುಹಿಸದಿದ್ದರೆ ಸುಮ್ಮನಿರುತ್ತಾನೆಯೇ? ಈಗಂತು ಹೆಸರು ಕೆಡಿಸುವುದಕ್ಕೆ ಟಿ.ವಿ ಮಾಧ್ಯಮವಿದೆ. ಬಾಯಿ ಮುಚ್ಚಿಕೊಂಡು ರೋಗಿ ಎಷ್ಟು ಹೊತ್ತಿಗೆ ಬರಲಿ ಚಿಕಿತ್ಸೆ ಕೊಟ್ಟು ಕಳುಹಿಸಬೇಕು. ಆ ನೋವನ್ನು ಎಂಥವರಿಗಾದರೂ ಸಹಿಸುವುದು ಕಷ್ಟ, ಅನುಭವಿಸುವುದೂ ಕಷ್ಟ. ನಾನು ನೋವಿಗೆ ಬೆದರುತ್ತ ಅಳುತ್ತ ಎರಡು ತಲೆಭಾಗವನ್ನು ಗಟ್ಟಿಯಾಗಿ ಹಿಡಿದು ಕುಳಿತಿದ್ದೆ. ಮೊಮ್ಮಗಳು ಬಂದು ,

ಅಯ್ಯೋ ಪಾಪ ಅಜ್ಜಿಗೆ ಹಲ್ಲುನೋವಂತೆ ಎಂದಳು ಅವಳಮ್ಮನ ಕೂಡ; ನನ್ನ ಅವಸ್ಥೆ ನೋಡಿ ಕಿಸಕಿಸ ನಗತೊಡಗಿದಳು. ಅಷ್ಟು ಮಾತ್ರವಲ್ಲ ನನ್ನ ಉಳಿದ ಮೊಮ್ಮಕ್ಕಳನ್ನು ಕರೆದುಕೊಂಡು ಬಂದಳು. ನಾಲ್ಕು ಜನ ಮೊಮ್ಮಕ್ಕಳು ನನ್ನ ಸುತ್ತುವರೆದು,

ಏನಾಯ್ತಜ್ಜಿ ಏನಾಯ್ತು, ಯಾಕೆ ಅಳ್ತಿದ್ದೀಯ, ತುಂಬಾ ನೋಯ್ತಿದೆಯಾ

ಎಂದು ಏನೇನೋ ಕೇಳಿದುವು. ನನ್ನ ನೋವು ಅವಕ್ಕೆ ಹೇಗೆ ಅರ್ಥಮಾಡಿಸಲಿ, ನಾನು ಕ್ಷಣಕ್ಷಣಕ್ಕೂ ಬೊಬ್ಬೆ ಹಾಕುವುದನ್ನು ನೋಡಿ, ನನ್ನ ಹಿರಿಯ ಮೊಮ್ಮಗಳು ನನ್ನ ತಲೆ ಸವರಲು ಮುಂದೆ ಬಂದಳು. ಮೊಮ್ಮಗ ಕಾಲು ನೀವಲು ಕುಳಿತುಕೊಂಡ, ಉಳಿದ ಎರಡು ಪಿಳಿಪಿಳಿ ನೋಡುತ್ತ ಸಪ್ಪೆ ಮುಖ ಮಾಡಿಕೊಂಡು ನಿಂತಿದ್ದುವು. ಮಕ್ಕಳು ಹಾಗೆ ಒಂದು ಹೇಳಿದರೆ ಮತ್ತೊಂದು ಮಾಡುತ್ತವೆ. ನನಗೋ ಧರ್ಮ ಸಂಕಟ ಅನ್ನುವ ಹಾಗಿಲ್ಲ, ಅಗಿಯುವ ಹಾಗಿಲ್ಲ. ದೂರ ಹೋಗ್ರೋ ಎಂದು ಒಂದು ದೊಡ್ಡ ಕೂಗು ಹಾಕಿದೆ. ಎಲ್ಲಾ ಒಟ್ಟಿಗೆ ದಡಬಡನೆ ಓಡಿದುವು. ದೂರ ನಿಂತು ನನ್ನನ್ನೇ ನೋಡುತ್ತಿದ್ದವು. ನನಗೋ ಪ್ರಾಣ ಸಂಕಟ ಇಲಿಗೆ ಚೆಲ್ಲಾಟ ಎಂಬ ಹಾಗಾಗಿತ್ತು. ಬೆಳಗ್ಗೆ ಸುರುವಾದ ಹಲ್ಲು ನೋವು ರಾತ್ರಿ ಏಳುಗಂಟೆಯಾದರೂ ಕಡಿಮೆಯಾಗಲಿಲ್ಲ. ದೊಡ್ಡಪ್ಪ ಬಂದ ನನ್ನ ಪುಟ್ಟ ಮೊಮ್ಮಗು ಪುಟ್ಟ ಅಂದ. ಲಟಕ್ಕನೆ ನೆಲಕ್ಕೆ ಕೈ ಊರಿಕೊಂಡು ಎದ್ದೆ. ಕೈ ಉಳುಕಿತು. ಒಂದುಕ್ಷಣದಲ್ಲಿ ಮಣಿಗಂಟು ಊದಿಕೊಂಡಿತು. ಅದರ ನೋವು ಬೇರೆ ಅಷ್ಟಾದರೂ ವಾಕಿಂಗ್ ಸ್ಟಿಕ್ ಮರೆತು ದಡಬಡನೆಂದು ಮಹಡಿ ಹತ್ತಿದೆ.

ಹಲ್ಲು ನೋವು ಕಣೋ ಎಂದು ಮಗನ ಮುಂದೆ ನಿಂತೆ, ಕಣ್ಣುಕೆಂಪಗಾಗಿತ್ತು, ತಲೆ ಕೆದರಿತ್ತು. ಅದನ್ನು ನೋಡಿಯಾದರೂ ಅವನಿಗೆ ಸೈರಣೆ ಬೇಡವೆ.

ಬಡ್ಕೊಬೇಡ ಬಂದೆ ತಡಿ, ದಣಿದು ಬಂದಿದ್ದೇನೆ ಹೊಟ್ಟೆಗೊಂದಿಷ್ಟು ಹಾಕಿಕೊಂಡು ಬರ್ತೀನೆ ಎಂದ. ಆ ನೋವಿನಲ್ಲೂ ನನ್ನ ಕರುಳು ಚುರುಕ್ ಎಂದಿತು. ಪಾಪ ಬೆಳಗಾಗ ಎದ್ದು ಹೋಗುತ್ತಾನೆ. ರಾತ್ರಿ ಏಳೋ ಎಂಟೊ ಗಂಟೆಯಾಗಿರುತ್ತದೆ ಮನೆಗೆ ಬರುವ ಹೊತ್ತಿಗೆ. ತಿಂದು ಬರಲಿ ಎನಿಸಿದರೂ ಅವನ ಮಾತಿಗೆ ಅಂದೆ,

ತಡಿಯೋಕೆ ಇದು ಹೆರಿಗೆ ನೋವಲ್ಲ ಕಣೋ ಹೆರಿಗೆ ನೋವಾದರೆ ಮಗು ಈಚೆ ಬರುತ್ತಿದ್ದ ಹಾಗೆ ತಟ್ಟಂತ ನೋವು ನಿಲ್ಲುತ್ತದೆ. ಇದು ಹಾಗಲ್ಲ. ಹಲ್ಲು ತೆಗೆದು ಬಿಸಾಕುವವರೆಗೂ ಪ್ರಾಣ ತೆಗೆಯುತ್ತದೆ. ತಡೆಯೋಕಾಗೋಲ್ಲ ಅಯ್ಯಯ್ಯೋ ಎಂದು ಮತ್ತೆ ಬೊಬ್ಬಿಟ್ಟೆ. ಮಗನಿಗೆ ಹಲ್ಲು ನೋವಿನ ಅನುಭವವಿಲ್ಲ. ನಿಧಾನವಾಗಿ ಅವನು ತಿಂಡಿ ತಿಂದು ಬಂದ. ನಿಧಾನವಾಗಿ ನನ್ನನ್ನು ಎತ್ತಿ ಡೆಂಟಲ್ ಚೇರಿನಲ್ಲಿ ಕೂಡಿಸಿದ, ಆ... ಅಂತ ಬಾಯಿ ತೆಗಿ ಅಂದ. ಎಲ್ಲಿ ತೆಗೆಯುವುದು ನೋವಿಗೆ ಬಾಯಿ ತೆಗೆಯಲು ಬರಲಿಲ್ಲ. ಇಕ್ಕುಳದಿಂದ ಬಾಯನ್ನು ಅಗಲ ಮಾಡಿ ಬೆಳಕು ಹರಿಸಿ ನೋಡಿದ. ಹಲ್ಲುಗಳನ್ನು ಕೈಬೆರಳಲ್ಲಿ ಹಿಡಿದುಕೊಂಡು ಅಲುಗಾಡಿಸಿದ, ಅವನ ಕೈಯನ್ನು ಪಕ್ಕಕ್ಕೆ ಕಿತ್ತೆಸೆದೆ.

ಏನು ಮಾಡ್ತಿದ್ದೀಯ, ಹೀಗೆಲ್ಲಾ ವರ್ತಿಸಿದರೆ ಹಲ್ಲು ತೆಗೆಯೋಕೆ ಆಗೋದಿಲ್ಲ ಎಂದ. ಉಸಿರುಗಟ್ಟಿ ಮೌನವಾಗಿ ಕುಳಿತುಕೊಂಡೆ. ಒಸಡಿಗೆ ಒಂದು ಇಂಜಕ್ಷನ್ ಕೊಟ್ಟ. ಲಟ್ಟನೆ ಕೈ ಹಾಕಿ ನಾಲ್ಕು ಹಲ್ಲುಗಳನ್ನು ಒಟ್ಟಿಗೆ ತೆಗೆದು ಹಾಕಿದ. ಇಂಜಕ್ಷನ್ನಿನ ಪ್ರಭಾವದಿಂದ ಬಾಯಿಯ ಒಳಗೆಲ್ಲಾ ಮರಗಟ್ಟಿತ್ತು. ತೆಗೆಯುವಾಗ ನೋವಾಗಲಿಲ್ಲ. ಹಲ್ಲು ಕಿತ್ತ ಮೇಲೆ ಅಯ್ಯಪ್ಪ ಎಂದು ಒಂದು ಉದ್ಗಾರ ತೆಗೆದೆ. ನೋವಿನ ಮಾತ್ರೆ ಬರೆದುಕೊಟ್ಟ, ನುಂಗಿದೆ, ಮತ್ತೆ ನೋವೇ ಇಲ್ಲ. ಇಷ್ಟು ಹೊತ್ತು ನಾನು ಅನುಭವಿಸಿದ್ದೇನು ಎನ್ನುವುದೇ ಮರೆತು ಹೋಗಿತ್ತು. ■

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಆ**

✓ ಜಗತ್ತಿನ ಅತ್ಯಂತ ಉತ್ತಮ ಅಲಾರಂ ತಾಯಿ. 'ಏಳು ಗಂಟೆಗೆ ಎಬ್ಬಿಸು' ಎಂದು ಅಮ್ಮನಿಗೆ ಹೇಳಿದರೆ ಆಕೆ ೬ ಗಂಟೆಗೇ ಎಬ್ಬಿಸಿ 'ಇನ್ನೂ ಎದ್ದಿಲ್ವಾ ೮ ಗಂಟೆ ಆಯ್ತು ಅಂತಾಳೆ'. ಇಂತಹ ಅಲಾರಂ ಗಡಿಯಾರವನ್ನು ಡೂಪ್ಲಿಕೇಟ್ ಮಾಡಲು ಸಾಧ್ಯವೆ?

✓ ತಿರುಪತಿ ದೇವ್ರ ಕಲೆಕ್ಷನ್ ನೋಡಿ ಎಲ್ಲ ದೇವ್ರು ಸಾಹುಕಾರರು ಅಂದ್ರೆ ಹೇಗೆ?

✓ ಒಬ್ಬನ ನಿಜವಾದ ಗುಣ ತಿಳಿಯಬೇಕಾದರೆ ಅವನಿಗೆ ಅಧಿಕಾರ ಕೊಟ್ಟು ನೋಡು.

✓ ಎಲ್ಲ ಧರ್ಮಗಳನ್ನೂ ಸಹಿಸಲೇಬೇಕು. ಏಕೆಂದರೆ ಪ್ರತಿಯೊಬ್ಬರೂ ಅವರವ ಮಾರ್ಗದಲ್ಲೇ ಸ್ವರ್ಗಕ್ಕೆ ಹೋಗುತ್ತಾರೆ.

✓ ನಾಯಿಗಳು ಆಗಾಗ್ಗೆ ಕಚ್ಚುತ್ತವೆ. ಆದರೆ ಜನ ಕಚ್ಚುತ್ತಲೇ ಇರುತ್ತಾರೆ ತಮ್ಮ ಕಟುವಾದ ಮಾತುಗಳಿಂದ.

✓ ಎಕ್ಸ್‌ಪೆಕ್ಟ್ ಮೋರ್ ಫ್ರಂ ಯುವರ್‌ಸೆಲ್ಫ್ ದ್ಯಾನ್ ಅದರ್ಸ್ ಬಿಕಾಸ್ ಎಕ್ಸ್‌ಪೆಕ್ಟೇಷನ್ಸ್ ಫ್ರಂ ಅದರ್ಸ್ ಹರ್ಟ್ ಎ ಲಾಟ್ ವೈಲ್ ಎಕ್ಸ್‌ಪೆಕ್ಟೇಷನ್ಸ್ ಫ್ರಂ ಯುವರ್‌ಸೆಲ್ಫ್ ಇನ್ಸ್‌ಪೈರ್ ಎ ಲಾಟ್.

✓ ನಿದ್ದೆ ಬಂದಾಗ ಬೇಡ ಎನ್ನಬೇಡಿ. ಬೇಕು ಎಂದಾಗ ಅದು ಬರುವುದಿಲ್ಲ.

✓ ಉಡುಗೊರೆಯ ವಿರೋಧಾಭಾಸ: ನಾನು ಏನು ಕೊಟ್ಟೆ ಎಂಬುದು ನನಗೆ ಗೊತ್ತಿದೆ. ಆದರೆ ನೀನು ಏನು ಪಡೆದುಕೊಂಡೆ ಎಂಬುದು ನನಗೆ ತಿಳಿಯದು.

✓ ಪ್ರತಿ ಆಯ್ಕೆಯಲ್ಲೂ ತ್ಯಾಗ ಇದೆ. ಒಂದು ಆಯ್ಕೆ ಮಾಡಿದಾಗ ಉಳಿದೆಲ್ಲವನ್ನೂ ಬಿಟ್ಟುಕೊಟ್ಟಂತೆ ಅಲ್ಲವೆ?

✓ ಗದ್ಯ ಎಂದರೆ ಅತ್ಯುತ್ತಮ ಅನುಕ್ರಮಣೆಯಲ್ಲಿ ಪದಗಳು. ಪದ್ಯ ಎಂದರೆ ಅತ್ಯುತ್ತಮ ಪದಗಳ ಅತ್ಯುತ್ತಮ ಅನುಕ್ರಮಣೆ.

✓ ವ್ಯಂಗ್ಯಚಿತ್ರವನ್ನು ಅಪರಾಧ ಎಂದು ಪರಿಗಣಿಸಿದರೆ ಪ್ರಜಾಪ್ರಭುತ್ವ ಒಂದು ಜೋಕ್ ಆಗುತ್ತದೆ.

✓ ವಿ ಹ್ಯಾವ್ ಟು ಹ್ಯಾವ್ ದಿ ವಿಲ್ ಟು ಬಿ ಸರ್‌ಪ್ರೈಸಡ್ ಬೈ ಲೈಫ್.

✓ ಯುದ್ಧ ಅಂದರೆ ನಾವೆಲ್ಲ ಉತ್ಪ್ರೇಕ್ಷೆ ಮಾಡೋ ದೇಶಭಕ್ತಿ ಅಲ್ಲ. ಕಾದಾಡುತ್ತಾ ವೀರ ಮರಣ ಹೊಂದೋದು ಅಲ್ಲ.

# ಸೀಳೋದ್ ಸೀಳ್ರಿ ಸೀಳಬಾರದ್ ಸೀಳಬ್ಯಾಡಿ

**ಶ್ರೀನಾಥ್ ಭಲ್ಲೆ, ರಿಚ್ಮಂಡ್**

ಮೊದಲಿಗೆ ಸಕಾರಾತ್ಮಕಾಗಿಯೇ ಆಲೋಚಿಸಿ... 'ಸ' ಅಕ್ಷರವನ್ನು ಸೀಳೋಕ್ಕಾಗುತ್ತಾ? ಈಗ ನಕಾರಾತ್ಮವಾಗಿ ಆಲೋಚಿಸಿ. 'ನ' ಎಂಬ ಅಕ್ಷರವನ್ನು ಸೀಳೋಕ್ಕಾಗುತ್ತಾ? ಈಗ ಮುಂದೆ ಹೋಗೋಣ.... ಸೀಳಬಲ್ಲ ಅಥವಾ ಸೀಳಬಲ್ ಯಾವುವು? ಉದಾಹರಣೆಗೆ 'ಪ', 'ದ', ಮತ್ತು 'ಬ'. ಸೂಕ್ಷ್ಮವಾಗಿ ಗಮನಿಸಿದರೆ ಸೀಳೋಕ್ಕೆ ಅರ್ಥಾತ್ ಗೀಟು ಎಳೆಯೋಕ್ಕೆ ಜಾಗ ಇರಬೇಕು. ಆದರೆ ಫ ಅನ್ನೋದು ಹುಟ್ಟುತ್ತಲೇ ಸೀಳ್ಕೊಂಡ್ ಹುಟ್ಟಿದೆ ಎನ್ನಬಹುದು. ಸೀಳಿಲ್ಲದ 'ಫ' ಅಕ್ಷರ ಇಲ್ಲ.

ಗೀಟು ಬರೆಯೋಕ್ಕೆ ಜಾಗ ಇದ್ರೂ 'ಒ' 'ಓ' ಇತ್ಯಾದಿ ಅಕ್ಷರಗಳಿಗೆ ಸೀಳು ಭಾಗ್ಯ ಇಲ್ಲ. ಹಾಗೆಲ್ಲಾ ಸ್ವರಾಕ್ಷರಗಳನ್ನ ಸೀಳೋದ್ ಇಲ್ಲ ಅಂತ ಹೇಳಬಹುದು. ಗೀಟು ಬರೆಯೋಕ್ಕೆ ಜಾಗ ಇದ್ರೂ 'ವ' ಸೀಳು ಭಾಗ್ಯ ಇಲ್ಲ. ಹಾಗೆಲ್ಲಾ ಅವರ್ಗೀಯ ವ್ಯಂಜನಗಳನ್ನ ಸೀಳೋದ್ ಇಲ್ಲ ಅಂತ ಹೇಳಬಹುದು. ವರ್ಗೀಯ ವ್ಯಂಜನದಲ್ಲಿ 'ಮ' ಅಕ್ಷರಕ್ಕೂ ಈ ಭಾಗ್ಯ ಇಲ್ಲ.

ಹೀಗಾಗಿ ಏನಾಗಿದೆ ಅಂದ್ರೆ ಸೀಳಬಲ್ಲ ಅಕ್ಷರಗಳನ್ನೇ ತಮಗಿಷ್ಟ ಬಂದ ಹಾಗೆ ಸೀಳೋದು ಈಗ ಅಭ್ಯಾಸವಾಗಿ ಹೋಗಿದೆ. 'ದ', 'ಧ' 'ಬ' 'ಭ' ಅಕ್ಷರಗಳು ಅಕ್ಷರಮಾಲೆಯಲ್ಲಿ ತಮ್ಮದೇ ಸ್ಥಾನ ಹೊಂದಿದ್ದರೂ ಅವುಗಳನ್ನು ಒಂದರ ಬದಲಿಗೆ ಮತ್ತೊಂದನ್ನು ಬಳಸುವುದು ಅಭ್ಯಾಸವಾಗಿದೆ ಎನ್ನಬಹುದು. ಇಷ್ಟು ಹೇಳಿ ಈ ಸೀಳು ಕಥಾನಕ ಮುಂದುವರೆಸೋಣ.

ಕೃತಯುಗದಿಂದ ನೋಡ್ಕೊಂಡು ಬರೋಣ ಅಂತ ಒಮ್ಮೆ ಆಲೋಚಿಸಿದೆ. ಅಲ್ಲಿ ಮಹಾವಿಷ್ಣುವಿನ ನಾಲ್ಕು ಅವತಾರಗಳಿವೆ. ಆದರೆ ಮೊದಲ ಮೂವರು ಏನೂ ಸೀಳಲಿಲ್ಲ. ನರಸಿಂಹಾವತಾರದಲ್ಲಿ ಸೀಳುವಿಕೆ ಇದೆ. ಅದೂ ಎರಡು ಬಾರಿ. 'ಯಾವ ಕಂಬದಲ್ಲಿದ್ದಾನೆ ಆ ನಿನ್ನ ವಿಷ್ಣು' ಎಂದು ತಡಕಾಡುತ್ತಾ ಕೊನೆಗೆ ಒಂದು ಕಂಬವನ್ನು ತನ್ನ ಗದೆಯಿಂದ ಬಡಿದಾಗ, ಮಹಾವಿಷ್ಣುವು ನರಸಿಂಹನ ಅವತಾರ ತಾಳಿ ಕಂಬವನ್ನು ಸೀಳಿ ಹೊರಬರುತ್ತಾನೆ. ಆ ನಂತರ, ಹಿರಣ್ಯಕಶಿಪುವನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡ ನರಸಿಂಹ ತನ್ನ ನಖಗಳಿಂದ ಅವನ ಕರುಳನ್ನು ಬಗೆಯುತ್ತಾನೆ. ಆದರೆ ಬಗೆಯುವುದೇ ಬೇರೆ, ಸೀಳುವುದೇ ಬೇರೆ ಅಲ್ಲವೇ? ಇಲ್ಲಿ ಸೀಳುವಿಕೆ ಎಲ್ಲಿದೆ? ಕರುಳನ್ನು ಬಗೆದು ತೆಗೆಯುವ ಮುನ್ನ ಸೀಳಲಾಗಿತ್ತು ಅನ್ನೋದು ಸೂಕ್ಷ್ಮ ವಿಚಾರ. ತಾನೊಂದು ಬಗೆದರೆ ರಕ್ಕಸ, ಬೇರೊಂದ ಬಗೆಯೋದೇ ದೈವ! ಬಗೆಯೋದ್ರಲ್ಲಿ ಬಗೆ ಬಗೆ ಇದೆ ಅಂತಾಯ್ತು.

ತ್ರೇತಾಯುಗದಲ್ಲಿನ ಅವತಾರಿಗಳು ಪರಶುರಾಮ ಮತ್ತು ರಾಮ. ಇಪ್ಪತ್ತೊಂದು ಬಾರಿ ಭೂಪ್ರದಕ್ಷಿಣೆ ಮಾಡಿ ಕ್ಷತ್ರಿಯರ ರುಂಡಗಳನ್ನು ಚೆಂಡಾಡಿದ ಎಂದು ಓದಿದ್ದೇವೆ. ಚೆಂಡಾಡುವ ಮುನ್ನ ಆ ತಲೆ ಎಂಬ ಚೆಂಡು ಕೈಯಲ್ಲಿ ಸಿಗಬೇಕಾದರೆ ಕುತ್ತಿಗೆ ಸೀಳಲೇಬೇಕು ಅಲ್ಲವೇ? ಹಾಗಾಗಿ ಪರಶುರಾಮ ಸೀಳಿದ್ದಾನೆ ಅಂತಾಯ್ತು. ಇನ್ನು ಶ್ರೀರಾಮ ಬಾಣ ಎಂದೂ ಗುರಿ ತಪ್ಪಿಲ್ಲ

ಅನ್ನೋದು ಎಲ್ಲರಿಗೂ ಗೊತ್ತೇ ಇದೆ. ಸುಗ್ರೀವನಿಗೆ ವಚನ ಕೊಟ್ಟಂತೆ ವಾಲಿಯ ಗುಂಡಿಗೆಯನ್ನೇ ತನ್ನ ಬಾಣದಿಂದ ಸೀಳಿದ ಶ್ರೀರಾಮ.

ಮುಂದೆ ನನ್ನ ನೆಚ್ಚಿನ ದ್ವಾಪರಯುಗ. ಬೃಹದ್ರಥ ಮಹಾರಾಜನು ಋಷಿವರ್ಯ ನೀಡಿದ ಹಣ್ಣನ್ನು ಸಮನಾಗಿ ಎರಡು ಭಾಗ ಮಾಡಿ ತನ್ನಿಬ್ಬರು ರಾಣಿಯರಿಗೆ ನೀಡಿದ ಫಲವಾಗಿ, ಒಂದು ದೇಹದ ಎರಡು ಭಾಗಗಳು ಒಬ್ಬೊಬ್ಬ ರಾಣಿಯಲ್ಲಿ ಜನಿಸಿತು. ಈ ಸೀಳಿದ ದೇಹಗಳಿಂದ ಮಾಡೋದೇನಿದೆ ಅಂತ ಎಸೆಯುತ್ತಾನೆ. ಸೀಳಿದ ಭಾಗಗಳನ್ನು ಸೇರಿಸಿದವಳು ರಕ್ಕಸಿಯಾದ 'ಜರಾ'. 'ಸ್ಪ್ಲಿಟ್' ಆಗಿದ್ದವ 'ಜಾಯಿನ್' ಆಗಿ ಹುಟ್ಟಿದವ ಜರಾಸಂಧ. ಮುಂದೆ, ಅವನೊಡನೆಯ ಭೀಮ ಯುದ್ಧ ಮಾಡುವಾಗ ಅವನನ್ನು ಇಬ್ಭಾಗವಾಗಿ ಸೀಳಿ ಎಸೆದಾಗಲೆಲ್ಲಾ ಅವನು ಮತ್ತೆ ಸೇರಿಕೊಂಡೇ ಮತ್ತೆ ಯುದ್ಧಕ್ಕೆ ಬರುತ್ತಿದ್ದ. ಆಗ ನಮ್ಮ ಶ್ರೀಕೃಷ್ಣ ಪರಮಾತ್ಮ ಒಂದು ಹುಲ್ಲುಕಡ್ಡಿಯನ್ನು ತೆಗೆದುಕೊಂಡು ಅದನ್ನು ಸೀಳಿ ವಿರುದ್ಧ ದಿಕ್ಕಿನಲ್ಲಿ ಎಸೆದ. ಅದರಂತೆಯೇ ಭೀಮನು ಜರಾಸಂಧನನ್ನು ಸೀಳಿ ಮತ್ತೆ ಸೇರಿಕೊಳ್ಳಲಾಗದಂತೆ ವಿರುದ್ಧ ದಿಕ್ಕಿನಲ್ಲಿ ತೋರುವಂತೆ ಎಸೆದ.

ಇನ್ನು ನಮ್ಮ ಕಲಿಯುಗದ ಮಹಿಮೆಗಳೇ ಅಪಾರ, ಮುಖ್ಯವಾಗಿ ಬರವಣಿಗೆಯಲ್ಲಿ. ಮಹಾಭಾರತದ ಬುದ್ಧಿ ಜೀವಿ ಎಂದೇ ಹೆಸರಾದ ವಿದುರ, ಪಾಂಡವರಿಗೆ ಬಹಳ ಸಹಾಯ ಮಾಡಿದ್ದವ ಮತ್ತು ಶ್ರೀಕೃಷ್ಣಭಕ್ತ. 'ವಿಧುರ' ಎಂದರೆ ಹೆಂಡತಿಯನ್ನು ಕಳೆದುಕೊಂಡ ಗಂಡ. ಒಂದಕ್ಕೊಂದಕ್ಕೆ ಏನೇನೂ ಸಂಬಂಧವಿಲ್ಲ. ಆದರೂ 'ವಿದುರ' ಎನ್ನುವಾಗ 'ವಿಧುರ' ಎಂದು ಬರೆಯುತ್ತಾರೆ, 'ವಿಧುರ' ಎನ್ನುವಾಗ 'ವಿದುರ' ಎಂದು ಬರೆಯುತ್ತಾರೆ. ನಾನು ಹೇಳ್ತಿರೋದು ಇಷ್ಟೇ, ವಿದುರ ಒಬ್ಬ ದಿವ್ಯಾತ್ಮ ಹಾಗಾಗಿ ಸೀಳಬೇಡಿ. ವಿಧುರ ಎಂದು ಬರೆಯುವಾಗ 'ದು' ಅಕ್ಷರವನ್ನು ಮಾತ್ರ ಸೀಳಿ.

ಹೀಗೇ ಒಂದು ಬಾರಿ ಬಾರಿನಲ್ಲಿ ಭಾರೀ ಜಗಳವಾಯ್ತು. ಎಂದು ಬರೆಯುವಾಗ ಸೀಳುಪ್ರಿಯರಿಗೆ ಹಬ್ಬ ಎನ್ನಬಹುದು. ಒಂದು ಭಾರಿ ಬಾರಿನಲ್ಲಿ ಬಾರೀ ಜಗಳವಾಯ್ತು ಎಂದು ಬರೆದದ್ದನ್ನು ನಾನೇ ಓದಿದ್ದೆ. ಭಾರಿ ಬಾರು ಎಂದರೆ ಯಾವ ಲೆವೆಲ್ ಅಂತಲೇ ಅರ್ಥವಾಗಲಿಲ್ಲ, ಬಾರೀ ಜಗಳ ಅಂದ್ರೇನು? ಬಾರನ್ನು ಸೀಳಬೇಡಿ, ಜೇಬನ್ನು ಸೀಳೋದು ಅದರ ಕೆಲಸ. 'ಒಂದು ಬಾರಿ' ಎಂದಾಗ 'ಒನ್ಸ್' ಅನ್ನೋ ಅರ್ಥ ಬರುತ್ತೆ. 'ಭಾರೀ' ಅನ್ನೋದು 'ಸಿಕ್ಕಾಪಟ್ಟೆ' ಅನ್ನೋ ರೀತಿ ಬಳಸುತ್ತಾರೆ. 'ಭಾರೀ ರಿಯಾಯಿತಿ, ಭಾರೀ ಭರ್ಜರಿ ಬೇಟೆ' ಇತ್ಯಾದಿ...

ಇದೇ 'ಬ'ಕಾರ ಸೀಳುವಿಕೆಯ ಮತ್ತೊಂದು ಉದಾಹರಣೆ ಎಂದರೆ 'ಬಾವಿ' ಮತ್ತು 'ಭಾವಿ'. 'ಬಾ'ಕಾರವನ್ನು ಸೀಳಿದಾಗ, ಸೀಳದಿದ್ದಾಗ ಅರ್ಥವೇ ಸಂಪೂರ್ಣ ಭಿನ್ನ. ಬಾವಿಯಲ್ಲಿ ನೀರು ಸಿಗುತ್ತೆ (ಇದ್ದರೆ) ಅದರಿಂದ ನೀರನ್ನು ಸೇದಿಕೊಂಡು ದೈನಂದಿನ ಕೆಲಸಗಳಿಗೆ ಬಳಸುತ್ತಾರೆ. ಇಂಥಾ ಪವಿತ್ರವಾದ ಬಾವಿಗೂ ಕಲ್ಲುಹಾಕುವವರು ಇರ್ತಾರೆ. ಯಾರು ಅಂದ್ರಾ, ಅದೇ ಬಾವಿಗೆ ಹಾರಿ ಪ್ರಾಣ ಕಳೆದುಕೊಳ್ಳುವವರು. 'ಭಾವಿ' ಎಂದರೆ 'ಮುಂದಿನ' / ಫ್ಯೂಚರ್'' ಅನ್ನೋ ಅರ್ಥದಲ್ಲಿ ಬಳಸಬೇಕು. ಹುಟ್ಟುವ ಕೂಸನ್ನು ಕುರಿತು 'ಭಾವೀ ಭಾರತದ ಪ್ರಜೆ' ಎನ್ನಬಹುದು. 'ಭಾವೀಪತ್ನಿ / ಭಾವೀಪತಿ' ಅಂತ ಯಾರೂ ನುಡಿಯೋದೇ ಇಲ್ಲ ಬದಲಿಗೆ ಫಿಯಾನ್ಸಿ ಎನ್ನುತ್ತಾರೆ. ಆದರೆ ಇಲ್ಲೂ ಕೊಂಚ ಭಿನ್ನತೆ ಇದೆ ಎಂಬ ಅರಿವು ಹಲವರಿಗೆ ಇಲ್ಲ. ಎಂಗೇಜ್ ಆಗಿರೋ ಗಂಡಿಗೆ

ಫಿಯಾನ್ಸ್ ಎನ್ನಬೇಕು. ಎಂಗೇಜ್ ಆಗಿರುವ ಹೆಣ್ಣಿಗೆ ಫಿಯಾನ್ಸಿ ಎನ್ನಬೇಕು. ಒಟ್ಟಾರೆ ಹೇಳೋದ್ ಇಷ್ಟೇ, ಭಾವಿಯನ್ನು ಪಾಪ ಸೀಳದೇ ಬಾವಿ'ಗೆ ನೂಕಬೇಡಿ.

ಬಡತನದ ರೇಖೆಯಿಂದ ಕೆಳಗೆ ಇರುವವನು ಬಡವ. 'ಕತ್ತೆ ಭಡವ' ಅಂಬೋದು ಬೈಗುಳ. ಬಡವನಾದವನು ಭಡವ ಅಲ್ಲ, ಹಾಗೆಯೇ ಭಡವ ಸಾಮಾನ್ಯವಾಗಿ ಬಡವ ಆಗಿರೋಲ್ಲ ಎನ್ನಬಹುದು.

ಒಮ್ಮೆ ಒಂದು ಕನ್ನಡ ಕಿರು ಸಿನಿಮಾ ಟೈಟಲ್ ಕಾರ್ಡ್ ನೋಡ್ತಿದ್ದೆ. ಅದರಲ್ಲಿನ ಬಳಕೆ ನಿಜಕ್ಕೂ ಖೇದಕರವಾಗಿತ್ತು. ಮಧ್ಯಪಾನ ನಿಷೇಧ ಅಂತೇನೋ ಬರೆದಿತ್ತು. ಮಧ್ಯ ಅಂದ್ರೆ ಸೆಂಟರ್ . ಮದ್ಯ ಅಂದ್ರೆ ನಿಶೆ ಬರಿಸುವ ಪಾನೀಯ. ಮದ್ಯಪಾನ ಸರಿ, ಅರ್ಥಾತ್ ಪದಪ್ರಯೋಗ ಸರಿ. ಆದರೆ ಮಧ್ಯಪಾನ ಎಂದಾಗ ಏನೇನೋ ಅರ್ಥಕೊಡುತ್ತೆ.

ಈಗ ಭಾಷಾಬಳಕೆಯಿಂದ ಕೊಂಚ ಬೇರೆ ಕಡೆ ದೃಷ್ಟಿ ಹರಿಸೋಣ. ಹುಟ್ಟಿದ ಮಕ್ಕಳಲ್ಲಿ ಕಾಣುವ ನ್ಯೂನತೆಗಳಲ್ಲಿ ಒಂದು ಸೀಳು ತುಟಿ. ಈ ಸೀಳುತುಟಿಯ ಮಕ್ಕಳಿಗೆ ಹಾಲು ಕುಡಿಯುವುದಕ್ಕೂ ತೊಂದರೆಯಾಗುತ್ತದೆ ಮತ್ತು ಮುಂದೆ ಮಾತನ್ನು ಆಡಲೂ ಕಷ್ಟಪಡುತ್ತಾರೆ.

ಪಾದಗಳ ಹಿಂಭಾಗದಲ್ಲಿ ಹಲವರಿಗೆ ಬಿರುಕು ಮೂಡಿರುತ್ತದೆ. ಇದೇನೂ ದೊಡ್ಡ ವಿಷಯವಲ್ಲ, ಆದರೆ ವಿಶ್ವಸುಂದರ / ವಿಶ್ವಸುಂದರಿ ಸ್ಪರ್ಧೆಯಲ್ಲಿ ಭಾಗವಹಿಸುವುದಾದರೆ ಮಾತ್ರ ಇದು ಮಹಾ ತಾಪತ್ರಯ. ಕೆಲವರು ಇದನ್ನು ಬಿರುಕು ಅಂತಾರೆ ಕೆಲವರು ಇದನ್ನು ಸೀಳು ಅಂತಾರೆ. ಟೈಟಲ್ ಏನೇ ಇರಲಿ ಇದೊಂದು ಹಿಂಸೆ. ಕೆಲವರು ಮಾತನಾಡುತ್ತಾ ಕೂತಿರುವಾಗ ಆ ಸೀಳಿನ ಸುತ್ತಲಿನ ಒಣಗಿದ ಚರ್ಮವನ್ನು ಕಿತ್ತುವ ಅಭ್ಯಾಸ ಮಾಡಿಕೊಂಡಿರುತ್ತಾರೆ. ಕೆಲವೊಮ್ಮೆ ಹಾಗೆ ಕಿತ್ತುವಾಗ ರಭಸವಾಗಿ ಕಿತ್ತಿ ರಕ್ತವನ್ನೂ ಸೋರಿಸುತ್ತಾರೆ.

ಬಹಳ ವರ್ಷಗಳ ಹಿಂದಿನ ಮಾತು. ನಮ್ಮ ಕಚೇರಿಗೆ ಬರುತ್ತಿದ್ದ ಒಬ್ಬ ಪೋಸ್ಟ್ ಮ್ಯಾನ್ ಬಗ್ಗೆ ಆಫೀಸಿನವರು ಅವನ ಕಣ್ಣುಗಳು ಬಹಳ ವಿಶೇಷವಾದದ್ದು ಅನ್ನೋ ರೀತಿಯಲ್ಲಿ ಮಾತನಾಡಿಕೊಳ್ಳುತ್ತಿದ್ದರು. ಮರುದಿನ ಆತ ಬಂದಿದ್ದ ವೇಳೆಯಲ್ಲಿ ನಾನು ಫ್ರಂಟ್ ಆಫೀಸ್‌ಗೆ ಬಂದೆ. ಆತ ನನಗೆ ಬೆನ್ನು ಮಾಡಿ ನಿಂತಿದ್ದ. ಅವನು ತಿರುಗಲಿ ಅಂತ ಕಾದಿದ್ದೆ. ಒಮ್ಮೆ ಅವನು ತಿರುಗಿ ನನ್ನ ನೋಡಿದ ಅಷ್ಟೇ! ನನಗೆ ಒಂದು ಹೆಜ್ಜೆ ಹಿಂದೆ ಇಡುವ ಹಾಗಾಯ್ತು. ಆತನದ್ದು ಸಾಮಾನ್ಯ ಕಂಗಳಲ್ಲ ಹದ್ದಿನ ಕಂಗಳು ಎನ್ನಬಹುದು. ಒಮ್ಮೆ ನೋಡಿದರೆ ದೇಹವನ್ನೇ ಸೀಳಿಬಿಡುವಂಥಾ ದೃಷ್ಟಿ ಆತನದ್ದು. ಆದರೆ ಸ್ವಭಾವ ಒಳ್ಳೆಯದ್ದು ಅಂತ ಕೇಳಿದ್ದೆ. ಯಾಕೆ ಹೇಳಿದೆ ಅಂದ್ರೆ ಈ ಸೀಳುವಿಕೆ ಅನ್ನೋದು ಫಿಸಿಕಲ್ ಆಗಿರಲೇಬೇಕು ಅಂತೇನಿಲ್ಲ.

ಈ ಸೀಳು ಕಥಾನಕದಲ್ಲಿ ತಪ್ಪು ಒಪ್ಪುಗಳು ಇರಬಹುದು. ನಾನೆಂದೂ ನಾ 'ಬಲ್ಲೆ' ಅಂತ ಹೇಳಿಕೊಂಡಿಲ್ಲ, ನೀವೂ ಹಾಗೆ ಹೇಳದಿರಿ. ಯಾಕೆ ಅಂದ್ರೆ ನಾನು 'ಬಲ್ಲೆ' ಅಲ್ಲ, ನನ್ನ ಸೀಳಿ, ನಾನು ಭಲ್ಲೆ!

*ಸೌಜನ್ಯ: ಒನ್‌ಇಂಡಿಯಾ ಕನ್ನಡ*

■

TEMPLE OF KNOWLEDGE

# BEECHI VIDYA KENDRA

Email: admin@beechi.in
Web: www.beechi.in
Mob: 9740968677, 9035302302, 9035007003

PLACEMENT SERVICES FOR:

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG



Civil Contractors for
Complete Construction Activities
Mob: 9740968677

# ಜೀವು ಈ ಗುಟ್ಟು ನಿನ್ನಲ್ಲೇ ಇರಲಿ.

(ಕೀರ್ತಿಶೇಷ ಪಿ.ಜಿ. ವುಡ್ಹೌಸ್ ರವರ–ಜೀವ್ಸ್, ಬೆರ್ಟಿ ವೂಸ್ಟರ್–ತಿಳಿ ಹಾಸ್ಯ ಸಿಂಚಿತ ಕಥಾನಕ ಶೈಲಿಯಲ್ಲಿ)

**ಎಚ್. ಅರ್. ಹನುಮಂತ ರಾವ್**

ಭಾದ್ರಪದ ಶುಕ್ಲ ಸೋಮವಾರ, ನನಗಿನ್ನೂ ಚೆನ್ನಾಗಿ ಜ್ಞಾಪಕವಿದೆ.ಯುಗಾದಿ ಹಬ್ಬದ ಮಾರ್ನೇ ದಿನ. ಕಚೇರಿಯ ಕೆಲ್ಸ ಮುಗಿಸಿ, ಸಂಜೆ ಮನೆಯ ಹೊಸಲು ದಾಟುತ್ತಿದ್ದಂತೆ, ಒಳಗಿಂದ ಯಾರೋ ಅಪಸ್ವರದಲ್ಲಿ ಗಿಟಾರ್ನ ನುಡಿಸುವ ಧ್ವನಿ ತೇಲಿಬಂದಿತ್ತು.ಬಾಗಿಲ ತೆರದ ಜೀವು –ನನ್ನ ಪರಿಚಾರಿಕ, ಆಪದ್ಭಾಂದವನೂ ಕೂಡ ಹಲವು ವೇಳೆ–ನನ್ನ ಪ್ರಶ್ನಾರ್ಥಕ ಚಿನ್ಹೆಯ ಮುಖಭಾವ ಕಂಡು, 'ನಿಮ್ಮ ಶ್ರೀಕಂಠೂ ಸಾರ್, ಚಿಕ್ಕಮಗಳೂರಿಂದ ರಾತ್ರಿ ಟ್ರೇನಲ್ಲಿ ಬಂದರು. ನಿಮ್ಗಿಟಾರ್ನಲ್ಲಿ ದಾಸರ "ನೀನ್ಯಾಕೋ, ನಿನ್ನ ಹಂಗ್ಯಾಕೋ" ನುಡಿಸುವ ಪ್ರಯತ್ನದಲ್ಲಿದ್ದಾರೆ'. 'ಅರ್ಥವಾಯಿತು, ಅದೇ ನಮ್ಮ ಸಮಸ್ಯೆ ಕೂಡ, ದಾಸರೇನಾದ್ರೂ ಈ ನುಡಿ ಕೇಳಿದ್ರೆ ಎದ್ಬಂದ್ ಕೋಪದಲ್ಲಿ ಎದೆಗೆ ಒದ್ಬಿಟ್ಟಾರೋ ಶ್ರೀಕಂಠೂ, ಅದನ್ನ ಮೊದ್ಲೆತ್ತಿಡು, ನನ್ಗಿಟಾರ್ಗೆ ಬಂದಿದೆ ಗ್ರಹಚಾರ, ಅದಿನ್ನ ಹೊಸ್ದು, ಅಲ್ದೆ, ಸುತ್ಮುತ್ಲೂ ಇರೋ ಜನ ಗೌರವಸ್ತರು, ಏನೋ ಗಲಾಟೆ ಅಂತ ಕಂಪ್ಲೇಂಟ್ ಕೊಟ್ಟಾರು. ಇಂಥ ಮಂಗ ಮಾನವ್ರನ ನೋಡೇ ದಾಸರೂ ಅ ಹಾಡನ್ನ ಕಟ್ಟಿರ್ಬೇಕು.ಅದಿರ್ಲಿ, ಊರ್ನಲ್ಲಿ ಎಲ್ಲಾ ಸೌಖ್ಯವ? ಜಾನ್ಕೀರಾಮ ಮಾವಂಗೆ ಇನ್ಕಂ ಟ್ಯಾಕ್ಸ್ ಸಮಸ್ಯೆ ಏನೂ ಇಲ್ಲ ತಾನೆ? ಚಿತ್ರ ನೆಮ್ಮದಿಯಾಗಿದಾಳಾ ನಿಂಭಾವ ಮೂರ್ತಿ ಜೊತೇಗೆ?

ಒಳಗೆ ಹೋಗಿ ಆರಾಮ ಕುರ್ಚಿಯಲ್ಲಿ ಕೂಡುತ್ತಿದ್ದಂತೆ, ಶ್ರೀಕಂಠೂ ನನ್ನೆದುರು ಬಂದು ಕೂತ. ಜೀವು ಪಕೋಡ, ಕಾಫಿ ತಂದಿಟ್ಟು ಸದ್ದಿಲ್ಲದೆ ಮಾಯವಾದ. ಚಿಕ್ಕಂದಿನಿಂದ ತಾಯಿಯಿಲ್ಲದೆ ತಬ್ಬಲಿಯಾದ ನನ್ನ, ನನ್ನ ಅಕ್ಕನನ್ನ ಪ್ರೀತಿಯಿಂದ ಸಾಕಿದ ರೇಖಾ ಸೋದರತ್ತೆಯ ಮುದ್ದಿನ ಮಗ ಈ ಶ್ರೀಕಂಠು. ಎಂಬಿಎ ಮುಗಿಸಿ ಉದ್ಯೋಗಕ್ಕಾಗಿ ಅಂಡಲೆಯುತ್ತಿದ್ದವ, ನನಗಿಂತ ಒಂದೆರಡು ವರ್ಷ ಚಿಕ್ಕವ, ಸ್ವಭಾವತ: ಸ್ನೇಹಪರ. ಈಗೀಗ ಚಿತ್ರಕಲೆಯಲ್ಲಿ ವಿಶೇಷ ಆಸಕ್ತಿ. ಆದರೆ ಇವನಿಗಿರುವ ಮುಖ್ಯ ದುರಭ್ಯಾಸಗಳೆಂದರೆ 1.ಯಾವುದೇ ವಾದ್ಯ ಎಲ್ಲೇ ಸಿಕ್ಕರೂ, ಅದನ್ನ ಹುಚ್ಚಾಪಟ್ಟೆ ನುಡಿಸಿ ಕೆಡಿಸಿಡುವುದು, 2.ಉಗುರು ನಿರಂತರ ಕಡಿಯುತ್ತಲೇ ಇರುವುದು, 3.ಪೇಪರ, ಪೇನ ಸಿಕ್ಕರೆ ತೋಚಿದಂತೆ ಗೀಚಿ, ತನ್ನ ಕಲೆಯನ್ನ ಪ್ರಸಿದ್ಧ ಕಲಾವಿದರೊಂದಿಗೆ ಹೋಲಿಸಿ ಹಿಗ್ಗುವುದು, 4.ಇತರರೊಂದಿಗೆ ಮಾತಾಡುವಾಗ ಒಂಟಿಕಾಲಲ್ಲಿ ನಿಂತು, ಆಗಾಗ್ಗೆ ಕಾಲುಗಳನ್ನ ಬದಲಿಸಿಕೊಳ್ಳುತ್ತ, ಪಿಳಿಪಿಳಿ ಕಣ್ಣಬಿಡುತ್ತ ತೊದಲುವುದು.

'ಎಲ್ಲ ಓಕೆ, ಎಂಥದೂ ಸಮಸ್ಯೆ ಇಲ್ಲ, ನಾಳೆ ನೀನು ಚಿತ್ರ ಕಲಾಶಾಲೇಲಿ ನನ್ನ ಅಪ್ಲಿಕೇಶನ್ ಕೊಟ್ಟು ಸೇರ್ಸೋ ದಾರಿ ನೋಡು', 'ಅಷ್ಟೇ ತಾನೆ, ಹೇಗಿದ್ರೂ ನೀ ಗೋಡೆ ಮೇಲ್ಗೀಚೋದ್ನ ತೋರ್ಸಿದ್ರೆ ಅವ್ರೇ ಕಣ್ಣೀರ್ಹಾಕ್ಕೊಂಡ್ ಯಾವ್ದೋ ಬಚ್ಚಲ್ತಿಕ್ಕೋ ಬ್ರಷ್ನ ನಿನ್ಕೈಗೆ ಕೊಟ್ಟು 'ಸರಿ ನಡೀ, ಎ ಕ್ಲಾಸ್ಗೆ ಸೇರ್ಕೋ ಮರಿ, ಅಂತೇಳೀ ಸಾಗ ಹಾಕ್ತಾರೆ'. 'ನೋಡು, ನಂಗ್ಸೀಟು ಸಿಗಿಲಿಲ್ಲಾಂದ್ರೆ ನಿನ್ನ, ನೆಪ್ಪಿಟ್ಕೋ ನನ್ನನ್ನಲ್ಲ, ನಾಗೂ ಆಂಟಿ ಮುಂದೆ ನಿಲ್ಸಿ ಬಲಿಪಶು ಮಾಡಿ, ಇಬ್ರು ಅತ್ತೇರೂ 'ಒಟ್ಗೇ ತೋರಣ

ಕಟ್ತೀವಿ ರಾಜೀವ್ಗ’ ಅನ್ನೋ ಮಾತು ನನ್ನ ಕಿವೀಲಿ ಬಿದ್ದಿದ್ದು ನಿನ್ನಿಟಾರ್ಮೇಲಿನ ಆಣೆಗೂ ನಿಜ. ಯೋಚ್ನೆ ನೀ ಮಾಡ್ಬೇಕಾದ್ದೇ ಅಪ್ಪಣ್ಣೀ’.ನನಗೆ ರೇಖಾ ಅತ್ತೆ ಮಾತು ಸರಿಕಾಣಲಿಲ್ಲ, ಮಗನ ತಪ್ಗೆ ನನ್ಮೇಲೆ ಏಕೆ ಕೋಪ? ಹೋದ್ವರ್ಷ ಇವನ್ಗೆ ಕೆಲ್ಸ ಕೊಡಿಸ್ತೀನಿ ಅಂತ ನಾ ಕರ್ಕೊಂಬಂದಿದ್ನಿಜಾನೇ. ಇವ್ನ ಇಂಟರ್ವ್ಯೂ ವೇಳೆ ಸರ್ಯಾಗಿ ನನ್ಗೆ ಆಫೀಸ್ನಿಂದ ತುರ್ತುಕರೆ ಬಂದಿದ್ದೂ ನಿಜಾನೆ.

ಆದ್ರೆ, ಈ ಪೆಕ್ರ ಮುಂಡೇದು ಸರಳವಾದ ಪ್ರಶ್ನೆಗೆ ಜಡವಾಗಿ ನಡ್ಕಂಡ್ರೆ ನನ್ತಪ್ಪೆ? ಉತ್ತರ ಕೊಡಕ್ಕಾಗ್ದೆ ಬೆದರುಬೊಂಬೆ ತರ, ಬೆಪ್ತಕ್ಡಿಯಾಗಿ, ಬೆವ್ರತಾ ಬಂದ್ರೆ ನಾ ಏನ ಮಾಡಲಿ? ಆಫ್ರಿಕಾ ಯಾವ ಖಂಡದಲ್ಲಿದೆ ಅಂತ ಇವ್ನ ಯಾಮಾರಿಸೋಕೆ ಕೇಳಿದ್ರೆ, ಯೂರೋಪ್ನಲ್ಲಿದೆ ಅಂತ ಹೇಳಿದ್ದ ಈ ಭೂಪ! ಆಫ್ರಿಕಾನೂ ಒಂದು ಖಂಡ ಅಂತಿಳೀದವ್ರಿಗೆ ಹೇಗೆ ಕೆಲ್ಸಕ್ಕೆ ಸೇರಿಸಕೊಳ್ಳಾದು, ನೀವೆ ಹೇಳಿ ಎಂದು ನನ್ನ ಬಾಯ್ಮುಚ್ಚಿಸಿದ್ದರು ಕಮಿಟೀಲಿ. ಇದ್ನ ನಮ್ಮತ್ತೆ ನನ್ನನ್ನೇ ಕಾರಣ ಮಾಡಿ ದೂರಿದ್ದರು. ’ಅವನ್ನ ಯಾಕೆ ನೀ ಸರ್ಯಾಗಿ ಸಿದ್ಧತೆ ಮಾಡಿ ಕರ್ಕೊಂಡು ಹೋಗಲಿಲ್ಲ. ಅಲ್ದೆ ಇಂಟರ್ವ್ಯೂ ಮಾಡವ್ರುಗೆ ತಲೆ ಕೆಟ್ಟಿದೆಯ? ಆಫ್ರಿಕ ಖಂಡನ ಕಟ್ಕಂಡು ಇವರ್ಗೇನಾಗ್ಬೇಕು, ಕೆಲ್ಸಕ್ಕೂ ಆ ಖಂಡಕ್ಕೂ ಏನ ಸಂಬಂಧಾ? ಇರೋ ಮಾಂಸ ಖಂಡಗಳ್ನ ಸರ್ಯಾಗಿ ಇಟಕಂಡ್ರೆ ಸಾಲ್ದ ಈ ಟೆರರಿಸ್ಟ್ಗಳ ಮಧ್ಯೆ? ಅಂತ ನೀ ಅವ್ರಿಗೆ ಕೇಳ್ಬೇಕಿತ್ತು. ನಿಂದೇ ತಪ್ಪು–ಅಂತ ನನ್ಮೇಲೆ ಗೂಬೆ ಕೂರ್ಸಿದ್ರು, ಇರ್ಲಿ, ಅವ್ರ ಮಮಕಾರ ಹಾಗೆ ಹೇಳ್ಸುತ್ತೆ. ಅಷ್ಟೇಯ.

ಇವಗೆ ಎಂಟು ವರ್ಷಕ್ಕೆ ಮುಂಜಿ ಮಾಡಿದ ಹೊಸದ್ರಲ್ಲಿ ’ಸಹಸ್ರ ಪಾದಾಕ್ಷಿ ಶಿರೋರು ಬಾಹುವೆ’ ಅಂತ ಜಾನ್ಕೀರಾಂ ಮಾವ ಎಷ್ಟು ಬಾರಿ ಹೇಳ್ಕೊಟ್ರೂ ಇವಗೆ ಬಾಯ್ತಿರ್ಗದೆ ’ಸರಸರ ಪಾದರಕ್ಸೆ ಸಿರೋಬ್ರಾವೇ’ ಅಂತ ತೊದಲ್ತಾ ಇದ್ದ. ಕೊನೆಕೊನೆಗೆ ಮಾವ ’ನಿನ್ಹಣೇ ಬರಹ ಹಾಗಿದ್ರೆ ಪಾದರಕ್ಷೆನ ಹೊತಕೊ ತಲೆಮೇಲೇನೆ, ಲೇ ರೇಖಾ, ನಿನ್ಮಗನ್ಗೆ ಪಾದರಕ್ಷೆ ಅಂಗ್ಡಿ ಇಡ್ಸೋಹಂಗೆ ಕಾಣಿಸ್ತದೆ, ನೀನುಂಟು, ನಿನ್ಮಗ್ನ ಪಾದರಕ್ಷೆ ಉಂಟು, ಏನಾದ್ರೂ ಮಾಡ್ಕೋ’ ಅಂತ ಎದ್ದೋಗವ್ರು.

’ನಾ ಹೇಳೋದ ಮರ್ತಿದ್ದೆ, ನೀ ಎರಡು ದಿನ ರಜೆ ಹಾಕಿ ಮುಂದಿನ ಶನಿ, ಭಾನುವಾರ ತಪ್ದೆ ಚನ್ನರಾಯಪಟ್ನದಲ್ಲಿರೋ ನಾಗೂ ಅತ್ತೇ ಮನೇಲಿದ್ದು ಅವರ್ಜೊತೆಲ್ದಂಗಿರಬೇಕಂತೆ, ಅಲ್ಲೀಗೆ ನಮ್ಮಮ್ಮನೂ ಹಾಜರೂ., ಜೊತೆಗೆ ಜೀವೂನ ಕರ್ಕೊಂಡೇ ಹೋಗ್ಬೇಕಂತ ಕಟ್ಟಪ್ಪಣೆ–ಎನ್ನುತ್ತ ಉಗುರು ಕಡಿಯಲಾರಂಭಿಸಿದ. ’ಯಾಕೆ, ನನಗೇನ್ಕೆಲ್ಸ ಅಲ್ಲಿ? ಜೊತೆಗೆ ಜೀವುನೂ–ಅವ್ನೇನು ಜ಼ೂನಲ್ಲಿಯ ಪ್ರಾಣೀನಾ ಅಥವಾ ಜಾತ್ರೇನಲ್ಲಿ ಹುಲಿವೇಶ ಹಾಕ್ಕಂಡ್ ಕುಣೀಬೇಕಾ?’. ’ಅದೆಲ್ಲ ಗೊತ್ತಿಲ್ಲ, ನಾ ಏನೋ ಹೇಳಿ ಯಾಕ್ಕೆಟ್ಟವನಾಗಬೇಕು? ಇಬ್ರು ಪವರ್ಫುಲ್ ಆಂಟಿಗಳ ಮಧ್ಯೆ ಸಿಕ್ಕೋತೀದೀಯ, ಹುಷಾರು, ನಾ ಹೇಳಿಲ್ಲ ಅನ್ಬ್ಯಾಡ ಆಮೇಲೆ. ನಾಗೂ ಅತ್ತೆ ಕೋಪಾನೂ, ದೂರ್ವಾಸನ ಕೋಪಾನೂ ಒಂದೇಯ, ನಿಂಗೊತ್ತಿಲ್ವ?ಅದೃಷ್ಟ ಪರೀಕ್ಷೆ ನಿಂಗೆ, ನಂಗಲ್ಲ’.ಎಂದು ಗಹಿಗಹಿಸಿ ನಕ್ಕಿದ್ದ ಭಡವ. ಪಕ್ದಲ್ಲಿದ್ದ ಪೇಪರ್ವೈಟ್ನ ಅವ್ನ ಮೇಲೆ ಬಿಸಾಕೊಷ್ಟು ಕೋಪ ಬಂದಿದ್ದು ನಿಜ. ’ಇರ್ಲಿ ಬಿಡು, ಅವರ್ನ ಹೆಂಗೋ ನೋಡ್ಕಂತೀನಿ, ನೀ ನಗೋದಲ್ಲ ಮುಠ್ಠಾಳ, ನಾಳಿಂದು ಯೋಚ್ನೆ ಮಾಡು, ವೆಂಕ್ಟಪ್ಪ ಆರ್ಟ ಗ್ಯಾಲರಿ ಎಲ್ಲಿದೆ? ಶಿಕಾಗೋನ, ಡೆಲ್ಲೀನೋ ಅಂತ ಕೇಳಿದ್ರೆ ಏನ್ಹೇಳ್ತಿ ಯೋಚ್ನೆ ಮಾಡು’.

'ಅದಕ್ಕೂ ನೀಯೆ ತಲೆ ಕೆಡಿಸಕೊ ಬೇಕು, ಎಲ್ಲಿದ್ರೂ ಒಂದೇಯ ನಂಗೆ.'–ಈ ಮೂರ್ಖ ಉವಾಚ. ರಾತ್ರಿ ಜೀವೂನ ಕರೆಸಿ ಮಾತಾಡಿದೆ. 'ಜೀವಣ್ಣ, ಈ ಅತ್ತೆರಿಬ್ರೂ ಕರ್ಸಿರೋದ ಯಾಕಿದ್ದೀತು? ನಂಗೆನಾದ್ರೂ ಸಾಡೇಸಾಥೀ ಶುರೂನಾ ಅಥವಾ ಅಲ್ಲೇನಾದರೂ ಸರಣಿ ಬಾಂಬ, ಅಗ್ನಿ ದುರಂತ ಇಲ್ಲ ಟೆರರಿಸ್ಟಗಳು ಆಕಾಶ ಬುಟ್ಟೀಲಿ ಬಂದಿಳೀತಿದಾರ?' ಹಾಗೇನಿಲ್ಲಾ ಸಾರ್, ನಿಮ್ಮ ಶ್ರೀಕಂಠೂ ಅವ್ರ ಅನುಮಾನ ಏನಂದ್ರೆ ನಿಮ್ದೊಡ್ ಅತ್ತೆ ಮಾವ ಇಬ್ರೂ ಎರಡು ತಿಂಗ್ಳು ವಿದೇಶಕ್ಕೆ–ಡೆನ್ವರ್‌ಗೆ ಶಾಮ್ಸುಂದರ್ ಅವ್ರನ್ನ ವಿಸಿಟಿಂಗ್ ಪ್ರೊಫೆಸರಾಗಿ ಕರೆದಿರೋದ್ರಿಂದ ಹೋಗ್ತಾರಂತೆ, ಮಗ ಸೋಮುಗೆ ಸ್ಕೂಲಿರೋದರಿಂದ ಅವನ್ನ, ಹಾಗು 'ಬ್ರೈಟಸ್' ನಾಯಿ ಜವಾಬ್ದಾರಿ ಹೊರೋಕೆ ನೀವೆ ಸರ್ಯಾದ ವ್ಯಕ್ತಿ, ಅನ್ನೋ ಕಾರಣಕ್ಕೆ ನಿಮ್ಗೆ ಒಪ್ಪಸಿಬಿಟ್ ಹೋಗೋದಂತ ತೀರ್ಮಾನ. ಅವ್ರು ಬಿಡಿಸಿ ಹೇಳಲಿಲ್ಲ ಸಾರ್'. 'ಓಹ್ ಮೈ ಗಾಡ್, ನನ್ನೇಕೆ ಹೊಣೆ ಮಾಡ್ತಾರೆ ಈ ನಾಗತ್ತೆ?'. ನಾನೆಲ್ಲಾದ್ರೂ ಇವರ್ನ ನೋಡಕೊಳ್ಳೋ ಟ್ರೈನಿಂಗ್ ತಗಂಡಿದ್ನ?'

ನನಗಿರುವ ಮೂರು ಆಂಟಿಗಳಲ್ಲಿ ನಾಗತ್ತೆನೆ ದೊಡ್ಡವ್ರು, ಕಡೇ ಆಕೆ ರಮಾಮಣಿ, ಮೈಸೂರ್ನಲ್ಲಿ ಸ್ಕೂಲು ನಡೆಸ್ತಿರೋವ್ರು.ಇವರಿಬ್ರ ಮಧ್ಯೆ ಚಿಕ್ಕಮಗಳೂರ್ನಲ್ಲಿ ನನ್ನ, ನನ್ನಕ್ಕನ್ನ ಬಾಲ್ಯದಿಂದ ಸಾಕಿದ ರೇಖಾ ಅತ್ತೆ. ಈ ಮೂವರಿಗೆ ದೊಡ್ಡವರಿಬ್ರು ಅಣ್ಣಂದಿರು. ತವರಿನ ಕಡೆಯ ಪಿತ್ರಾರ್ಜಿತ, ಎಸ್ಟೇಟುಗಳಿತ್ಯಾದಿ ಎಲ್ಲ ಮೇನೇಜ್ಮೆಂಟು ಪಾರುಪತ್ಯ ಈ ನಾಗತ್ತೆದೇ. ಹಾಗಂತ ಸಾಯೋ ಮುಂಚೆ ಅವ್ರಪ್ಪ ಹೇಳಿದ್ದ್ರಂತೆ. ಈಕೆ ಎದುರು ನಿಂತು ಮಾತಾಡಿದವ್ರು ಯಾರು ಇಲ್ಲ, ಪತಿ ಶಾಮಸುಂದರ ಸೇರಿ.ಈತ ಸರ್ಕಾರದಲ್ಲಿ ಹೋಂ ಸೆಕ್ರೆಟ್ರಿಯಾಗಿ ಈಚೆಗಷ್ಟೆ ನಿವೃತ್ತಿಯ ನಂತರ ನಾಗತ್ತೆ ಜೊತೆ ಚೆನ್ರಾಯಪಟ್ಣದಲ್ಲೇ ರೆಸಾರ್ಟ್ ಮಾದರಿ ಗೃಹದಲ್ಲಿ ವಾಸ.

ಆದ್ರೆ ನಂಗ್ಯಾಕಿದ್ದೀತು ನಾಯಿ, ಸೋಮು ಜೊತೆ ಪರದಾಟ? ಸೋಮುಗೆ ಈಗ ಹನ್ನೊಂದು ದಾಟಿರಬೇಕು. ಹಿರಿಯ ದಂಪತಿಗಳಗೆ ತುಂಬ ಲೇಟ್ ಇಷ್ಯೂ! ಹಾಗಾಗಿ ತುಂಬ ಮುದ್ಮಾಡಿ ಸಾಕಿದ್ರು. ಇವನ್ನ ಕಂಟ್ರೋಲ್ ಮಾಡೋದು ಒಂದೇ, ಒಟ್ಟೊಟ್ಟಿಗೆ ಬೆಕ್ಕು, ಕರಡಿ, ಕೋತಿ ಸಾಕೋದೂ ಒಂದೇ ಅಂತ ಜೀವೂನ ಅಭಿಪ್ರಾಯ ಕೂಡ. ನಾನು ಕೆಲ್ಸಕ್ಕೆ ಹೋದ್ರೆ, ಅವ್ರ ಜವಾಬ್ದಾರಿ ಎಲ್ಲ ಜೀವೂ ಮೇಲೆ, ಆತ ಸುತರಾಂ ಒಪ್ಕೊಳ್ಳೊವ್ನಲ್ಲ, ಲ್ಯಾಪ್ ಡಾಗನ್ನ ಕಂಡ್ರೂ ಹೆದರ್ತಾನೆ–ಚಿಕ್ಕಂದಿನಲ್ಲಿ ನಾಯಿ ಕೈಲಿ ಕಚ್ಚಿಸ್ಕೊಂಡಿದ್ದರಿಂದ. ಇನ್ನ ನೆರಹೊರ್ಕೆ ವಿಷ್ಯಕ್ಕೆ ಬಂದ್ರೆ ಶೋಚನೀಯ. ಎಲ್ಲ ಭಾರೀ ಕುಳಗಳು.ಔಟ್ ಅಫ್ ಕೊಶ್ಚನ್. 'ಜೀವು ನಾಳೆ ಒಳ್ಗೇನಾದ್ರೂ ಪರಿಹಾರ ಕಂಡುಹಿಡೀಲೆ ಬೇಕು ನೀ'. ಹೆಸರಿಗೆ ಇವ ನನ್ನ ಪರಿಚಾರಕನಾದರೂ ನನ್ನ ಸ್ನೇಹಿತರ, ಬಂಧುಗಳನ್ನ ಎಂತೆಂಥದ್ದೋ ಕಷ್ಟಗಳಿಂದ ತನ್ನ ಬುದ್ಧಿಶಕ್ತಿಯಿಂದ ಪಾರು ಮಾಡಿದವ. 'ಏನೂ ಹೊಳೀತಿಲ್ಲ ಸಾರ್, ಯೋಚಿಸ್ಬೇಕು'. 'ಜೀವು, ನಾ ಹೇಳೋದ ಮರ್ತಿದ್ದೆ. ಮೊನ್ನೆ ನಾ ಕೊಂಡ್ಕಂಡು ಬಂದ ಕೆಂಪು, ಹಳದಿ ಮಿಶ್ರಿತ ಪೈಜಾಮ, ಶರ್ವಾನಿನ ಮರೀದೆ ಪ್ಯಾಕ್ಮಾಡು ನಾವು ಶನಿವಾರ ಬೆಳಿಗ್ಗೆ ಚೆನ್ರಾಯಪಟ್ಣಕ್ಕೆ ಹೊರಡೊವಾಗ'.

'ಬೇಡ ಸಾರ್, ಈ ಡ್ರೆಸ್ ನಿಮ್ಗೆ ಸುತರಾಂ ಸರಿಹೊಂದಲ್ಲ, ಬೇರೆ ಎಷ್ಟೋ ಇದೆಯಲ್ಲ?'. 'ನನ್ ಮಾತ್ನ ಕೇಳು, ಇದನ್ನ ಹಾಕ್ಕಂಡ್ರೆ, ಈ ವೂರ್ನವ್ರೆಲ್ಲ ಇದಕ್ಕೇ ಮುಗಿ ಬೀಳ್ತಾರೆ, ಅದನ್ನ ಅಲ್ಲಿ ಮೆಚ್ತಾರೆ, ಅದಕ್ಕೇ ನಾ ತರ್ತಾ ಇರೋದ.ನೀ

ಪ್ಯಾಕ್ಮಾಡು ಮರೀದೆ, ಹಾಗೂ ನಮ್ಸಮಸ್ಯೆಗೆ ಪರಿಹಾರ ಹುಡುಕಲು ಷುರು ಮಾಡು."ಸರಿ ಸಾರ್, ಆದ್ರೆ ಏನೂ ಹೊಳೀತಾನೇ ಇಲ್ಲ. ನಾಯಿ ಬಗ್ಗೆ ನನ್ನ ಭಯ ನಿಮಗೆ ಗೊತ್ತು' ಎನ್ನುತ್ತ ಮುಖ ಅತ್ತ ತಿರುಗಿಸಿದ. ಅವನಿಗೆ ಈ ಶೇರ್ವಾನಿ ಬಿಲ್ಕುಲ್ ಇಷ್ಟವಿಲ್ಲವೆಂದು ಮುಖದಲ್ಲಿ ತೋರುತಿತ್ತು. ನಮ್ಮ ಬಿನ್ನಾಭಿಪ್ರಾಯಗಳೇನೇ ಇರಲಿ ಸೇವೆಯಲ್ಲಿ ನಿಸ್ಪ್ರುಹ ವ್ಯಕ್ತಿ. ಯಜಮಾನನ ಗೌರವ ಕಾಪಾಡುವವ. ಆದರೆ ನನಗೂ ಆಯ್ಕೆ ಮಾಡುವ ಸಾಮರ್ಥ್ಯವಿದೆ.

ಶನಿವಾರ ನನ್ನ 'ಸುಸ್ಜುಕಿ ಎರ್ಟಿಗಾ' ನಲ್ಲಿ ಪ್ರಯಾಣಿಸಿ ಚೆನ್ನರಾಯಪಟ್ಣ ಸೇರುವ ವೇಳೆಗೆ ಮಧ್ಯಾನ್ನದ ಊಟದ ವೇಳೆ ಮೀರಿ ಸಂಜೆಯಾಗುವದರಲ್ಲಿತ್ತು.ಅತ್ತೆಗಳಿಬ್ಬರನ್ನೂ ಸಂಜೆಯ ಕಾಫಿ ವೇಳೆ ಸಂಧಿಸಿದೆ, ಏನೂ ವಿಷಯ ತಿಳಿಯಲಿಲ್ಲ, ಇಬ್ಬರೂ ಬಹಳ ಆತುರದಲ್ಲಿದ್ದಂತೆ ಕಂಡರು. ರಾತ್ರಿ ಊಟಕ್ಕೆ ಮುಂಚೆ ಜೀವೂನ ಕರೆಸಿ ಮಾತಾಡಿದೆ, 'ಏನೂ ಹೊಳೀತಾನೆ ಇಲ್ಲ ಸಾರ್, ವಿಷಯ ಗಂಭೀರವಾದದ್ದೇ', ನನಗೆ ಕೋಪ ಬಂತು 'ಹೌದಲ್ವ, ಯಾರಿಲ್ಲಾಂದ್ರು? ಅದಕ್ಕೆ ತಾನೆ ನಿನ್ನ ಕರ್ಸಿದ್ದು, ಗಂಭೀರವೋ, ಸುಡುಗಾಡೋ. ಫಿಶ್ ಫುಡ್ ತಿಂದ್ರೆ ಬುದ್ಧಿ ಚುರುಕಾಗುತ್ತೆ ಅಂತ ಯಾರೋ ಹೇಳಿದ್ರು, ತೊಗೋ. ನಿಂಗೆ ಅದು ಇಷ್ಟವಿಲ್ಲಾಂದ್ರೆ 'ಎ ಇಂದ ಎಕ್ಸ್' ವರ್ಗೂ ಏನೇನ್ನಾದ್ಯವೋ, ಎಲ್ಲ ವೈಟಮಿನ್ ಫುಡ್ ತಗೋ, ಬ್ರೈನ್ನ ಶಾರ್ಪ್ ಮಾಡ್ಕೊ, ಬೆಳಿಗ್ಗೆಗೆ ಐಡಿಯ ಬಂದಿರತ್ತೆ' ಎಂದು ಊಟದ ಮನೆ ಕಡೆ ಹೊರಟೆ.

ಮಾರ್ನೆ ಬೆಳಿಗ್ಗೆ ಆರು ಘಂಟೆಗೆಲ್ಲ ಎದ್ದಿದ್ದೆ ಯೋಗಾಸನ ಮಾಡಲು. ಅದೇನಾಶ್ಚರ್ಯ, ಭಯಂಕರ ದೃಶ್ಯ ನಾ ಕಿಟಕಿಯಲ್ಲಿ ಕಂಡಿದ್ದು. ಬಾಗಿಲು ತೆಗೆಯಲು ಏಳುತ್ತಿದ್ದಂತೆ ಹಾವೊಂದು ಕಿಟಕಿಯಿಂದ ಹೆಡೆಯಾಡಿಸುತ್ತ ದುರುಗುಟ್ಟಿ ನೋಡುತ್ತಿತ್ತು. ಒಂದೆರಡು ಬಾರಿ ಹೆಡೆಯಾಡಿಸಿದ್ದು ನಿಜ ನನ್ನ ಕಂಡು. ಮೈಯೆಲ್ಲ ಆ ಕ್ಷಣದಲ್ಲಿ ಬೆವತಿತ್ತು, ಏನೂ ತೋಚದೆ ಮಂಚದ ಮೇಲೆ ನಿಂತೆ ಗಡಗಡ ನಡಗುತ್ತ. ಕಿರುಚಲು ಬಾಯಲ್ಲಿ ಸ್ವರವೇ ಹೊರಡಲಿಲ್ಲ. ಉಸಿರು ಕಟ್ಟಿಕೊಂಡೆ ಇದ್ದೆ, ಬಹಳ ಹೊತ್ತಿನ ಮೇಲೆ –ಬಹುಷ: ಎರಡು–ಮೂರು ನಿಮಿಷವಷ್ಟೇ ಇರಬಹುದೇನೋ, ಅದಕ್ಕೆ ನನ್ನ ದರ್ಶನ ಸ್ವಾರಸ್ಯವಾಗಿ ತೋರಲಿಲ್ಲವೆನಿಸುತ್ತೆ–ಅಲ್ಲಿಂದ ಹಿಂದೆ ಹಿಂದೆ ಹೊರಟು ನಿಧಾನವಾಗಿ ಗಿಡಗಳ ಮಧ್ಯೆ ಮಾಯವಾಯಿತು.ಮತ್ತೆ ಹೋದ ಉಸಿರು ಬಂತೇನೋ ನಿಜ. ಆದರೆ ಮೈ ನಡುಕ ಕಮ್ಮಿಯಾಗಲಿಲ್ಲ, ಕಾರಣ ಅದು 'ಮತ್ತೆ ಬಂದರೆ' ಎಂಬ ಭೀತಿ, ಅಥವಾ ನಾನಿದ್ದ ಕೊಠಡಿಯಲ್ಲಿ ಅದೇನಿತ್ತೋ ಅದಕ್ಕೆ ಪ್ರಿಯವಾದ್ದು. ಆ ಕಾರಣಕ್ಕೆ ಹಿಂತಿರುಗಬಹುದೇನೋ? ಸುಮಾರು ಸಮಯ ಮಂಚದಿಂದ ಇಳಿಯದೆ ಅಲ್ಲೇ ಇದ್ದೆ. ಸ್ವಲ್ಪ ಧೈರ್ಯ ತಂದುಕೊಂಡು, ಮೆಲ್ಲಗೆ ನಿಶ್ಯಬ್ದವಾಗಿ ಬಾಗಿಲ ಕಡೆ ಬಂದೆ. ಇನ್ನೇನು ಬಾಗಿಲು ಪೂರ್ತ ತೆಗೆದು ಹೊರಬರಲು ಒಂದು ಹೆಜ್ಜೆ ಹೊರಗೆ ಇಡುವಷ್ಟರಲ್ಲಿ ನನ್ನೆದುರಿಗೇ ಕೆಲವೇ ಅಡಿಗಳ ದೂರದಲ್ಲಿ ಬಾಗಿಲ ಕಾಯುತ್ತಾ ಅದೇ ಹಾವು ಹೆಡೆಯಾಡಿಸುತ್ತ ನನ್ನನ್ನೇ ದುರುಗುಟ್ಟಿ ನೋಡುತ್ತಿದೆ. ಮತ್ತೆ ಎದ್ದುಬಿದ್ದೆನೋ ಎನ್ನುವ ರೀತಿಯಲ್ಲಿ ಮೈಎಲ್ಲ ಬೆವರಿ, ನಡುಗುತ್ತ ಧಡಾರನೆ ಬಾಗಿಲ ಮುಚ್ಚಿ ಮತ್ತೆ ಒಳಹೊಕ್ಕೆ. ರೂಮಲ್ಲಿ ಫೋನಾದರೂ ಇದ್ದಿದ್ದರೆ ಯಾರಿಗಾದರೂ ಕೂಗಬಹುದಿತ್ತು. ಇದೀಗ ನಡುಗುತ್ತಲೇ ಹದಿನೈದಿಪ್ಪತ್ತು ನಿಮಿಷ ಹಾಗೇ ಇದ್ದು ಮತ್ತೆ ಸ್ವಲ್ಪಸಲ್ಪವೇ ಬಾಗಿಲ ತಳ್ಳುತ್ತ ಸೊಂದಿಯಲ್ಲೇ ನೋಡಿ ಎಲ್ಲೂ ಹಾವಿನ ಸುಳಿವಿಲ್ಲವೆಂದು ಖಾತರಿ ಮಾಡಿಕೊಂಡು ಹೊರಬರುತ್ತಿದ್ದ ಹಾಗೆ ಎದುರಿಗೇ ನಿಂತಿದ್ದ

ಸೋಮುವನ್ನ ನೋಡಿ ಧೈರ್ಯ ತಂದುಕೊಂಡೆ. ಹಾವಿನ ಬಗ್ಗೆ ಹೇಳಲು ಬಾಯಿ ತೆರೆದೆ, ಅಷ್ಟರಲ್ಲಿ ಜೀವೂ ಅಲ್ಲಿಗೆ ಬಂದ. ಅವನಿಗೆ ಹಾವಿನ ಬಗ್ಗೆ ಹೇಳಿದೆ, 'ನನಗೂ ಹಾಗೇ ಆಗಿತ್ತು ಸಾರ್, ಇದೀಗ ಅದು ಹೊರಟುಹೋಗಿದೆ, ಬನ್ನಿ ಧೈರ್ಯವಾಗಿ ಎಂದು ಹೇಳಿ ಪಡಶಾಲೆಗೆ ಕರೆತಂದು ಕಾಫಿ ತಂದುಕೊಟ್ಟು ಅಲ್ಲಿಂದ ಹೊರಟ ಕೆಲಸವುಂಟೆಂದು.

ಮತ್ತೆ ರೂಮಿಗೆ ಹೋಗಿ ಬೆಳಗಿನ ಶೌಚ ಮುಗಿಸಿ, ನಿಧಾನವಾಗಿ ತಿಂಡಿಯ ವೇಳೆಗೆ ಬರಲು ಹೊರಟೆ. ರೂಮಿನ ಕದ ತೆರೆಯುತ್ತಲೇ ಮತ್ತೊಂದು ವಿಸ್ಮಯ ಕಾದಿತ್ತು. ಎದುರಿಗೇ ಮಂಚದ ಮೇಲೆ ನಾನು ಮಲಗಿದ್ದ ಜಾಗದಲ್ಲಿ ಯಾರೊ ಮುಸುಕು ಹಾಕಿ ಮಲಗಿದ್ದಂತೆ ತೋರಿತು. ಹೊದ್ದುಗೆಯನ್ನ ತೆಗೆಯಲು ಕೈ ಹಾಕುತಿದ್ದಂತೆ ಒಂದು ಕರಾಳ ಕಪ್ಪಗಿನ ಧಾಂಡಿಗ ಬೆಕ್ಕು ಛಂಗೆಂದು ಹಾರಿ ನನ್ನ ಬೆನ್ನ ಮೇಲಿಂದ ಹಾರಿ ಕಿಟಕಿಯಿಂದ ಮಾಯವಾಯಿತು, ಮತ್ತೆ ನಾ ಆ ಒಂದು ಕ್ಷಣದಲ್ಲಿ ಮೈಯೆಲ್ಲ ಬೆವತಿದ್ದೆ, ಯೋಚಿಸುತ್ತಲೇ ಇದ್ದೆ. ಇದು ಸೋಮುವಿನ ಆಟವೆ? ಇದೀಗ ಸ್ವಲ್ಪ ಸ್ವಲ್ಪ ಮನಕ್ಕೆ ಹೊಳೆಯತೊಡಗಿತು–ಅವನದೇ ಕುತಂತ್ರವಿರಬೇಕೆಂದು. ಅನುಮಾನವೇ ಇಲ್ಲ. ಎದುರಿಗೇ ನಿಂತಿದ್ದ ಆ ಸೋಮುವಿನ ಚೇಷ್ಟೆಯೇ ಇರಬೇಕು, ಇರಲಿ ಜೀವಣ್ಣನ್ನ ಕೇಳಿ ಸ್ಪಷ್ಟ ಮಾಡಿಕೊಂಡರಾಯಿತು. ಮುಂದಿನ ಕೆಲಸಕ್ಕೆ ಅಣಿಯಾದೆ.

ತಿಂಡಿ, ಕಾಫ಼ಿ ವೇಳೆಯಲ್ಲೂ ನನ್ನನ್ನ ಕರೆಸಿದ ಬಗ್ಗೆ ನಿಗೂಢವಾಗಿಯೇ ಇತ್ತು. ಊಟದ ವೇಳೆ ಶಾಮಸುಂದರ್ ಜೊತೆ ದೇಶಾವರಿ ಮಾತು, ಮತ್ತೆ ನನ್ನ ರೂಮಿಗೆ ಬಂದೆ. ಜೀವೂನ ಸುದ್ಧಿಯೆ ಇಲ್ಲ. ಒಂದಿನಾದ್ರೂ, ನಮ್ಮನ್ನ ಕರೆಸಿದ್ದ ಕಾರಣ ಯಾರೂ ಬಾಯೇ ಬಿಡಲಿಲ್ಲ. ಸಂಜೆಗೆ ಯಾರೋ ಮುಖ್ಯ ವ್ಯಕ್ತಿಗಳಾಗಮನ, ಸಂಜೆಗೇ ನಡಿಗೆ, ಅವರುಗಳ ಉಪಚಾರದ ಬಗ್ಗೆ ಮಾತು–ಹೀಗೆ ಅಕ್ಕತಂಗಿಯರಲ್ಲಿ ಚರ್ಚೆಯಾಗುತ್ತಿತ್ತು. ಒಬ್ಬರಿಗಿಂತ ಒಬ್ರು ಬಿಸಿ, ಆಳುಗಳೂವೆ. ಸಂಜೆ ಐದಕ್ಕೆ ಸರ್ಯಾಗಿ ನಾನು ಉತ್ತಮ ದಿರುಸಿನಲ್ಲಿ ಹಜ಼ಾರಕ್ಕೆ ಬರಬೇಕೆಂದು ಕರೆ ಬಂತು.ಇದರಲ್ಲಿ ಏನೋ ರಹಸ್ಯವಿರ್ಬೇಕೆನಿಸಿದ್ದು ನಿಜ. ನನ್ನ ಕೆಂಪು, ಹಳದಿ ಶೇರ್ವಾನಿ ಧರಿಸಿ ಹೊರಟೆ. ಹಜ಼ಾರದಲ್ಲಿ ವಯಸ್ಸು ಅರವತ್ತರ ಆಸುಪಾಸಿನ ದಂಪತಿಗಳು–ಅವರನ್ನ ಡಾ.ಮಹಾಬಲೇಶ್ವರ, ಶ್ರೀಮತಿ ಹರಿಣಿ ಎಂದು ಪರಿಚಯಿಸಿದ್ದರು ಶಾಮಸುಂದರ್. ಮತ್ತು ಇವರೊಟ್ಟಿಗೆ ಇಪ್ಪತ್ತು ದಾಟಿದ ಹುಡುಗಿ ಕುಳಿತಿದ್ದರು.

ಹೌದು, ನನಗೀಗ ನೆಪ್ಪಿಗೆ ಬಂತು, ಬೆಂಗಳೂರಲ್ಲೇ ಆರೇಳು ಮಾಸಗಳ ಹಿಂದೆಯೇ ರೇಖಾ ಅತ್ತೆ ಪ್ರೊಫೆಸರ್ ರಾಮಸ್ವಾಮಿಯವರ ಮನೆಗೆ ಯಾವುದೋ ಕಾರ್ಯಾರ್ಥ ಹೋಗಿ ಬಾ ಎಂದಿದ್ದರು. ಹೋಗಲಾಗಿರಲಿಲ್ಲ ಅಷ್ಟೆಯ. ಆದರೆ ಅಲ್ಲಿಗೆ ಹೋಗುವ ಮುಂಚಿನ ರಾತ್ರಿ ನನ್ನ ಕನಸಿನಲ್ಲಿ ಅಲ್ಲಿಗೆ ಹೋಗಿ, ಅವರ ಮಗಳು ಕುಂಬಳಕಾಯಿಯಂತೆಯೋ, ಆನೆಯಂತೆಯೋ ಕಂಡಿದ್ದಳು, ಬೇಂದ್ರೆ, ಅಡಿಗ, ಮಿಲ್ಟನ್–ಇಂಥಹವರ ಬಗ್ಗೆ ಹಾಗು ಕ್ವಿಜ಼್‌ಗಳ ಬಗ್ಗೆ ಏನೇನೋ ಕೇಳಿ ತಲೆ ತಿಂದಿದ್ದಳು ಈ ಗಜಗಮನೆ. ನಿಜರೂಪದಲ್ಲಿ ಈಗ ನನ್ನೆದುರಿಗೆ ಹಾಗೆ ಬಿಲ್ಕುಲ್ ಕಾಣದೆ (ಮದುವೆಯೆಂಬ ಅಪಾಯದ ಅಂಚಿನಲ್ಲಿ– ಅಪರಂಜಿ ಹಿಂದಿನ ಸಂಚಿಕೆ) 'ಮಲೆನಾಡ ಹೆಣ್ಣ, ನಡು ಸಣ್ಣ' ಎನ್ನುವಂತೆ ಸಿಂಹಕಟಿ ಆಗದಿದ್ದರೂ ಕಣ್ಣಿಗೆ ಹಿತವಾಗೇ

ಕಂಡಳು ಈ ಹುಡುಗಿ.. ಆಗ ನಾನು ಅವರುಗಳನ್ನ ಮತ್ಯಾವ ಕಾರಣಕ್ಕಾಗಿಯೋ ಭೇಟಿ ಮಾಡಿರಲಿಲ್ಲ. ಮಾವ ನನ್ನನ್ನ ದಂಪತಿಗಳಿಗೆ ಪರಿಚಯಿಸುತ್ತ 'ಇವನು ರಾಜೀವ–ನನ್ನ ಸೋದರಳಿಯ ವರಸೆಯಲ್ಲಿ. ಬೆಂಗಳೂರಲ್ಲೇ ವಾಸ. ತನ್ನದೇ ಕಂಪನಿಯನ್ನ ನಡೆಸುವವ. ಸಂಪಾದನೆ ಚೆನ್ನಾಗಿಯೆ ಇದೆ. 'ರಾಜೀವ, ಇವ್ರು ನನ್ಬಾಲ್ಯದ ಗೆಳೆಯ ಡಾ.ಮಹಾಬಲೇಶ್ವರ ಅಂತ. ಅಮೆರಿಕದ ಡೆನ್ವರ್‌ನಲ್ಲಿರೋದು, ಬಹಳ ಹಿಂದೇನೆ ಅಲ್ಲಿ ಸೆಟ್ಲ್ ಆದವ್ರು. ರಜಕ್ಕೆ ಅಂತ ಬಂದಿದಾರೆ. ಆತ 'ಇಲ್ಲೀಗೆ ನಿಮ್ಮ ಮಾವನವ್ರ ಆಹ್ವಾನದ ಮೇಲೆ ಬಹಳ ವರ್ಷಗಳಾದ್ಮೇಲೆ ಬರ್ತಿದೀವಿ, ಇವ್ರ ವಿಶ್ವಾಸ. ಈ ಹುಡುಗಿ ನನ್ತಂಗಿ ವತ್ಸಲ ಮಗಳು, ಮೀನ ಅಂತ. ನಮ್ಭಾವ ಪ್ರೊಫೆಸರ್ ರಾಮಸ್ವಾಮಿ ಬೆಂಗಳೂರಿನವ್ರೆ, ಅವ್ರು ಬಿಟ್ರೆ ಯಾವ ಬಂಧುಗಳೂ ನಮಗಿಲ್ಲ ಈ ದೇಶದಲ್ಲಿ. ಚೆನ್ನಾಗಿ ಓದ್ಕಂಡಿದಾಳೆ. ರಾಮಸ್ವಾಮಿಯ ಒಬ್ಬಳೇ ಮಗಳು, ಇನ್ಯಾರು ಮಕ್ಕಳಿಲ್ಲ. ಇದೀಗ ಮಿಚಿಗನ್ ವಿಶ್ವವಿದ್ಯಾಲಯದಲ್ಲಿ ಸ್ಕಾಲರ್ಷಿಪ್ ಸಿಕ್ಕಿದೆ ಡಾಕ್ಟರೇಟ್ಗೆ. ನಮ್ಭಾವ ಶಾಮಸುಂದರ್ ನಿನ್ ಸ್ನೇಹಿತ ಅಂತೀಯ, ಅವ್ರ ಪೈಕಿ ಹುಡುಗ್ರಿದ್ದರೆ ನೋಡು ಇವಳ ಮದುವೆಗೆ ನಾವು ರೆಡಿ, ಕಾರಣ, ಮದುವೆ ನಂತ್ರ ಎಲ್ಲಾದ್ರೂ ಓದ್ಕೊಳ್ಳಲಿ, ವಯಸ್ಸಾಗ್ತಾ ವರ ಸಿಕ್ಕೋದು ಕಷ್ಟ. ಅದಕ್ಕೇ' ಅಂದಿದ್ದ. 'ನಾ ತಾನೆ ಇಲ್ಲಿ ಇದ್ ಏನ್ಮಾಡೋದ? ಸರಿ ಅಂತ ಇವಳ್ನ ಕರ್ಕೊಂಬಂದೆ. ಅಲ್ದೆ ನಾವು ಇಲ್ಬರೋ ವೇಳ್ಗೆ ಇವಗ್ರೂ ಅಮೆರಿಕದ ಡೆನ್ವರ್‌ಗೆ ಪ್ರಯಾಣ ಸಿದ್ಧ, ಅದಕ್ಕೇನ್ಬೇಕೋ ಎಲ್ಲ ಅನುಕೂಲ ನಾ ಮಾಡ್ಸಿದೀನಿ ಅಲ್ಲಿ ಇವ್ರಿಗೆ.'ಎಂದು ಸುಮ್ಮನಾದರು.

ಕಾಫೀ, ತಿಂಡಿ ನಂತರ ನನಗೆ ಆ ಹುಡುಗೀನ ಪರಿಚಯಿಸಿ ಈಕೆನಾ ಕರ್ಕೊಂಡು ಎಸ್ಟೇಟ್ ತೋರಿಸ್ಕೊಂಬಾ ಅಂತ ಹುಕುಂ ಬಂತು.

ಆದರೆ ಅಂದು ನನ್ನ ಸ್ನೇಹಿತ ಈಗ ರೇಖಳ ಪತಿ ಮೂರ್ತಿ ಮಾಡಿದ ಕಿತಾಪತಿಯಿಂದ ಬಲವಂತವಾಗಿ ನಾನು ಹಸೆಮಣೆ ಏರುವ ಸನ್ನಾಹಕ್ಕೆ ಸಿಕ್ಕಿಬಿದ್ದಿದ್ದೆ. ಈ ನಾಯಿ ಬಗ್ಗೆ ಮತ್ತು ಸೋಮುವಿನ ಮೇನೆಜ್ಮೆಂಟ್ ನನ್ನ ತಲೆಗೆ ಈ ಆಂಟಿಗಳು ಕಟ್ಟುವುದೇಕೆ? ಮೊದಲೇ ಸೋಮು ಅಷ್ಟಾವಕ್ರ, ಜೊತೆಗೆ ಈ ಬ್ರೂಟಸ್, ನಾ ಹಲ್ಲು ಕಡಿಯುವುದೊಂದ್ಬಾಕಿ.

ಮೀನಾ ಜೊತೆ ಎಸ್ಟೇಟ್ನಲ್ಲಿ ಸುತ್ತಾಡುವಾಗ ಅವಳು ನನ್ನ ಹಿಂದಿನ ಕನಸಿನಲ್ಲಿ ಮೂಡಿದ್ದ ಆ ಜಂಬೂಸವಾರಿ ಆನೆಯಂತಿಲ್ಲದ, ತಲೆ ತಿನ್ನುವ ಕಾವ್ಯಗಳ ಚರ್ಚಿಸುವ, ಕ್ವಿಜ್ಗಳನ್ನ ಕೊಟ್ಟು ತಲೆ ಚಿಟ್ಟೆನಿಸದೆ ಸಂಚಾರದುದ್ದಕ್ಕೂ ತನ್ನ ವಿದೇಶದ ಸಿದ್ಧತೆ, ಮುಂದಿನ ಯೋಜನೆ ಹಾಗು ಬಂಧುಗಳ ಬಗ್ಗೆ ಸೌಮ್ಯವಾಗಿ ಹರಟಿದ್ದಳಷ್ಟೆ. ಆದರೆ, ಈ ಮಾತು ಕೇಳಿದ್ದಳು 'ನಿಮ್ಮ ಶೇರ್ವಾನಿ ಹೊಸದೆ? 'ಏಕೆ, ನನಗೆ ಚೆನ್ನಾಗಿಲ್ಲವೆ?', 'ಚೆನ್ನಾಗಿದೆ, ನಿಮಗೆ ಬಹಳಾನೆ ಹೊಂದುತ್ತದೆ, ಅದಕ್ಕೇ ನಾ ಕೇಳಿದ್ದು'. ಈ ಮಾತಿಗೆ ನಾ ಉಬ್ಬಿಹೋದದ್ದು ನಿಜ. ಜೀವೂಗೆ ಹೇಳಲೇಬೆಕು.

ರಾತ್ರಿ ಊಟದ ನಂತರ ಅವಳ ಮಾತನ್ನ ತಿರುವಿಹಾಕಿದಾಗ, ಅವಳ ಬಗ್ಗೆ ನನ್ನ ಹಿಂದಿನ ಕನಸಿನ ಅಭಿಪ್ರಾಯ ಬದಲಿಸಬೇಕಾಯಿತು. ನಂತರ ಆಂಟಿಗಳ ಕರೆ ಬಂದು, ಅವರ ತೀರ್ಮಾನವೂ ನಾ ಭಯ ಪಟ್ಟಂತೆಯೆ ಆಗಿತ್ತು. 1. ನಾಗೂ ಅತ್ತೆ, ಮಾವ ವಿದೇಶ ಪ್ರಯಾಣ ಡೆಫನೆಟ್. ಅವರ ಎಸ್ಟೇಟ್ ಮನೆಯಲ್ಲಿ ಆಳುಗಳ ಜೊತೆಗೆ ಮೀನಾ, ಮಹಾಬಲೇಶ್ವರ ದಂಪತಿಗಳು ಅಲ್ಲೇ ಮೊಕ್ಕಂ, ತುರ್ತು

ಕಾರ್ಯವಿದ್ದಾಗಷ್ಟೆ ಮೀನಾ ಊರಿಗೆ ಹೋಗಿಬರುವುದು, 2. ಬ್ರೂಟಸ್ ಮತ್ತು ಸೋಮು ನನ್ನ ಸುಫರ್ದಿಗೆ–ಇಲ್ಲಿ ದುಸರಾ ಮಾತಿಗೆ ಅವಕಾಶವೇ ಇಲ್ಲ. 3. ಮೀನಾಗೆ ಇಲ್ಲಿಯ ಸಮಸ್ಯೆಗಳೇನಾದರೂ ಇದ್ದರೆ ನನ್ನೊಡನೆ, ರೇಖಾ ಆಂಟಿ ಜೊತೆ ಹಂಚಿಕೊಳ್ಳುವುದು. ನನ್ನ ಪೂರ್ತಿ ಸಹಕಾರ ಅತ್ಯವಶ್ಯಕ. 4. ಅಲ್ಲದೆ ಮೀನಾ ಒಳ್ಳೆಯ ಮನೆತನದ ಹುಡುಗಿ, ನನಗೆ ಸರಿಹೊಂದುವ ಹೆಣ್ಣು–ಹಾಗಾಗಿ ನಾವಿಬ್ಬರೂ ಮಾರನೇ ದಿನವೂ ಅಲ್ಲೇ ಇದ್ದು, ಒಂದು ಇತ್ಯರ್ಥಕ್ಕೆ ಬಂದು–ಆ ನಿರ್ಧಾರ ತಿಳಿಸಬೇಕೆಂದು ಹುಕುಂ.

ನಾನು ಮೇಲಿನ 1 ಮತ್ತು 3 ನೆ ಅಂಶಗಳ ಬಗ್ಗೆ ಸಂಪೂರ್ಣ ಒಪ್ಪಿಗೆ ಸೂಚಿಸಿದೆ. 2 ನೆಯದಕ್ಕೆ ನನ್ನ ಬಲವಾದ ಪ್ರತಿಭಟನೆ ತೋರ್ಪಡಿಸಿದ್ದೆ. ಆಂಟಿಗಳು ಮಾತ್ರ 'ವೀಟೋ" ಮಾಡಿದ್ದರು. ಮಾವಂದಿರು ಏನೂ ಪ್ರಯೋಜನಕ್ಕೆ ಬರುವವರೇ ಅಲ್ಲ! ತಟಸ್ಥರುಗಳು!! ಕಡೆಯದಕ್ಕೆ ನಾನು ಸದ್ಯಕ್ಕೆ ಯೋಚಿಸುವ ಸ್ಥಿತಿಯಲ್ಲೇ ಇಲ್ಲ, ಉದ್ಯೋಗದಲ್ಲಿ ತುಂಬ ಬಿಸಿಯಾಗಿರುವ ಕಾರಣವೆಂದು ತಪ್ಪಿಸಿಕೊಂಡೆ ಆ ಕ್ಷಣಕ್ಕೆ.

ರಾತ್ರಿ ಮಲಗುವುದಕ್ಕೆ ಮುಂಚೆ ಜೀವು ನನ್ನ ನೋಡಲು ಬಂದ. 'ನನ್ನ ಶೇರ್ವಾನಿಯನ್ನ ಜೋಪಾನವಾಗಿ ಎತ್ತಿಡು ಜೀವು, ಸದ್ಯಕ್ಕೆ ಅದರ ಕೆಲಸ ಮುಗಿಯಿತು, ಆದರೆ ನಮ್ಮ ತಲೆಗೆ ಕಟ್ಟಿದ ಸಮಸ್ಯೆ ನೀ ಬಿಡಿಸಲೇ ಇಲ್ಲ, ಈಗ ನಮ್ಮ ಕತೆ ಏನೂ? ಓ, ಮರೆತಿದ್ದೆ ಜೀವೂ ನಾ ಹೇಳೋದು, ಶೇರ್ವಾನೀನ ಮೀನಾ ಬಹಳಾನೇ ಮೆಚ್ಚಿಕೊಂಡಳು. ನನ್ಗೆ ಬಹಳಾನೇ ಹೊಂದತ್ತೆ ಅಂದ್ಲು'. ಜೀವು ಮುಖದಲ್ಲೇನೂ ತೋರ್ಪಡಿಸಿಕೊಳ್ಳಲಿಲ್ಲ.' 'ಬಹುಷ: ಬೆಳಿಗ್ಗೆಗೆ...., ಆದರೆ ಸದ್ಯಕ್ಕೆ ರೇಖಾ ಅತ್ತೆ ಮೇಡಂ ಹೇಳಿದಂತೆ ಕೇಳಬೇಕಿದೆ' ಎನ್ನುತ್ತ ಕಾಲ್ಕಿತ್ತ ಪಾಪಿ, ಅವನಿಗಿನ್ನೂ ನನ್ನ ಉಡುಪಿನ ಬಗ್ಗೆ ಕೋಪ ಆರಿಲ್ಲವೆಂಬುದು ಸ್ಪಷ್ಟ.

ಬೆಳಿಗ್ಗೆ ಏಳುವಾಗಲೇ ಸೋಮುವಿನ ಕುತಂತ್ರ ಏನೂ ಇಲ್ಲವೆಂಬುದನ್ನ ಸ್ಪಷ್ಟಮಾಡಿ ಫಳಾಹಾರಕ್ಕೆ ಹೋದೆ. ಮಹಾಬಲೇಶ್ವರ ದಂಪತಿಗಳು ಏಕೋ ನನ್ನ ಕಡೆಯೂ ತಿರುಗಿ ನೋಡಲಿಲ್ಲ. ಮಾತಾಡಿಸ ಹೋದರೆ ನಯವಾಗಿ ಏನೋ ಹೇಳಿ ಜಾರಿಕೊಂಡರು. ಮೀನಾ ಅಲ್ಲೆಲ್ಲೂ ಕಾಣಿಸಕೊಳ್ಳಲೇ ಇಲ್ಲ. ಯಾಕೋ ಅತ್ತೆಯಂದಿರೂ ಉರಿಮುಖದಲ್ಲೆ ಇದ್ದರು.

ಊಟದ ವೇಳೆಗೆ ಸ್ವಲ್ಪ ಮುಂಚೆ ನನ್ನ ಕಚೇರಿಯಿಂದ ತುರ್ತು ಕರೆ ಬಂತು 'ಸ್ಟಾರ್ಟ ಇಮ್ಮೀಡಿಯಟ್, ಅರ್ಜೆಂಟ್ ಆಕ್ಷನ್, ಬಿಗ್ ಮನಿ'–ಅತಿ ಮುಖ್ಯ ವ್ಯವಹಾರ, ನಿರ್ಧಾರ ಕೂಡಲೇ ಅತ್ತೆಯರಿಗೆ ತಿಳಿಸಿದೆ. ನಾಗತ್ತೆ ಮುನಿಸಿನಿಂದಲೆ 'ಹೋಗಿಬಾ, ನಿನ್ನ ಬಳಿ ಬಹಳಾನೆ ಮಾತಾಡುವುದಿದೆ' ಎಂದಿದ್ದರು ಯಾವುದೊ ಕೋಪದಲ್ಲಿ, ರೇಖಾ ಅತ್ತೆ ಮುಖ ಮತ್ತೊಂದೆಡೆಗೆ ತಿರುಗಿಸಿ ನಿಂತಿದ್ದರು ಏನೂ ಮಾತಾಡದೆ.ಅತ್ತೆಯರೊಂದಿಗೆ ನನಗೂ ಮುನಿಸಿದ್ದರಿಂದ ನಾನೂ ಕ್ಯಾರೆ ಅನಲಿಲ್ಲ. ಜೀವೂಗೆ ನನ್ನ 'ಸುಝುಕಿ ಎರ್ಟಿಗೋ'ನ ಸಿದ್ಧಪಡಿಸಲು ಹೇಳಿ ಎಲ್ಲರಿಂದ ಬೀಳ್ಕೊಂಡೆ. ಕಾರು ಗೇಟಿನ ಬಳಿ ಬರುತ್ತಿದ್ದಾಗ ಸೋಮು ಪ್ರತ್ಯಕ್ಷ. ಅವನ ಮೇಲಿದ್ದ ಕೋಪಕ್ಕೆ ನಾನು ಅವನಿಗೆ ಕಾರು ನಿಲ್ಲಿಸಿ ಬುದ್ಧಿವಾದ ಹೇಳಬೇಕೆಂದಿದ್ದಾಗ ಜೀವು 'ಸಾರ್, ಬೇಡ, ಅವನಿಂದ ನಿಮಗೆ ಬಹಳವೇ ಒಳ್ಳೆಯದಾಗಿದೆ, ಈಗ ಹೇಳಲು ಸಮಯವಿಲ್ಲ,

ನನ್ಮಾತ ನಂಬಿ, ಅವನಿಗೆ ನಿಮ್ಮ ಬಳಿ ಇರುವ ಗಿಟಾರ ತರನದೇ ಕೊಳ್ಳುವ ಆಸೆ. ಆದರೆ ಅವನ ಹಿರಿಯರಿಗೆ ಇಷ್ಟವಿಲ್ಲ, ಮಂಗ ಚೇಷ್ಟೆಯಿಂದ ಕೆಡಿಸಿಡುವನೆಂಬ ಭಯಕ್ಕೆ. ಅಲ್ಲದೆ ನಿಮಗಾಗಿ ಸಹಕರಿಸಿದ್ದಕ್ಕೆ, ನಾನು ನಿಮ್ಮ ಅಪ್ಪಣೆಯಿಲ್ಲದೆಯೂ ಮಾತು ಕೊಟ್ಟಿದ್ದೆ ನಿಮ್ಮಿಂದ ಉಡುಗೊರೆಯಾಗಿ ಅವನಿಗೆ ಕೊಡಿಸುವೆನೆಂದು, ನಿಮ್ಮ ರೇಖ ಅಂಟಿಯವರ ಅಪ್ಪಣೆಯಂತೆ, ಈಗ ಆ ವೇಳೆ ಕೂಡಿ ಬಂದಿದೆ' ಎಂದು ನನ್ನ ಕಿವಿಯಲ್ಲಿ ಉಸಿರಿದ. 'ಅಲ್ಲ ಜೀವು, ರೇಖಾ ಅತ್ತೆ ನಿಮಗಿಬ್ಬರಿಗೂ ಗೊತ್ತಿಲ್ಲವ ಅವನ ಚೇಷ್ಟೆ?"ಇರಲಿ, ನಿನ್ನ ಮಾತು ನಂಬಿರುವೆ, ಎನ್ನುತ್ತ ಸೋಮು ಕೇಳಿದಷ್ಟು ಹಣ ಕೊಟ್ಟು ಮುಂದೆ ಹೊರಟೆವು.

ಸೋಮುವಿನಿಂದ ತನಗೂ ಹಿಂಸೆಯಾಗಿದ್ದರೂ, ಜೀವು ಅವನಿಗಾಗಿ ಎಂದೂ ಏನೂ ಕೇಳಿದವನಲ್ಲ. ಅಂಥವನಿಂದ ಇಂಥ ತ್ಯಾಗದ ಮಾತೆ! ನಿಜವಾದ ಅರ್ಥದಲ್ಲಿ ಅವ ಸಹಾಯಕನಲ್ಲ, ನನ್ನ ಶ್ರೇಯೋಭಿಲಾಷಿ. ಗುರುವಿನಂತೆ. ಸ್ವಲ್ಪ ದೂರ ಹೋದಮೇಲೆ ನನ್ನ ಯೋಚನೆ 'ಇಲ್ಲಿ ಏನೋ ಜೀವಣ್ಣನ ಕೈವಾಡವಿರಬೇಕು' ಎನಿಸಿತು. 'ಜೀವು ನಿಜ ಹೇಳು, ಏನೋ ಷಡ್ಯಂತ್ರ ನಡೆದಿದೆ, ನನಗೇನೂ ಅರ್ಥವಾಗ್ತಿಲ್ಲ, ನಿನ್ನ ಮನಃಶಾಸ್ತ್ರ ಪ್ರಯೋಗಾನ?'. 'ಹಾಗೇನಿಲ್ಲ ಸಾರ್, ರೇಖಾ ಅತ್ತೆ ಅವ್ರ ಪ್ಲಾನ್ಗೆ ನೆರವಾಗಬೇಕಾಯ್ತಷ್ಟೆ'. ಅಮಾವಾಸ್ಯೆ ಕತ್ತಲು, ಪೌರ್ಣಮಿ ಎರಡೂ ಒಟ್ಟಿಗೇ ಹೇಗೆ ಸಾಧ್ಯ?', 'ಆದ್ರೆ ಇಲ್ಲಿ ಅನುಕೂಲಕ್ಕೆ ಬಂದಿದ್ದು ನಿಮ್ಮ ರೇಖಾ ಅತ್ತೆಯವರಿಗೂ ಗೊತ್ತಿತ್ತುದು ನಿಮಗೆ ಮದುವೆ ಈಗ ಸುತರಾಂ ಇಷ್ಟವಿಲ್ಲವೆನ್ನುವುದು. ಆದರೆ ನಾಗತ್ತೆ ಒತ್ತಾಯ ಬಹಳವೇ ಆಗಿ ಅವರ ಹಠವೇ ಗೆಲ್ಲುವುದೆನ್ನುವ ಕಾರಣ ಸೋಮುವಿನ ಚೇಷ್ಟೆಯನ್ನ ಇಲ್ಲಿ ಉಪಯೋಗಿಸಕೋ ಬೇಕಾಯ್ತು. ನಿಮಗೆ ನೆರವಾಗಲು ಸೋಮುವಿಗೆ ಅತ್ತೆಯವರ ಕೂಡ ಮಾತಾಡಿ–ಈಗ ಅವನು ಮುಖ ಬೇರೆಡೆಗೆ ತಿರುಗಿಸಿ–ನಿಮ್ಮ ಶೇರ್ವಾನೀ ಅವನಿಗೆ ಹೊಂದುವಂತೆ ಧರಿಸಿ ರಾತ್ರಿ ಅವರುಗಳು–ಅಂದರೆ ಅತಿಥಿಗಳು– ಮಲಗಿರುವಾಗ ಅವರ ಕೋಣೆಯಲ್ಲಿ ಓಡಾಡಿ, ಧಾಮ್ಧೂಂ ಎಬ್ಬಿಸಿ ಕತ್ತಲಲ್ಲಿ ಗಾಬರಿಯಾಗುವಂತೆ ಮಾಡಿಸಿದ್ದು, ಆದರೆ ಅವನಿಗೆ ಏನೂ ತಿಳಿಯದಂತಿರಬೇಕೆಂದು ತಿಳಿಸಿದ್ದೆವು. ಅವ ಧೈರ್ಯವಾಗಿ ನಿಮಗಾಗಿ ಅ ಕೆಲಸ ಮಾಡಿಬಂದಿದ್ದ.

ಬೆಳಗೆದ್ದು ಎಲ್ಲರಿಗೂ ಗೊಂದಲ ತಿಳಿಸಿ, ನಿಮ್ಮ ಶೇರ್ವಾನಿ ಕೊಟ್ಟಿಗೆಯಲ್ಲಿದ್ದನ್ನ ಸೋಮು ಕಂಡು ಎಲ್ಲರೂ–ನಾಗತ್ತೆನೂ ಸೇರಿ ನೀವೇ ಅದಕ್ಕೆ ಕಾರಣರೆಂದಾಗ, ನಾನು–ಕ್ಷಮಿಸಿ ರೇಖಾ ಅತ್ತೆಯವರೂ ಒಪ್ಪಿದ್ದು–ಅವ ಬೇರೆಡೆ ಮುಖ ತಿರುಗಿಸಿದ್ದ– ನಿಮಗೆ ಇತ್ತೀಚೆಗೆ ಆಗಾಗ್ಗೆ ನಿದ್ದೆಯಲ್ಲಿ ಮಹಡಿಯಮೇಲೂ ಓಡಾಡುವ ದುರಭ್ಯಾಸವುಂಟೆಂದು ತಿಳಿಸಿ, ನೀವು ಇಂದೇ ಹೊರಟುಬಿಡುವಿರೆಂದು ಅತಿಥಿಗಳಿಗೆ ಧೈರ್ಯ ತುಂಬಿದ್ದೆವು. ಈ ವಿಷಯ ನಾಗತ್ತೆಗೆ ಮೊದಲೇ ನಾವೇಕೆ ಹೇಳಿರಲಿಲ್ಲವೆಂದು ಆಕೆ ಕೋಪಗೊಂಡಿದ್ದರು. ನಿಮ್ಮ ಈ ವ್ಯಾಧಿಯಿಂದಾಗಿ ನಿಮ್ಮ ಶೇರ್ವಾನಿ ಬೆಳಿಗ್ಗೆ ದನದ ಕೊಟ್ಟಿಗೆಯ ಸಗಣಿಯಲ್ಲಿ ಬಿದ್ದಿತ್ತೆಂದು ಸೋಮು ತಿಳಿಸಿದ. ನನಗೆ ಕೋಪ ನೆತ್ತಿಗೇರಿತ್ತು, ಇವನ ತಂತ್ರದಿಂದಾಗಿ ನಾನು ಕೆಟ್ಟ ರೋಗದವನಲ್ಲದೆ ನನ್ನ ಬಹು ಮೆಚ್ಚಿಕೆಯ ಶೇರ್ವಾನಿ ಸಗಣಿಯಲ್ಲಿ ಹಾಕುವ ಧಾರ್ಷ್ಟ್ಯ ಜೀವೂಗೆ ಹೇಗೆ ಬಂತು?" ಜೀವೂ ಇದು ಸರೀನಾ? ನಿನ್ನ ತಂತ್ರ್ಯ ಅಥವಾ ಕುತಂತ್ರ್ಯವೋ?', ಆಫೀಸಿನ ಪತ್ರದಲ್ಲಿ 'ತುರ್ತು ಬರಬೇಕೆಂಬುದನ್ನ ಹೇಗೆ ಯೋಚಿಸಿದೆ? ಎಲ್ಲಿ ಸಿಕ್ಕಿತು? ಕ್ಷಮಿಸಿ

ಸಾರ್, ಇದು..... ತಡವರಿಸಿದ. ಆದರೆ ನಿಮ್ಮ ಎಲ್ಲ ಸಮಸ್ಯೆಗಳು ತೀರಿಹೋದವು. ನಿಮ್ಮ ಬಳಿ ಸೋಮುವನ್ನಾಗಲಿ, ನಾಯಿಯನ್ನಾಗಲಿ ಬಿಡುವುದೂ ಒಂದೇ ವೇಗದಿಂದ ಓಡುತ್ತಿರುವ ಲಾರಿಗೆ ಅಡ್ಡಲಾಗಿ ಮಲಗುವುದೂ ಒಂದೇ ಎಂದು ಎಲ್ಲರೆದುರಿಗೆ ಹೇಳಿ ನಾಗತ್ತೆ ತಮ್ಮ ನಿರ್ಧಾರ ಬದಲಿಸಿ, ಅಮೆರಿಕದಿಂದ ಬಂದವರಿಗೆ ನಾಯಿಯ ಉಸ್ತುವಾರಿ ಕಷ್ಟವೇನಿಲ್ಲವೆಂದು ಆ ಸ್ನೇಹಿತರಿಗೇ ಒಪ್ಪಿಸಿದರು. ಇನ್ನ ಸೋಮು ತಾನು ನಿಮ್ಮ ಗುಣ ಗೊತ್ತಿದ್ದೂ ಬಿಲ್ಕುಲ್ ನಿಮ್ಮ ಜೊತೆ ಇರಲಾರೆ, ಆದರೆ ಮೀನಾವರನ್ನ ಬಹಳವೇ ಹಚ್ಚಿಕೊಂಡಿದ್ದು ಅಲ್ಲಿಯೇ ಇರಲು ಮೊಂಡು ಹಿಡಿದಿದ್ದಾನೆ.

'ಆದರೆ ನನ್ನ ಶೇರ್ವಾನಿ ಗತಿ? ಯಾವ ನ್ಯಾಯ? ಹೋಗಲಿ ಬಿಡು, ನಿನ್ನ ಯೋಚನಾ ಶಕ್ತಿ ಬಹು ದೊಡ್ಡದಯ್ಯ, ಏನು ಕೊಟ್ಟರೂ ಸಾಲದು. ದೊಡ್ಡ ಥಾಂಕ್ಸ್ ಜೀವಣ್ಣ, ನನ್ನ ಎಂತಹ ಕಷ್ಟದಿಂದ ಪಾರುಮಾಡಿದ್ದೀಯ ಗೊತ್ತೆ? ಅಂತಹುದರಲ್ಲಿ ಶೇರ್ವಾನಿಯ ಬೆಲೆ ಯಾವ ಲೆಕ್ಕ? ಮತ್ತೊಂದ ಬಾರಿ ನಿನಗೆ ದೊಡ್ಡ ನಮಸ್ಕಾರ ಕಣಯ್ಯ'

'ಸಾರ್, ನೀವೇನೆ ಹೇಳಿದರೂ ನಿಮ್ಮ ರೇಖಾ ಅತ್ತೆಗೂ ನಿಮ್ಮ ಥ್ಯಾಂಕ್ಸ್ ಸಲ್ಲಬೇಕು, ಅವರಿಂದಾಗೇ ನನ್ನ ಈ ಮನ:ಶಾಸ್ತ್ರ ಪ್ರಯೋಗ ಮತ್ತೆ ಪ್ರಯೋಜನಕ್ಕೆ ಬಂತಲ್ಲವೆ?'

'ಓಹ್, ಮೈ ಗಾಡ್, ನಿನ್ನ ಬಿಟ್ಟರೆ ಇಲ್ಲ. ಆದರೆ ಈ ಗುಟ್ಟು ನಿನ್ನಲ್ಲೇ ಇರ್‍ಲಿ ಜೀವು, ನಾಗತ್ತೆಗಾಗ್ಲಿ, ಬೇರೆ ಯಾರ್ಗೇ ಆಗ್ಲಿ ತಿಳೀಬಾರ್ದು, ಅಲ್ವಾ, ಏನ್ಹೇಳ್ತೀ?--

■



# ಟಿ.ವಿ. ಸುಖ

**ಸಂಪಟೂರು ವಿಶ್ವನಾಥ್**

ನನಗೆ ಕೇಬಲ್ ಟಿ.ವಿ. ಇಷ್ಟ. ಇಪ್ಪತ್ತು ವರ್ಷದ ಹಿಂದೆ ನೋಡಲು ಸಾಧ್ಯವಿಲ್ಲ ಎಂದು ಎದ್ದು ಹೋದ ಸಿನಿಮಾಗಳನ್ನು ಆರಾಮವಾಗಿ ಕುಳಿತುಕೊಂಡು ಅಳಿದು ಉಳಿದದ್ದನ್ನು ತಿನ್ನುತ್ತಾ ತೂಕಡಿಸಲು ಸಾಧ್ಯವಾಗಿದೆ.

ಐದಾರು ಛಾನಲ್‌ಗಳಲ್ಲಿ ಏಕ ಕಾಲದಲ್ಲಿ ಸಂಸಾರಕ್ಕೆ ಸಂಬಂಧಿಸಿದ ಸಮಸ್ಯೆಗಳ ಮನರಂಜನೆ ಕಾಣ/ಕೇಳ ಸಿಗುತ್ತದೆ. ಪ್ರೇಕ್ಷಕರಿಗೆ ನಟನಟಿಯರ ಹೆಸರುಗಳೂ ತಿಳಿದಿರುವುದಿಲ್ಲ, ಪಾತ್ರಗಳ ಸಂಬಂಧಗಳೂ ತಿಳಿದಿರುವುದಿಲ್ಲ. ಇದೇ ಅಲ್ಲವಾ ಮನರಂಜನೆ ಅಂದರೆ.

ಎಲ್ಲ ಛಾನಲ್‌ಗಳ ಧಾರಾವಾಹಿಗಳನ್ನು ಸೊಸೆಯರೊಂದಿಗೆ ಗಂಭೀರ ದೃಷ್ಟಿಯಿಂದ ನೋಡುತ್ತಿದ್ದ ನಿವೃತ್ತ ಮುಖ್ಯ ಶಿಕ್ಷಕಿಯೊಬ್ಬರು ಜಾಹೀರಾತುಗಳಿಗೇ ಹೆಚ್ಚು ನಿಮಿಷಗಳನ್ನು ಕೊಡಿ ಎಂದು ಸರ್ಕಾರಕ್ಕೆ ಸಲಹೆ ಮಾಡಿದ್ದಾರೆ.

ಒಬ್ಬರ ಮುಂದೆ ಒಬ್ಬರು ಕುಳಿತು ಬೇಡದ ಮಾತುಗಳಿಗೆ ಇರುವ ಅವಕಾಶವನ್ನು ಕಡಿಮೆ ಮಾಡುವುದರಲ್ಲಿ ಟಿ.ವಿ ಮಾಧ್ಯಮ ಸಫಲವಾಗಿದೆ ಎಂದು ಸಮೂಹ ಮಾಧ್ಯಮದ ಮುಖ್ಯ ನಿರ್ವಹಣಾಧಿಕಾರಿಯೊಬ್ಬರು ಸಮರ್ಥಿಸಿಕೊಂಡಿದ್ದಾರೆ.

ನನ್ನ ಅಚ್ಚುಮೆಚ್ಚಿನ ಟಿ.ವಿ. ಛಾನಲ್‌ನ ಹವಾಮಾನ ತಜ್ಞರು ನೆನ್ನೆಯ ಹವಾಮಾನ ಮುನ್ಸೂಚನೆಯನ್ನು ನಿಖರವಾಗಿ ಹೇಳುವುದಿಲ್ಲ ಎಂದು ಬೇಸರವಾಗುತ್ತಿದೆ.

ಇತ್ತೀಚೆಗೆ ಬಿತ್ತರವಾಗುತ್ತಿರುವ ಜನಪ್ರಿಯ ಮನರಂಜನಾ ಕಾರ್ಯಕ್ರಮಗಳು ಕಳಪೆಯಾಗಿವೆ ಎಂಬ ನನ್ನ ಅಭಿಪ್ರಾಯಕ್ಕೆ ನನ್ನ ಮೊಮ್ಮಕ್ಕಳೇ ಸಾಕ್ಷಿ. ಸಂಜೆಯಿಂದ ಮಲಗುವವರೆಗೂ ಅವರು ತಲೆಎತ್ತದೆ ತಮ್ಮ ಹೋಂ ವರ್ಕನ್ನು ಸರಿಯಾಗಿ ಮಾಡಿಮುಗಿಸುತ್ತಿದ್ದಾರೆ.

ಅವನು ಟಿ.ವಿ. ಕಾರ್ಯಕ್ರಮದ ಶ್ರೀಮಂತ ಪ್ರಾಯೋಜಕ. ಜಾಹೀರಾತು ಬಂದಾಗ ಮಾತ್ರ ನೋಡುತ್ತಾನೆ. ಧಾರಾವಾಹಿ ಆರಂಭವಾದರೆ ಅಡುಗೆ ಮನೆಗೆ ಹೋಗಿ ಫ್ರಿಡ್ಜ್ ತೆರೆಯುತ್ತಾನೆ.

ಅಂತರ್ಜಾಲ ಟಿ.ವಿ. ಬಂದದ್ದೇ ಬಂದಿದ್ದು ನನ್ನ ಮೊಮ್ಮಗಳು ನನಗಿಂತ 1500 ಹೆಚ್ಚು ಸಿನಿಮಾಗಳನ್ನು ನೋಡಿದ್ದಾಳೆ.

ಸದಭಿರುಚಿ ಇಲ್ಲದಿದ್ದರೆ ಬೇಡ, ಸಾಮಾನ್ಯ ಪ್ರಜ್ಞೆ ಮತ್ತು ಅಪರಾಧ ಪ್ರಜ್ಞೆಯೊಂದು ಇರುವವರೇ ಉತ್ತಮ ನಿರ್ಮಾಪಕರು ಎನ್ನುತ್ತಾರೆ ಪಾರ್ಕ್‌ನ ಸಂಜೆ ಗೆಳೆಯರು.

ನನ್ನ ಮನೆಯ ಟಿ.ವಿ.ಯ ರಿಮೋಟನ್ನು ಚಾಲು ಮಾಡುವವರು ಇಬ್ಬರೇ, ನನ್ನ ಅತ್ತೆ ಮತ್ತು ನನ್ನ ಹೆಂಡತಿ. ಆದರೆ ಮಲಗುವುದಕ್ಕೆ ಮುಂಚೆ ಆಫ್ ಮಾಡುವವನು ಮಾತ್ರ ನಾನೇ.

ಟೆಲಿವಿಷನ್ ಮಿದುಳಿನಿಂದ ಬುದ್ಧಿಯನ್ನು ಬೇರ್ಪಡಿಸುವ ಅತ್ಯುತ್ತಮ ಸಾಧನ.

■

# ಹಾಸ್ಯ ಡಿ.ವಿ.ಜಿ ದೃಷ್ಟಿಯಲ್ಲಿ

( ಡಿ.ವಿ.ಜಿ.ಯವರ ಮುನ್ನುಡಿಗಳು ಗ್ರಂಥದಿಂದ ಆಯ್ಕೆ)

**ಸುಕೇಶವ**

1. ಒಂದೊಂದು ಸಾರಿ ನಮ್ಮ ಸ್ನೇಹದ ನಡುವೆ ಸಲುಗೆಯ ಆಕ್ಷೇಪಣೆಯೂ ತಲೆದೋರುತ್ತಿತ್ತು. ಆದರೆ ಕೈಲಾಸಂ ನನ್ನನ್ನು ಯಾವಾಗಲೂ ಮೃದು ವಾತ್ಸಲ್ಯದಿಂದಲೇ ಕಂಡು ನನ್ನ ಕೋಪ ಸೂಚನೆಯನ್ನು ತಮ್ಮ ಹಾಸ್ಯದ ಪ್ರತ್ಯಕ್ತಿಗಳಿಂದ ಸೋಲಿಸಿಬಿಡುತ್ತಿದ್ದರು. ಒಂದಾನೊಂದು ದಿನ ನಾವಿಬ್ಬರೂ ಏಕಾಂತದಲ್ಲಿ ಮಾತನಾಡುತ್ತಿದ್ದಾಗ ಹೇಗೋ ಗೃಹಸ್ಥ ಸೌಖ್ಯವನ್ನು ಕುರಿತು ಪ್ರಸ್ತಾಪ ಬಂತು. ಅವರು ಹೌದಯ್ಯಾ ಹೌದು. ಹೋಂ ಸ್ವೀಟ್ ಹೋಂ, ನಥಿಂಗ್ ಲೈಕ್ ಹೋಂ. ಆಹ್. ನಥಿಂಗ್ ಲೈಕ್ ಹೋಂ. ದೇರೀಸ್ ನಥಿಂಗ್ ಲೈಕ್ ಹೋಂ ಎಂದು ಕಹಿ ಕಹಿ ಹಾಸ್ಯ ಹಾಡಿದರು. ನಾನು ದುಡುಕಿ ನಥಿಂಗ್ ಲೈಕ್ ನಾನ್ ಸೆನ್ಸ್ ಫಾರ್ ಯು ಎಂದುಬಿಟ್ಟೆ. ಹಾಗೆಂದು ಕೂಡಲೇ ತುಟಿ ಕಚ್ಚಿಕೊಂಡೆ. ಅದಕ್ಕೆ ಕೈಲಾಸಂ ಆಲ್ ರೈಟ್ ಮೈ ಬಾಯ್ ಲೆಟ್ ಇಟ್ ಬಿ ಸೋ ಎಂದು ನಕ್ಕುಬಿಟ್ಟರು.

2 ನಗುವು ಅಳುವುಗಳು ಗಂಡಬೇರುಂಡದ ಮುಖಗಳಂತೆ. ಎರಡಕ್ಕೂ ಶರೀರ ಒಂದೇ. ನಿಮ್ಮ ಹೃದಯೇಶ್ವರಿಯ ಮೂಗಿನ ಮೇಲೆ ಅಡುಗೆ ಮನೆಯ ಮಸಿ ಸ್ವಲ್ಪ ಅಂಟಿಕೊಂಡಿದ್ದರೆ ನೀವು ಇದೇನು ಉಂಡೆಯ ನಶ್ಯವೋ ಇಲ್ಲಾ ಪುಡಿ ನಶ್ಯವೊ ಎಂದು ಕೇಳಿ ರೇಗಿಸಿ ನಗುವಿರಿ. ಆದರೆ ಅದೇ ಮುಖದ ಮೇಲೆ ಬಾಣಲೆಯ ತುಪ್ಪ ಸಿಡಿದು ಬಿದ್ದು ಹುಣ್ಣಾದರೆ ನಿಮ್ಮ ಬಾಯಿಂದ ಹೊರಡುವುದು ನಗುವಾದೀತೇ? ಜೀವನ ಸಣ್ಣ ಸಣ್ಣ ವಿಕಾರಗಳೂ ಚಕ್ಕುಲಗುಲಿಯಿಡುವ ಬೆರಳುಗಳು. ದೊಡ್ಡ ದೊಡ್ಡವು ಶೂಲದ ಮೊನೆಗಳು. ಉತ್ತಮ ಹಾಸ್ಯವು ಆನಂದದ ಒಂದು ಸ್ವರೂಪ, ಜ್ಞಾನಕ್ಕೆ ಒಂದು ಬಾಗಿಲು

3 ವಿಕಾರವೆಂದರೆ ನಮಗೆ ರೂಢಿಯಾಗಿ ಅಥವಾ ಇಷ್ಟವಾಗಿ ಬಂದಿರುವ ವಸ್ತುಸ್ಥಿತಿಯಲ್ಲಿ ನಡೆಯುವ ಒಂದಾನೊಂದು ವ್ಯತ್ಯಾಸ ಅಥವಾ ವೈಪರೀತ್ಯ. ಅದು ಅತಿದೂರ ವ್ಯಾಪಿಸದೇ ಬಹುಕಾಲ ನಿಲ್ಲುವಂತಿರದೇ ಸುಲಭವಾಗಿ ತಿದ್ದಿಕೊಳ್ಳುವ ಹಾಗಿದ್ದರೆಅತವಾ ನಮ್ಮ ಮುಖ್ಯ ಸೌಖ್ಯಕ್ಕೆ ಭಂಗತಾರದ ಹಾಗಿದ್ದರೆ "ಕೀರಿನಲ್ಲಿ ಸಿಕ್ಕುವ ಬಾದಾಮಿ ದ್ರಾಕ್ಷಿಗಳಂತೆ" ಅದೂ ಇಷ್ಟವೇ. ಈ ಬಗೆಯ ಲಘು ವಿಕಾರವನ್ನು ಸೌಂದರ್ಯ ಸಾಮಗ್ರಿಯ ಒಂದು ಅಪಕ್ವಾವಸ್ಥೆಯೆಂದು ಹೇಳಬಹುದು. ಅದು ನರನನ್ನು ತಯಾರು ಮಾಡ ಹೊರಟ ಬ್ರಹ್ಮನ ಕೈಯಿಂದ ವಾನರನು ಹೊರಟು ಬಂದ ಹಾಗೆ. ಬಾಯನ್ನು ಸಿಹಿ ಮಾಡಬೇಕಾದ ಮಾವಿನಕಾಯಿ ಕಲ್ಲಿನ ಪೆಟ್ಟಿಗೆ ಸಿಕ್ಕಿ ಬಂದು ಹಲ್ಲಿಗೆ ಹುಚ್ಚು ಹಿಡಿಸುವ ಹಾಗೆ. "ಮುಕುಟ" ವೆಂದು ಹೇಳಹೊರಟ ತುಟಿ "ಮರ್ಕಟ" ಎಂದು ನುಡಿದ ಹಾಗೆ. ಜಗನ್ಮೋಹಕವಾಗಬೇಕಾಗಿದ್ದ ಭಾವಚಿತ್ರವು ರಾಜನ ಆತುರದಿಂದ ತೆನಾಲಿ ರಾಮಕೃಷ್ಣನ ವಿಕಟ ಚಿತ್ರವಾದ ಹಾಗೆ. ತುಂಬುರನಂತೆ ಹಾಡುವೆನೆಂದು ತೆರೆದ

ಬಾಯಿಂದ ತೇಗು ಹೊರಟ ಹಾಗೆ. ಈ ತೆರದ ಲಘು ವಿಕಾರವು ಮಮತೆಯ ದೃಷ್ಟಿಗೆ ಗೋಚರಿಸಿದಾಗ "ಅಜ್ಜಿಯ ಹಾಡಿನ ಅದಿರು ದನಿಯು ಅಜ್ಜನ ಕಿವಿಯನ್ನು ಸೋಕಿದಾಗ – ಭಾವನ ಹಣೆಯ ಬೊಟ್ಟಿನ ಸೊಟ್ಟು ಅಕ್ಕನ ಕಣ್ಣಿಗೆ ಕಾಣಿಸಿದಾಗ" ಅದು ನಿರ್ಮಲ ಹಾಸ್ಯದ ಬುಗ್ಗೆಯಾಗುವುದು. ನಮ್ಮ ಜೀವನಾನುಭವಗಳಲ್ಲಿ ಇಂಥಾ ಮೃದು ವಿಕಾರಗಳು ಇಂಥಾ ಮುದ್ದು ಚೇಷ್ಟೆಗಳು, ಸೀಹಣ್ಣುಗಳ ನಡುವೆ ಇರುವ ಹುಳಿ ದಾಳಿಂಬೆಗಳಂತೆ ಪ್ರಿಯವೂ ಹೌದು ಹಿತವೂ ಹೌದು.

4 ನಮ್ಮ ಪೂರ್ವ ಸಾಹಿತ್ಯದಲ್ಲಿ ಉತ್ತಮ ಹಾಸ್ಯ ಪ್ರಧಾನವಾದ ಕಾವ್ಯಗಳು ಅಪರೂಪವಾಗಿವೆ. ಹಾಸ್ಯವೇನೋ ಕಾವ್ಯ ರಸಗಳಲ್ಲಿ ಒಂದೆಂದು ಲಕ್ಷಣ ಶಾಸ್ತ್ರಕಾರರು ಒಪ್ಪಿಕೊಂಡಿದ್ದಾರೆ. ಆದರೆ ಅದರ ಉದಾಹರಣೆಯಾಗಿ ನಮಗೆ ದೊರಕುವ ಪ್ರಹಸನಗಳು ಬಹುಶ: ಕೊಠಡಿಯೊಳಗೆ ಮಾತ್ರವೇ ರಹಸ್ಯವಾಗಿ ಓದಿಕೊಳ್ಳಬಹುದಾದುವು. ಅವುಗಳದು ಸಭ್ಯ ಹಾಸ್ಯವಲ್ಲ. ಸಭ್ಯ ಹಾಸ್ಯದಲ್ಲಿ ನವುರೂ ನಾಜೂಕೂ ಇರಬೇಕು. ಅದರಿಂದ ಯಾರಿಗೂ ನೋವಾಗಲೀ ಅಸಹ್ಯವಾಗಲೀ ಆಗಬಾರದು. ಅದು ಪೂಜ್ಯರಾದವರ ವಿಷಯದಲ್ಲಿ ಕೂಡಾ ಅನ್ವಯಿಸಲರ್ಹವಾಗಿರಬೇಕು. ಕಾಲಿದಾಸನು ಬ್ರಹ್ಮನನ್ನು ವೇದಾಭ್ಯಾಸ ಜಡ ಎಂದು ಕರೆದು ರಮಣೀಯ ರೂಪ ನಿರ್ಮಾಣವು ಆ ಪುರಾಣ ಮುನಿಯಿಂದ ಹೇಗಾದೀತೆಂದು ಶಂಕೆ ಸೂಚಿಸಿ ಪರಿಹಾಸವನ್ನಭಿಯಿಸಿಲ್ಲವೇ. ಅದು ಮರ್ಯಾದೆಯುಳ್ಳ ಮಧುರವಾದ ಹಾಸ್ಯ.

5 ಹಾಸ್ಯದರ್ಶಿಯೆಂದರೆ ವಿಷಮವೆಂದು ತೋರುವ ಸಂದರ್ಭದಲ್ಲಡಗಿರಬಹುದಾದ ವಿಕಟ ಪ್ರಸಕ್ತಿಯನ್ನು ಕಂಡುಕೊಳ್ಳುವ ಅಭ್ಯಾಸ. ಅಕಾರಣ ರೋಷದಿಂದ ಹಲ್ಲು ಕಡಿಯುತ್ತಿರುವವನಿಗೆ ಕನ್ನಡಿ ತೋರಿಸುವ ಅಭ್ಯಾಸ. ಆಕಾಶಕ್ಕೆ ಕತ್ತೆತ್ತಿ ನಡೆಯುತ್ತಿರುವವನ ಮೇಲೆ ಒಂದೆರಡು ಸಣ್ಣ ಇರುವೆಗಳನ್ನು ಬಿಡುವ ಅಭ್ಯಾಸ. ನಮ್ಮ ಮುಖಕ್ಕೆ ಇನ್ನೊಬ್ಬರು ಕನ್ನಡಿ ಹಿಡಿದಾಗ ನಾವೂ ಅವರೊಡನೆ ಸೇರಿ ನಗುವ ಅಭ್ಯಾಸ. ಈ ಉತ್ತಮ ಹಾಸ್ಯಾಭ್ಯಾಸವು ನಮ್ಮ ಮನಸ್ಸಿನ ವಿಸ್ಮೃತಿ, ದುರಾಗ್ರಹಗಳನ್ನು ಕಳೆಯುತ್ತದೆ. ಕಳೆದು ಹೋದ ಸಮಾಧಾನವನ್ನು ಪುನ: ತಂದು ಕೊಡುತ್ತದೆ. ತಾರತಮ್ಯ ವಿವೇಕವನ್ನು ಹುಟ್ಟಿಸುತ್ತದೆ. ಹೀಗೆ ಬರುವ ಉತ್ತಮಾಧಮ ನಿರ್ಣಯ ಶಕ್ತಿಯೇ ಅಲ್ಲವೇ ಕಾರ್ಯ ಸಾಧನೆಗೆ ಬೇಕಾದುದು?

6 ಹಾಸ್ಯ ಬೀಜಕ್ಕೆ ಅವಕಾಶ ಬಿಡದ ಮಾನವ ಪ್ರಸಂಗವಿಲ್ಲ ಎಂಬುದು ಚನ್ನಾಗಿ ತೋರಿಬರುತ್ತದೆ. ಈ ಹಾಸ್ಯ ದೃಷ್ಟಿಯ ಸಹಾಯದಿಂದ ನಮ್ಮ ಮುಖದ ಬಿಗಿದ ನರಗಳು ಸ್ವಲ್ಪ ಸಡಿಲ ಬಿಡುತ್ತವೆ. ದೂರದಲ್ಲಿ ನಿಂತು ಹೊಂಚಿ ನೋಡುವವರು ನಮ್ಮ ಹತ್ತಿರ ಬರುವಂತಾಗುತ್ತದೆ. ನಾವೇನೂ ದೇವಾಂಶ ಮೂರ್ತಿಗಳಲ್ಲ, ಇತರರಂತೆ ಆಗಾಗ ತಪ್ಪು ಹೆಜ್ಜೆ ಇಡುವ ಮನುಷ್ಯರೇ ಎಂಬುದು ನಮ್ಮ ದಿವ್ಯ ಚಿತ್ತಕ್ಕೆ ವೇದ್ಯವಾಗುತ್ತದೆ. ಹಾಸ್ಯವು ನಯವಾದ ಹಗುರವಾದ ಶುಚಿಯಾದ ಸಭ್ಯವಾದ ಹಾಸ್ಯವು ನಮ್ಮಲ್ಲಿ ವಿಶೇಷವಾಗಿಲ್ಲವೆಂದೂ ಅದು ನಮ್ಮ ಸಾಹಿತ್ಯದಲ್ಲಿ ಹೆಚ್ಚಾಗಿ ಬೆಳೆಯುವುದು ಒಳ್ಳೆಯದೆಂದು ನಾನು ತಿಳಿದುಕೊಂಡಿದ್ದೇನೆ. ■

# ಗಂಡವಳೀ ತಾತಾ. . . . . .

**ಎಚ್.ಗೋಪಾಲಕೃಷ್ಣ**

ನಾಳೆ ಇನ್ನೊಂದುಸಲ ಬನ್ನಿ. . . . .ನನಗೇನೋ ಡೌಟು . . . . ಅಂತ ಗೈನಕಾಲಜಿಸ್ಟು ನಮ್ಮ ಕಡೆ ತಿರುಗಿ ಹಣೆ ಮೇಲಿನ ಬೆವರು ಒರೆಸಿಕೊಳ್ತಾ ಹೇಳಿದರು. ಮಗಳನ್ನು ಪ್ರೆಗ್ನೆನ್ಸಿ ಅಂದರೆ ಬಸಿರು ಪರೀಕ್ಷೆಗೆ ಕರೆದುಕೊಂಡು ಹೋಗಿದ್ದೆವು, ಕಳೆದ ತಿಂಗಳು.

ಟೆಸ್ಟು ಪಾಸಿಟೀವು ರೀ ಅಂತ ಹೇಳಿದ್ದರು ಮತ್ತು ಇವತ್ತಿನ ಪರೀಕ್ಷೆ ನಂತರ ಜೋಡಿ ಮಕ್ಕಳು ಇದ್ದ ಹಾಗೆ ಅನಸುತ್ತೇರೀ ಅಂತ ಹೇಳಿ ನಾಳೆ ಬನ್ನಿ ಅಂದರು.

ಏಸಿ ರೂಮು ಅದ್ಯಾಕೆ ಬೆವರು ಒರೆಸಿಕೊಂಡರು ಅಂತ ದಿಗಿಲು ಶುರುವಾಯಿತು. ನಿಧಾನಕ್ಕೆ ಅವರ ರೂಮಿಗೆ ಬಂದ ನಂತರ ಅವರ ಫೀಸು ತೆಗೆದು ಅವರ ಮುಂದೆ ಇಡುತ್ತಾ ಡಾಕ್ಟರೇ ಎನಿ ಪ್ರಾಬಲಮ್ಮು. . . . . ಅಂದೆ.

ನೊ ನೊ ನೊ ನೋ ಪ್ರಾಬ್ಲಮ್ಮು. ಮೂರನೇ ಬಡಿತ ಕೇಳಿಸಿದ ಹಾಗಾಯಿತು. . . .ಅಂದರು.

ಇದೇನಪ್ಪಾ ಅಂತ ಆಶ್ಚರ್ಯ ಪಡುತ್ತಾ ಮೂರನೇ ಬಡಿತ ಅಂದರೇನು ಸಾ.. ಅಂದೆ.

ಮೇಡಂ ಸಾ ತಲೆ ಎತ್ತಿ ನನ್ನನ್ನು ನೋಡಿದರು.

ಮೂರನೇ ಮಗು ಇದ್ದ ಹಾಗಿದೆ ಗರ್ಭದಲ್ಲಿ. . . . . ಅಂದರು.

ಇದಕ್ಕೆ ಹದಿನೈದು ದಿವಸ ಮೊದಲು ಚೆಕ್ ಮಾಡಿಸಿ ಕೊಳ್ಳಲು ಹೋಗಿದ್ದೆವು. ಆಗ ಟ್ವಿನ್ಸ್ ಇದೇ ರೀ ಕಂಗ್ರಾಟ್ಸ್ ಅಂದಿದ್ದರು. ಅವಾಗಲೇ ಒಂದು ಶಾಕ್ ಗೆ ಹೆಂಡತಿ ಮಗಳು ಒಳಗಾಗಿದ್ದರು. ಆ ಶಾಕ್‌ನಿಂದ ಆಚೆ ಈಗ ತಾನೇ ಬಂದಿದ್ದೋ.

ಈಗ ಮತ್ತೊಂದು ಶಾಕ್‌ಅಂದರೆ ?

ಅವಳಿ ಮಕ್ಕಳು ಅಂದಾಗಲೇ ಸಪ್ಪಗಾಗಿದ್ದ ನನ್ನಾಕೆ ಹಾಗೂ ಮಗಳು, ಅಳಿಯ ಈ ಸುದ್ದಿ ಕೇಳಿ ಭೂಕಂಪ ಆದ ಹಾಗೆ ಹಾಗೆ ನಿಂತಿದ್ದರು.

ಮೇಡಮ್ಮು ನತಿಂಗ್ ಟು ವರಿ, ನಾಳೆ ಇನ್ನೊಬ್ಬರು ಸ್ಕಾನಿಂಗ್‌ನವರು ಬರ್ತಾರೆ, ಬನ್ನಿ ಕಂ ಟುಮಾರೋ. . . . ಅಂತ ಮತ್ತೆ ಸುರಿಯುತ್ತಿರುವ ಬೆವರು ಒರೆಸಿಕೊಂಡರು.

ಹೆಂಡತಿ ಮಗಳು ಅಳಿಯನ ಜತೆ ಆಚೆ ಹೋಗುವವರೆಗೆ ಕಾದೆ. ಮೆಲ್ಲಗೆ ಬಾಗಿಲು ಮುಚ್ಚಿದೆ.

ಹೇಳಿ ಏನು ಸಮಸ್ಯೆ. . . .ಅಂದೆ.

ಸಮಸ್ಯೆ ಅಂತ ಅಲ್ಲ, ಮೂರನೇ ಬಡಿತ ಅಂದರೆ ಮೂರನೇ ಮಗು ಇರೋ ಸಾಧ್ಯತೆ . . .

ಅಂದರೆ ಟ್. . .ಟ್ರಿಪ್ಲೆಟ್ಸಾ?

ತಲೆಯಾಡಿಸಿದರು.

ಮೂರು ಕೂಸುಗಳನ್ನು ಹೊಟ್ಟೆಯಲ್ಲಿ ಇಟ್ಟುಕೊಂಡು ಅದು ಹೇಗಪ್ಪಾ ಮೇನೇಜ್ ಮಾಡ್ತಾಳೆ ಮಗು ಅಂತ ಅನಿಸಿತು.

ಯೋಚಿಸಬೇಡಿ, ನಾಳೆ ಸ್ಕಾನಿಂಗ್ ಎಕ್ಸ್ಪರ್ಟ್ಸ್ ಬರಲಿ. . . . . ಅಂತ ಮತ್ತೆ ಬೆವರು ಒರೆಸಿಕೊಂಡರು.

ಆಚೆ ಬಂದೆ.

ಇಡೀರಾತ್ರಿ ನಿದ್ದೆ ಇಲ್ಲದೆ ಕಳೆದೆವು. ಮಾರನೇ ದಿವಸ ಬೆಳಿಗ್ಗೆ ಬೆಳಿಗ್ಗೇನೆ ಆಸ್ಪತ್ರೆ ಮುಂದೆ ಹೋಗಿ ಕಾದೆವು. ಎಕ್ಸ್ಪರ್ಟ್ಸ್ ಬಂದರು. ಸ್ಕಾನ್ ಮಾಡಿದರು. ಅವರೂ ಬೆವರು ಒರೆಸಿಕೊಂಡು ಆಚೆ ಬಂದರು.

ಕೂತ್ಕೋಳಿ, ಇನ್ನೊಬ್ಬರು ಬರ್ತಾರೆ ಅಂದರು. ನಾಲ್ಕೂ ಜನಕ್ಕೂ– ನಾನು, ನನ್ನಾಕೆ, ಅಳಿಯ, ನನ್ನ ಮಗಳು – ಬಿಪಿ ನೂರಾ ಅರವತ್ತು ರೀಚ್ ಆಗಿತ್ತು ಅಂತ ಕಾಣುತ್ತೆ. ಈಗ ಬೆವರು ಒರೆಸಿ ಕೊಳ್ಳೋ ಸರದಿ ನಮ್ಮದು.

ಇನ್ನೂ ಒಬ್ಬರು ಬಂದರು, ಅವರೂ ಒಳಗೆ ಹೋಗಿ ಸ್ಕಾನ್ ಮಾಡಿದರು. ಬನ್ನಿ ಅಂತ ಕರೆದರು. ಒಳಗೆ ಹೋದೋ.

ಎರಡಂತೂ ಗ್ಯಾರಂಟಿ, ಮೂರನೇದು ಈಗಲೇ ಹೇಳೋಕ್ಕೆ ಆಗುಲ್ಲ. ಟೂ ವೀಕ್ಸ್ ಬೇಕಾಗುತ್ತೆ. . . . . ಅಂದರು.

ಯಾರಿಗಾದರೂ ರೆಫರ್ ಮಾಡ್ತೀರಾ? ಅಂದೆ, ಹೀಗೆ ಕೇಳಬಾರದೋ ಬೇಡವೋ ಗೊತ್ತಿಲ್ಲದೇ..

ಛೇ, ಯಾಕೆ ಸಾರ್? ನಾವಿಲ್ಲವಾ ?

ಸರಿ ಅಂತ ತಲೆಯಾಡಿಸಿ ಆಚೆ ಬಂದೋ.

ನಂತರದ ಎರಡು ವಾರ ಪ್ರತಿ ದಿನ ಮೂರೂ ಹೊತ್ತು ಬೀಪಿ ಮಾತ್ರೆ ತಗೊಂಡು ದೇಹ ಕಂಟ್ರೋಲಿನಲ್ಲಿ ಇಟ್ಟುಕೊಂಡೆವು. ಎರಡು ವಾರದ ನಂತರ ಎರಡೇ ಕೂಸು ಇರೋದು ಅಂತ ಕನ್‌ಫರ್ಮ್ ಆಯಿತು.

ಅಲ್ಲಿಂದ ಹೊಸಾ ರೀತಿ ತವಕ ಆತಂಕ ಶುರು ಆದವು.

ಪ್ರತಿ ಹದಿನೈದು ದಿವಸಕ್ಕೆ ಒಮ್ಮೆ ವೈದ್ಯರ ಬಳಿ ಹೋಗೋದು, ಅವರ ಸಲಹೆ ಕೇಳೋದು, ಮಗು ಊಹೂಂ, ಮಕ್ಕಳು ಎಷ್ಟು ಬೆಳೆದಿವೆ ಕೇಳೋದು, ಮನೇಗೆ ಬಂದು ಇಂಟರ್ ನೆಟ್ ಹುಡುಕಿ ಅಲ್ಲಿ ಕೇಳೋಕ್ಕೆ ಆಗದೇ ಇದ್ದ ಪ್ರಶ್ನೆಗಳಿಗೆ ಉತ್ತರ ಹುಡುಕೋದು. . . .

ನಮಗೆ ಗೊತ್ತಿರೋ ಗುಂಪಿನಲ್ಲಿ ಯಾರ್‍ಯಾರಿಗೆ ಅವಳಿ ಹುಟ್ಟಿದ್ದವು ಅಂತ ಹುಡುಕಿ ಅವರ ಹತ್ತಿರ ಅವರು ಮಕ್ಕಳನ್ನ ಹೇಗೆ ಸಾಕಿದರು ಅಂತ ಮಾಹಿತಿ ಪಡೆಯೋದು. . . .

ಹೀಗೆ ಸಾವಿರಾರು ಮಾಹಿತಿ ತಲೆ ತುಂಬಾ ತುಂಬಿ ಕೊಂಡೆವು. ಆರನೇ ತಿಂಗಳು ಬಂತಾ? ಮಗಳು ವಾರವಾರಕ್ಕೆ ಐದು ಕೇಜಿ ಹೆಚ್ಚುತ್ತಾ ಹೋದಳು. ಇದು ಸಾಮಾನ್ಯ ಅಂತ ಡಾಕ್ಟರು ಹೇಳಿದರೂ ಅವರ ಮುಖದಲ್ಲಿ ಭಯ ಕಾಣಿಸಬೇಕೇ?

ಆರೂವರೆ ತಿಂಗಳಿಗೆ ಮಗಳು ನೂರಾ ಮೂವತ್ತು ಪ್ಲಸ್ ಐದು ಕೇಜಿ ತೂಗಿದಾಗ ಡಾಕ್ಟರೂ ಬೆಚ್ಚಿದರು. ಬ್ಲಡ್ ರಿಪೋರ್ಟ್ ಮಾಡಿಸಿ ಅಂದರು. ರಿಪೋರ್ಟ್ ನೋಡ್ತಾ ಮನೇಲಿ ಯಾರಿಗಾದರೂ ಶುಗರ್ ಇದೆಯಾ ಅಂದರು.

ಹೌದು ಸಾರ್ ನಾನು ಶುಗರ್ ಫ್ಯಾಕ್ಟರಿ ಓನರು ಅಂದೆ.

ಅದೇ ಟ್ರೇಸಸ್ ಕಾಣಿಸ್ತಿದೆ. ಹಾಸ್ಪಿಟಲ್‌ಗೆ ಸೇರಿಸಿ ಅಂದರು.

ಪಾಪ ತಾಯಿಗೆ ಅವತ್ತಿಂದ ಫುಲ್ ಡಯಟ್ಟು.

ಎರಡು ವಾರ ಆಸ್ಪತ್ರೇಲಿದ್ದು ಶುಗರ್ ಕಂಟ್ರೋಲಿಗೆ ತಂದುಕೊಂಡು ಮಗಳು ಮನೇಗೆ ಬಂದಳು, ಜತೇಗೆ ಒಂದು ದೊಡ್ಡ ಡಯಟ್ ಚಾರ್ಟೂ ಸಹ !

ಬೆಳಿಗ್ಗೆ ಏನು ತಿನ್ನಬೇಕು ಮದ್ಯಾಹ್ನ ಏನು ಸಂಜೆಗೇನು ರಾತ್ರಿಗೇನು, ಎಷ್ಟೆಷ್ಟು ಅನ್ನೋದು ಅಲ್ಲದೇ ಯಾವ ಯಾವುದನ್ನು ಮೂಸಿಕೂಡ ನೋಡಬಾರದು ಅನ್ನೋದು. ಪಾಪ ಮಗಳು ಬಸಿರಿ ಅಂತ ಗೊತ್ತಾಗುತ್ತಿದ್ದ ಹಾಗೇ ಒಂದು ಚಾರ್ಟು ತಯಾರಿಸಿ ಇಟ್ಟುಕೊಂಡಿದ್ದಳು. ಅದರ ಪ್ರಕಾರ ಏನೇನು ಬಯಕೆ ಆಗುತ್ತೆ ಅದರ ಲಿಸ್ಟು, ಅವುಗಳನ್ನು ಯಾವ ಯಾವ ತಿಂಗಳುಗಳಲ್ಲಿ ತಿನ್ನ ಬೇಕು ಅನ್ನುವ ಟೈಮ್ ಟೇಬಲ್ಲು. ಚಕ್ಕಲಿ, ಕೋಡುಬಳೆ, ಚಿಪ್ಸು ಬಾಳೇಕಾಯಿ, ಆಲೂಗೆಡ್ಡೆದು, ಉತ್ತರ ಭಾರತದ ತಿನಸುಗಳು, ಫ್ರೆಂಚ್ ಅಡಿಗೆ. . . . ಮತ್ತು ಇತರ ಹಲವು ನೂರು ತೆರನಾದವು. ಬಸಿರಿ ಹೆಂಗಸರಿಗೇ ಗೊತ್ತಿರುವಂತಹವು. ಪಾಪ ಡಯಟ್ ಚಾರ್ಟಿನ ಬೇಡದ ಕಾಲಮ್ಮಿನಲ್ಲಿ ಇವೆಲ್ಲಾ ಇರಬೇಕೇ ?

ಪುಟ್ಟಿ, ಹೇಗಾದರೂ ನಾಲಿಗೆ ಕಟ್ಟಿಕೋಮ್ಮಾ ಮಕ್ಕಳು ಮುಖ್ಯ ಅಲ್ಲವಾ? ಇವನ್ನೇನು ಯಾವಾಗ ಬೇಕಾದರೂ ಮಾಡಿಕೊಂಡು ತಿನ್ನಬೋದು ಅಲ್ಲವಾ .... ಅಂತ ನನ್ನಾಕೆ ಅವಳನ್ನು ಆಗಾಗ್ಗೆ ಸಮಾಧಾನ ಮಾಡೋದೂ ಉಂಟು. ದಿವಸಕ್ಕೆ ಒಂದು ಹತ್ತು ಸಲ ಮಗಳು ಕೋಡುಬಳೆ ನೆನೆಸಿಕೊಂಡೋ, ಪುಳ್ಳಂಗಾಯಿ ಉಂಡೆ ನೆನೆಸಿಕೊಂಡೋ ಮುಖ ಸಪ್ಪಗೆ ಮಾಡಿಕೊಂಡಾಗಲೆಲ್ಲಾ ಈ ಸೊಲೇಸಿಂಗ್ ಕಾರ್ಯಕ್ರಮ ನಡೆಯೋದು.

ಏಳನೇ ತಿಂಗಳಲ್ಲಿ ವೈದ್ಯರ ಹತ್ತಿರ ಹೋಗಿದ್ದೆವು. ಗರ್ಭದಲ್ಲಿನ ಮಗೂನ ಸ್ಕಾನಿಂಗ್‌ನಲ್ಲಿ ನೋಡುತ್ತಾ ಇದ್ದರು. ನಮಗೆ ಅದು ಕಾಣುವಂತೆ ಇರಲಿಲ್ಲ. ಡಾಕ್ಟರು ಅವರ ಶಿಷ್ಯೆ ಮಾತಾಡಿಕೊಂಡಿದ್ದು ಕಿವಿಗೆ ಬಿತ್ತು. ಒಂದು ಕೂಸು ಮೂಲೆಲಿ ಇತ್ತಂತೆ, ಮತ್ತೊಂದು ಮಧ್ಯದಲ್ಲಿ ಇತ್ತಂತೆ. ಮಧ್ಯದಲ್ಲಿ ಇರೋ ಮಗೂ ಬಗ್ಗೆ ಮಾತಾಡ್ತಾ ಹೆಣ್ಣಲ್ಲವಾ ಅದಕ್ಕೇ ಅದನ್ನ ದೂರಕ್ಕೆ ನೂಕಿದೆ ಅಂತ ಮಾತು ಆಡಿಕೊಂಡರಂತೆ. ಇವರ ಮುಖ ನೋಡಿ ಮಾತು ಬದಲಿಸಿದರಂತೆ. ಇದು ನನ್ನಾಕೆ ಆಮೇಲೆ ಹೇಳಿದ್ದು. ಅಂದರೆ ಒಂದು ಹೆಣ್ಣು ಒಂದು ಗಂಡು ಅಂತ ಇವರಿಗೆ ಅಂದರೆ ನನ್ನಾಕೆಗೂ ಮಗಳಿಗೂ ಗೊತ್ತಾಗಿ ಬಿಟ್ಟು. ಒಂದು ಹೆಣ್ಣು ಒಂದು ಗಂಡು ಅಂದರೆ ಏನು ಚೆನ್ನ ಅಲ್ಲವೇ ಅಂತ ಇವರು ಗುಸುಗುಸು ಖುಷಿ ಪಟ್ಟರು. ಖುಷಿ ಪಡೋದಿರಲಿ ಬಳಗಕ್ಕೆ  ಸುದ್ದಿ ಹಬ್ಬಿಬಿಡ್ತು.

ಅವಳಿ ಮಕ್ಕಳ ಹೆರಿಗೆಗೆ ಮಗಳು ಹೆದರಬಾರದು ಅಂತ ನಾನು ಮಗಳ ಅಪ್ಪ ಆಗಿ ಧೈರ್ಯ ತುಂಬುತ್ತಿದ್ದೆ. ಅದು ಹೇಗೆ ಅಂದರೆ ಅದ್ಯಾರೋ ಫೇಸ್ ಬುಕ್‌ನಲ್ಲಿ ಹಾಕಿದ್ದ ಒಟ್ಟಿಗೆ ಹದಿನೆಂಟು ಮಕ್ಕಳನ್ನು ಹೆತ್ತಿದ್ದ ಒಂದು ಹೆಂಗಸಿನ ಹೆರಿಗೆ ಫೋಟೋ ಅವಳಿಗೆ ತೋರಿಸಿ ಮಗೂ ಬಿ ಕರೇಜಿಯಸ್ ಅಂತ ಧೈರ್ಯ ಹೇಳುತ್ತಿದ್ದೆ. ಪಾಪ ಮಗು ಅದನ್ನು ನೋಡಿ ಪೂರ್ಣ ಬಿಳಿಚಿಕೊಂಡು ಥರಥರ ನಡುಗಬೇಕಾದರೆ ನನ್ನಾಕೆ ಎಂಟ್ರಿಯಾಗಬೇಕೇ? ಎರಡು ದಿವಸ ಪೂರ್ತಿ ಮನೇಗೆ ಬಂದ ನೆಂಟರು ಪಂಟರು ಸ್ನೇಹಿತರು ಸೇರಿಕೊಂಡು ನನಗೆ ಜನ್ಮ ನಿಖಾಲಿಸಿಬಿಟ್ಟರು!

ಮಕ್ಕಳು ಗರ್ಭದಲ್ಲಿ ಆರು ತಿಂಗಳು ಕಳೆದ ನಂತರ {ಆರರ ನಂತರ} ವಾರಕ್ಕೊಮ್ಮೆ ಚೆಕ್‌ಅಪ್‌ಗೆ ಬರಬೇಕು ಅಂತ ಡಾಕ್ಟರು ಆದೇಶಿಸಿದ್ದರು. ಅದರಿಂದ ವಾರಕ್ಕೊಮ್ಮೆ ಹೋಗೋದು ಅವರಿಗೆ ದಕ್ಷಿಣೆ ಕೊಟ್ಟು ಬರೋದೂ ನಡೀತು. ತಮಾಷೆ ಗೊತ್ತಾ ಒಂದು ಮಗೂಗೆ ತಗೊಳ್ಳೋ ಫೀಸಿನ ಎರಡರಷ್ಟು ಅವಳಿ ಮಕ್ಕಳಿಗೆ ತೊಗೊಳ್ಳೋದು.

ನನ್ನ ಲೆಕ್ಕದ ಪ್ರಕಾರ ಇವರು ಹಾಫ್ ಅಂದರೆ ಅರ್ಧ ತಗೋಬೇಕು ಒಟ್ಟಿಗೆ ಎರಡು ಮಕ್ಕಳು ಸಿಗ್ತಾರೆ, ಅವರ ಸಮಯ ಅಷ್ಟೊಂದು ಉಳಿಸ್ತಾ ಇದೀವಿ ಅಂತ ನನ್ನ ಲಾಜಿಕ್ಕು.. ಆದರೆ ಡಾಕ್ಟರ ಹತ್ತಿರ ನನ್ನ ಲಾಜಿಕ್ಕು ಹೇಳೋದಿಕ್ಕೆ ಯಾರೂ ಬಿಡಲಿಲ್ಲ!

ಸ್ಕ್ಯಾನಿಂಗು, ಡಾಕ್ಟರ ಕರ್ನಸಲ್ಟೇಷನ್ನು ಇವೆಲ್ಲಾ ಡಬಲ್ಲೂ. ಪಾಪ ಅವರೂ ಬದುಕಬೇಕಲ್ಲಾ ಅಂತ ಸಮಾಧಾನ ಮಾಡ್ಕೋತಿದ್ದೆವು. ಹೆರಿಗೆ ಸಿಸೇರಿಯನ್ ಅಂತ ಮೊದಲೇ ತೀರ್ಮಾನ ಆಗಿದ್ದರಿಂದ ಅದರ ಬಗ್ಗೆ ಅಷ್ಟು ತಲೆ ನೋವು ಬರಿಸಿಕೊಂಡಿರಲಿಲ್ಲ.

ನೋಡಮ್ಮಾ ಹೇಗಾದರೂ ಸ್ವಲ್ಪ ದಿನ ತಡಕೋ, ಮಗೂನ ಬೇಗಲೇ ಹೆರಿಗೆ ಮಾಡಿಸಿದರೆ ಅವಕ್ಕೆ ಬೇರೆ ಟ್ರೀಟ್‌ಮೆಂಟು ಅಗತ್ಯ ಬೀಳುತ್ತೆ ಲಕ್ಷ ಲಕ್ಷ ಖರ್ಚು ಅಂತ ಡಾಕ್ಟರು ಹೆರಿಗೆ ದಿನ ಕೊಂಚ ಮುಂದಕ್ಕೆ ಹಾಕ್ಕೊಂಡೇ ಬಂದರು.. ಡಾಕ್ಟರೇ ತಡಕೊಳ್ಳೋಕ್ಕೇ ಆಗ್ತಿಲ್ಲ ಅಂತ ನನ್ನ ಮಗಳು ದೂರು ಹೇಳಿದಾಗಲೆಲ್ಲಾ ....

ಎಂಟನೇ ತಿಂಗಳು ಮುಗಿದು ಎರಡು ದಿವಸಕ್ಕೆ ನೋಡಿ ಇನ್ನು ಕಾಯೋದು ಬೇಡ, ಹೆರಿಗೆ ಮಾಡಿಸಿ ಬಿಡ್ತೀನಿ ಅಂದರಾ ಡಾಕ್ಟರು? ಮಾರನೇ ದಿವಸ ಬೆಳಿಗ್ಗೇ ಬೆಳಿಗ್ಗೇನೆ ನರ್ಸಿಂಗ್ ಹೋಮಿಗೆ ಹೋದೆವು. ಹಿಂದಿನ ದಿವಸ ರಾತ್ರಿ ಮನೆ ಹತ್ತಿರ ಇರೋ ನರಸಿಂಹ ದೇವರು, ವೆಂಕಟೇಶ ದೇವರು, ಗಣೇಶ ದೇವರು, ರಾಘವೇಂದ್ರ ಸ್ವಾಮಿ, ಸಾಯಿಬಾಬಾ .... ಇವರಿಗೆಲ್ಲಾ ನನ್ನಾಕೆ ಹೋಗಿ ನಮಸ್ಕಾರ ಮಾಡಿ ದೇವರೇ ಕಾಪಾಡಪ್ಪಾ ಅಂತ ಕೇಳಿಕೊಂಡು ಬಂದಿದ್ದಳು.

ಅವಳಿ ಮಕ್ಕಳು ಹುಟ್ಟಿದ ಆ ಕ್ಷಣದ ಸಂತೋಷ ನಿಮ್ಮೊಂದಿಗೆ ಹಂಚಿಕೊಳ್ಳಲೇ ಬೇಕು. ಮಗಳನ್ನ ಲೇಬರ್ ವಾರ್ಡಿಗೆ ಕರಕೊಂಡು ಹೋದರಾ? ಪಕ್ಕದ ರೂಮಿನಲ್ಲಿ ನಾವೆಲ್ಲಾ ಕಾತರ, ಉದ್ವೇಗ, ತಲ್ಲಣ . . .  ಇನ್ನೂ ಏನೇನೋ ಭಾವನೆಗಳಿಂದ ಕಾಯ್ತಾ ಕೂತಿದ್ದೆವಾ? ಅದೇ ಸಮಯದಲ್ಲಿ ಯಾವುದೋ ಫೋನು ಬಂತು ಅಂತ ನಾನು ಆಚೆ ಬಂದೆನಾ?

ಅದೇ ಸಮಯದಲ್ಲಿ ಮಕ್ಕಳು ಅವಳಿ ಮಕ್ಕಳು ಭೂಮಿಗೆ ಬಂದವಾ?

ಡಾಕ್ಟರು ಮೊದಲು ಒಂದು ಮಗೂನ ಆಚೆ ತಂದು ನೋಡಿ ಗಂಡು ಮಗು ಅಂತ ತೋರಿಸಿ, ಅದರ ತೂಕ ಹೇಳಿ ಒಳಗೆ ಹೋದರಾ? ಮತ್ತೆ ಐದು ನಿಮಿಷ ಬಿಟ್ಟುಕೊಂಡು ಆಚೆ ಇನ್ನೊಂದು ಮಗೂನ ಬಟ್ಟೇಲಿ ಸುತ್ತಿಕೊಂಡು ತಂದರಾ? ನೋಡಿ ಎರಡನೇದು ಇದೂ ಗಂಡು ಅಂದರಾ?

ನಮ್ಮ ಕುಟುಂಬದ ಯಾರಿಗೂ ಇದನ್ನ ನಂಬಲೇ ಆಗಿಲ್ಲ. ಒಂದು ಬಾಯ್, ಒಂದು ಗರ್ಲ್ ಅಂತ ಮೈಂಡ್‌ಸೆಟ್ ಆಗಿತ್ತಲ್ಲ !

ಫೋನು ಮುಗಿಸಿ ಒಳಗೆ ಬಂದೆನಾ? ಎಲ್ಲಿ ಅಲೆಯೋಕ್ಕೆ ಹೋಗಿದ್ರೀ? ಅಂತ ಯಾರು ಸಿಡುಕಿದ್ದು ಅಂತ ಹೇಳೋದು ಬೇಡ, ನಿಮಗೇ ಗೊತ್ತು.

ಹೀಗೆ ಫೋನು ಬಂದಿತ್ತು. . . .ಅಂತ ತೊದಲಿದೆ.

ಎಲ್ಲಾ ಇದೇ ಸಮಯದಲ್ಲೇ ಫೋನು ಮಾಡೋಕ್ಕೆ ಕಾದಿರುತ್ವೆ ಯಾವೋಳು ಅವಳು?

ಬಿಡು ಯಾವೋಳು ಅನ್ನೋದು ಬೇಡ, ಒಳಗಿಂದ ಏನಾದರೂ ನ್ಯೂಸು ಬಂತಾ? ಇಂತ ಸಮಯದಲ್ಲಿ ನೆಂಟರೆದುರು ನಾನು ತುಂಬಾ ಡಿಪ್ಲೊಮೇಟಿಕ್

ಆಗಿರ್ತೀನಿ. ಬಂಧೂ ಬಳಗದ ಎದುರು ನಮ್ಮ ಮರ್ಯಾದೆ ನಾವು ಕಾಪಾಡಿಕೊಳ್ಳದೇ ಯಾವನೋ ದಾಸಯ್ಯ ಕಾಪಾಡ್ತಾನ್ಯೇ ?

ಅದಕ್ಕೇ ಫೋನು ತರಬೇಡಿ ಅಂತ ಬಡಕೊಂಡೆ, ಹೆರಿಗೆ ಆಯ್ತು, ಆದರೆ ....

ಆದರೇನು ಅದೇನೂ ?. . . . ಅಂದೆ.

ಎರಡೂ ಗಂಡು ಕೂಸು ಅಂತ ಹೇಳಿದರು. . . . ಅಂದಳು.

ಹೇಗಿದ್ದರೂ ಡಾಕ್ಟರು ಈಗ ಆಚೆ ಬರ್ತಾರೆ, ಅವರನ್ನ ನೀವೇ ಕೇಳಿ ..... ಅಂದರು. ನನಗೆ ಅಪರೂಪಕ್ಕೆ ಈ ಹಿರಿಯನ ಸ್ಥಾನ ಸಿಕ್ಕಿಬಿಡುತ್ತೆ.. ಆಗಲಿ ಅಂದೆ.

ಡಾಕ್ಟರು ಆಚೆ ಬಂದರಾ, ನನ್ನನ್ನು ನೋಡಿ ಕಂಗ್ರಾಟ್ಸ್ ಅಂದರಾ? ಕೈಕುಲುಕಿದರಾ?

ಸಾರ್ ಯಾವ ಮಕ್ಕಳು? ಅಂದೆ.

ಏನು ಹಾಗಂದರೆ? ಅಂತ ಕೇಳಿದರು.

ನನ್ನಾಕೆ ತಲೆಚಚ್ಚಿಕೊಂಡು ಮಕ್ಕಳ ಜೆಂಡರ್ ಕೇಳ್ತಿದಾರೆ ಅಂತ ವಿವರಣೆ ನೀಡಿದಳು.

ಆಗಲೆ ಹೇಳಿದೆನಲ್ಲಮ್ಮಾ? ಎರಡೂ ಗಂಡು ಮಕ್ಕಳು ಒಂಬತ್ತೂ ನಲವತ್ತೊಂದು ಒಂದು, ಒಂಬತ್ತೂ ನಲವತ್ತೈದು ಇನ್ನೊಂದು .... ಅಂತ ಅವರು ಹುಟ್ಟಿದ ಸಮಯ ಹೇಳಿ ಮುಂದೆ ನಡೆದರು. ಇದೊಂದು ರೀತಿ ನಮಗೆ ಷಾಕ್ ಆಯ್ತಲ್ಲಾ . . . .

ಆಸ್ಪತ್ರೇಲಿ ಮಗು ಬದಲಾಗಿದೆಯಾ ?

ಇಡೀ ನರ್ಸಿಂಗ್ ಹೋಮ್ ಒಂದು ಸುತ್ತು ಹಾಕಿದೆ. ಅಲ್ಲಿ ಬೇರೆ ಇನ್ಯಾವುದೂ ಹೆರಿಗೆ ಆಗಿಲ್ಲ ಅಂತ ಕನ್‌ಫರ್ಮ್ ಮಾಡಿಕೊಂಡೆ. ಆಯಾಗಳಿಗೆ, ಕಸಗುಡಿಸುವವರಿಗೆ, ನರ್ಸುಗಳಿಗೆ ಕೈತುಂಬ ಕಾಣಿಕೆ ನೀಡಿ, ಮಕ್ಕಳು ನಮ್ಮದೇ ಅಂತ ಖಾತ್ರಿ ಪಡಕೊಂಡೆ.

ಆದರೆ ಈ ಸುದ್ದಿ ಮಾತ್ರ ಈ ವರೆಗೂ ಯಾರಿಗೂ ನಾನು ಬಾಯಿ ಬಿಟ್ಟೇ ಇಲ್ಲ. ನೀವೂ ಸಹ ಈ ಗುಟ್ಟು ಯಾರ ಬಳಿಯಲ್ಲೂ ಹೇಳಬೇಡಿ, ನೀವು ನನಗೆ ಆಪ್ತರು ಅಂತ ನಾನು ಜಾಸೂಸ್ ಮಾಡಿದ್ದು ಹೇಳಿದ್ದೀನಿ, ಈ ಸುದ್ದಿ ನಮ್ಮ ಮನೇಲೋ ಅಥವಾ ನಮ್ಮ ನೆಂಟರಿಗೋ ಗೊತ್ತಾದರೆ ಮೊದಲೇ ಅದು ಒಂದು ಸೀಬೈಟೂ ಹೀಗೇ ಮಾಡಿರುತ್ತೆ ಅಂತ ಖಂಡಿತ ಹೇಳೇ ಹೇಳ್ತಾರೆ ಅನ್ನುವ ಖಾತ್ರಿ ನನಗಿದೆ.

ಈಗ ನಮ್ಮ ಮನೇಗೆ ಅವಳಿ ಜವಳಿ ಕೂಸು ಬಂದು ಒಂದು ವರ್ಷ ಆಯಿತು. ಈ ಗುಟ್ಟು ಕಾಪಾಡಿ ಕೊಂಡಿದ್ದೀನಿ.

ಮಕ್ಕಳು ಆದ ಸುದ್ದೀನ ನೆಂಟರು ಇಷ್ಟರಿಗೆ ಹೇಳಬೇಕಲ್ಲಾ ? ಸುದ್ದೀ ಕೇಳಿದ ನನ್ನ ಗೆಳೆಯ ಒಬ್ಬ ಕೂಡಲೇ ಒಂದು ಹೊಸಾ ಪದವನ್ನು ನಮ್ಮ ಸಾಹಿತ್ಯ ಲೋಕಕ್ಕೆ ನೀಡಿದಾ ರೀ ಹೋ ಅವಳೀತಾತಾ  ಗಂಡವಳೀ ತಾತಾ . ಅಂತ!

ಅವಳಿ ಮಕ್ಕಳ ಲಾಲನೆ ಪಾಲನೆ ಅವುಗಳು ಕೊಟ್ಟ ಸಂತೋಷ ಇವುಗಳ ಬಗ್ಗೆ ಯಾಕೆ ನೀವು ಹೇಳಲಿಲ್ಲ ಅಂತ ನೀವು ಕೇಳ್ತೀರಿ ಅಂತ ಗೊತ್ತು. ಅಯ್ಯೋ ಅದೊಂದು ಬೇರೆಯದೇ ಆದ ಪ್ರಪಂಚ ಕಾಣ್ರೀ; ಅದರ ಬಗ್ಗೆ ಮುಂದಿನ ಸಲ ಸಿಕ್ತೀರಲ್ಲಾ ಆಗ ಚೆನ್ನಾಗಿ, ವಿಷದವಾಗಿ ಬಾಯಿತುಂಬಾ ಹೇಳ್ತೀನಿ. . . . .

■